ಮೇಲುಕೋಟೆ-ಒಂದು ಸಾಂಸ್ಕೃತಿಕ ಅಧ್ಯಯನ

(ಇತಿಹಾಸ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ)

ಸಂಶೋಧಕ

ಬಿ.ಎಸ್. ಸುನಿಲ್ ಕುಮಾರ್

ಮಾರ್ಗದರ್ಶಕರು

ಡಾ. ಎಸ್. ಅಂಜನೇಯ

ಕರ್ನಾಟಕ ಸಂಘ (ರಿ), ಮಂಡ್ಯ.

...ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

2007-08

516

ಮೇಲುಕೋಟೆ-ಒಂದು ಸಾಂಸ್ಕೃತಿಕ ಅಧ್ಯಯನ

(ಇತಿಹಾಸ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ನಿಬಂಧ)

ಸಂಶೋಧಕ

ಬಿ.ಎಸ್. ಸುನಿಲ್ ಕುಮಾರ್

ಮಾರ್ಗದರ್ಶಕರು

ಡಾ. ಎಸ್. ಆಂಜನೇಯ

ಕರ್ನಾಟಕ ಸಂಘ (ರಿ)., ಮಂಡ್ಯ.

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

2007-08

ಮಾರ್ಗದರ್ಶಕರ ಪ್ರಮಾಣ ಪತ್ರ

"ಮೇಲುಕೋಟೆ - ಒಂದು ಸಾಂಸ್ಕೃತಿಕ ಅಧ್ಯಯನ" ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಶ್ರೀ ಬಿ.ಎಸ್. ಸುನಿಲ್ ಕುಮಾರ್ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧದ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 6/9/2008
ಸ್ಥಳ : ಮೈಸೂರು.

S. Anjaneya.
(ಡಾ. ಎಸ್. ಆಂಜನೇಯ. ಎಂ.ಎ., ಪಿ.ಎಚ್.ಡಿ.)
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು,
ಇತಿಹಾಸ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು
ಮೈಸೂರು.

ಸಂಶೋಧಕನ ಪ್ರಮಾಣ ಪತ್ರ

ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿರುವ ಮಂಡ್ಯದ ಕರ್ನಾಟಕ ಸಂಘವು ನಡೆಸುತ್ತಿರುವ ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ 2007-08ನೇ ಸಾಲಿಗೆ ಬಿ.ಎಸ್.ಸುನಿಲ್ ಕುಮಾರ್, ಎಂ.ಫಿಲ್. ಅಭ್ಯರ್ಥಿಯಾಗಿ ನಾನು ಪ್ರವೇಶ ಪಡೆದಿರುತ್ತೇನೆ. **''ಮೇಲುಕೋಟೆ - ಒಂದು ಸಾಂಸ್ಕೃತಿಕ ಅಧ್ಯಯನ''** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಡಾ॥ ಎಸ್.ಆಂಜನೇಯ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ನಿಬಂಧವನ್ನು ರಚಿಸಿರುತ್ತೇನೆ. ಈ ನಿಬಂಧವನ್ನಾಗಲೀ, ನಿಬಂಧದ ಅಧ್ಯಾಯಗಳನ್ನಾಗಲಿ ಬೇರೆ ಯಾವ ಗ್ರಂಥಗಳು ಹಾಗೂ ನಿಯತಕಾಲಿಕೆಗಳಲ್ಲಿ ಪ್ರಕಟಿಸಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ: ~~09/09/2008~~ ಮಂಡ್ಯ

ದಿನಾಂಕ: 09/09/2008

B.S. Sunil Kumar

(ಬಿ.ಎಸ್.ಸುನಿಲ್ ಕುಮಾರ್)

ಇತಿಹಾಸ ಎಂ.ಫಿಲ್ ಅಭ್ಯರ್ಥಿ

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

ಕರ್ನಾಟಕ ಸಂಘ (ರಿ)., ಮಂಡ್ಯ.

ವಿಷಯ ಸೂಚಿ

ಅಧ್ಯಾಯ: 1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಅಧ್ಯಾಯ: 1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಬ್ರಹ್ಮಾಂಡವು ತನ್ನ ಒಡಲಲ್ಲಿ ಅನೇಕಾನೇಕ ರಹಸ್ಯಗಳನ್ನು ಅಡಗಿಸಿಕೊಂಡಿದೆ. ಅವುಗಳಲ್ಲಿ ಕೆಲವನ್ನು ಮಾನವ ತನ್ನ ವೈಜ್ಞಾನಿಕ, ವೈಚಾರಿಕ, ಸಂಶೋಧನಾತ್ಮಕ ಗುಣದಿಂದ ಅರಿತು ವಿಶ್ಲೇಷಿಸಿದ್ದಾನೆ. ಆದ್ದರಿಂದ ಅವು ದೃಗ್ಗೋಚರವೆನಿಸಿವೆ. ಯುಗ ಯುಗಗಳೇ ಕಳೆದರೂ ಈ ಜಗತ್ತು ಇನ್ನೂ ತನ್ನ ಗುಟ್ಟುಗಳನ್ನು ಸಂಪೂರ್ಣವಾಗಿ ಬಿಟ್ಟುಕೊಟ್ಟಿಲ್ಲ. ಛಲಬಿಡದ ಮಾನವ ಬೌದ್ಧಿಕ ನೆಲೆಗಟ್ಟಿನಲ್ಲಿ ಕಾಣಲಾಗದ ಅನೇಕ ಅಗೋಚರ ಸಂದೇಹಗಳಿಗೆ ತಾತ್ವಿಕ ವಲಯದಲ್ಲಿ ಸಮಾಧಾನವನ್ನು ಕಾಣುತ್ತಲೇ ಬಂದಿದ್ದಾನೆ.

ಸಂಸ್ಕೃತಿ ಎಂದರೆ ವ್ಯಕ್ತಿಯ ಬುದ್ಧಿವಿಕಾಸ ಹಾಗೂ ಮಾನಸಿಕಪಕ್ವತೆ. ಅದು ಹೃದಯವನ್ನು ಸಂಸ್ಕರಿಸುವ, ಹೃದಯವನ್ನು ತಟ್ಟುವ ಹಾಗೂ ಮಹಾಸ್ಫೂರ್ತಿಯನ್ನು ನೀಡುವ ಶಕ್ತಿಯುಳ್ಳದ್ದು. ಜೀವನದ ಪ್ರತಿಯೊಂದು ಸನ್ನಿವೇಶದಲ್ಲಿಯೂ ಮನುಷ್ಯನ ಮನೋಭಾವವೂ, ವರ್ತನೆಯೂ ಔಚಿತ್ಯ ಪೂರ್ಣವಾಗುವಂತೆ ಮಾಡುವ ಪ್ರಯತ್ನವೇ ಸಂಸ್ಕೃತಿ[1].''ಸಂಸ್ಕೃತಿಯು ಮನಸ್ಸನ್ನು ತಿಕ್ಕಿ ತೊಳೆದು ಶುಚಿ ಮಾಡುವ ಕೆಲಸ'' ಎನ್ನುತ್ತಾರೆ ಕವಿ ಡಿ.ವಿ.ಜಿ. ಸಂಸ್ಕೃತಿಯ ಬಗ್ಗೆ ದಾರ್ಶನಿಕ ಮ್ಯಾತ್ಯೂ ಅರ್ನಾಲ್ಡನ ಅಭಿಪ್ರಾಯ ಹೀಗಿದೆ - '' ಬುದ್ಧಿಗೆ ತಿಳುವಳಿಕೆಯನ್ನು ಸಂಪಾದಿಸಿ ಕೊಡಬೇಕೆಂಬ ಶುದ್ಧ ವಿಜ್ಞಾನಾಕಾಂಕ್ಷೆಯ ಬಲದಿಂದ ಮಾತ್ರವೇ ಅಲ್ಲದೆ; ಜನಕ್ಕೆ ಒಳ್ಳೆಯದನ್ನು ಮಾಡಬೇಕೆಂಬ ಸಮಾಜ ಹಿತಾಕಾಂಕ್ಷೆಯ ಮತ್ತು ಧರ್ಮಾಕಾಂಕ್ಷೆಯ ಬಲದಿಂದಲೂ ಪ್ರೇರಿತವಾಗಿ ನಡೆಯತಕ್ಕದ್ದು ಸಂಸ್ಕೃತಿ.

ಒಂದು ನಾಡಿನ ಸಾಂಸ್ಕೃತಿಕ ಅಧ್ಯಯನವೆಂದರೆ ಅಲ್ಲಿ ಬಾಳಿದ ಜನರ ಬದುಕಿನ ಅಧ್ಯಯನವೆಂದೇ ಅರ್ಥ. ಆ ಜನರ ನೋವು - ನಲಿವು, ಸುಖ - ದುಃಖ, ಆಚಾರ - ವಿಚಾರ, ರೀತಿ - ನೀತಿ, ವ್ಯವಹಾರ - ವಿಹಾರ ಮೊದಲಾದವುಗಳು ಅಲ್ಲಿ ಮಡುಗಟ್ಟಿರುತ್ತವೆ. ಮಾನವ ಜಾತಿಗೆ ಬೇಕಾದ ಉನ್ನತ ಜೀವನ ಮೌಲ್ಯಗಳನ್ನು ಭಾರತೀಯ ಸಂಸ್ಕೃತಿಯು ಜಗತ್ತಿಗೆ ನೀಡಿದೆ. ನೀತಿ, ನಿಯಮ ಹಾಗೂ ಉನ್ನತ ಚಾರಿತ್ರ್ಯಗಳನ್ನು ಎತ್ತಿ ಹಿಡಿಯುವುದು ಭಾರತೀಯ ಸಂಸ್ಕೃತಿ. ಭರತಖಂಡದ ಸಂಸ್ಕೃತಿಯ ಸಾರಸರ್ವಸ್ವವನ್ನು ಒಂದು ಮಾತಿನಲ್ಲಿ ಸಂಗ್ರಹಿಸಿ

ಹೇಳಬಹುದಾದರೆ 'ಸಮನ್ವಯ ಸಂಸ್ಕೃತಿ' ಎನ್ನಬಹುದು. ''ಅನೇಕತೆಯಲ್ಲಿ ಏಕತೆ'' - ಇದೇ ಭಾರತೀಯ ಸಂಸ್ಕೃತಿಯ ವ್ಯಾಪಕ ದೃಷ್ಟಿಗೆ ಮೂಲ ಸೂತ್ರ [2].

ಇಂತಹಾ ಪರಂಪರೆಯಲ್ಲಿ ವಿಜೃಂಭಿಸಿದ ಮೇಲುಕೋಟೆಯು ಪೌರಾಣಿಕವಾಗಿ, ಐತಿಹಾಸಿಕವಾಗಿ ಸಾಂಸ್ಕೃತಿಕ ದೃಷ್ಟಿಯಿಂದ ಭವ್ಯತೆಯನ್ನು ಪಡೆದಿದೆ. ಮೇಲುಕೋಟೆ ಕರ್ನಾಟಕರಾಜ್ಯದ, ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೋಕಿನಲ್ಲಿದೆ. ಈ ಕ್ಷೇತ್ರ ಕಾವೇರಿ ನದಿಗೆ ಉತ್ತರದಲ್ಲಿ, ಸಮುದ್ರ ಮಟ್ಟದಿಂದ ಸುಮಾರು 3589 ಅಡಿ ಎತ್ತರದಲ್ಲಿದೆ. ಯದುಗಿರಿ ಎಂದು ಕರೆಯಲ್ಪಡುವ ಇದು ಚಾರಿತ್ರಿಕ, ಧಾರ್ಮಿಕ ಮಹತ್ವದ ಸ್ಥಳ. ಶ್ರೀ ವೈಷ್ಣವಯತಿ, ವಿಶಿಷ್ಟಾದ್ವೈತ ಸಿದ್ಧಾಂತ ಪ್ರತಿಪಾದಕರಾದ ಆಚಾರ್ಯ ರಾಮಾನುಜರ ಕರ್ಮಭೂಮಿ, ಪವಿತ್ರತಾಣ. ವಿಶಿಷ್ಟ ಸಾಂಸ್ಕೃತಿಕ ಸ್ಥಳವಾದ ಮೇಲುಕೋಟೆಗೆ ಪ್ರಾಚೀನ ಕಾಲದಿಂದಲೂ ಪೂರಕ ವಾತಾವರಣ ಒದಗಿಬರುತ್ತಿತ್ತು. ಪುರಾಣಗಳಿಂದ ಪ್ರಾರಂಭವಾಗಿ, ರಾಮಾನುಜರಿಂದ ಮೆರುಗು ಪಡೆದು, ರಾಜಾಶ್ರಯದಲ್ಲಿ ಪ್ರೋತ್ಸಾಹಿತಗೊಂಡು ಇಂದಿಗೂ ತನ್ನ ಮೂಲ ಪರಂಪರೆಯನ್ನು ಉಳಿಸಿಕೊಂಡಿದೆ. ನೂರೆಂಟು ಪ್ರಸಿದ್ಧ ಶ್ರೀ ವೈಷ್ಣವ ಕ್ಷೇತ್ರಗಳಲ್ಲಿ ರಾಮಾನುಜರಿಗೆ ಪ್ರಿಯವಾದ ನಾಲ್ಕು ಕ್ಷೇತ್ರಗಳಲ್ಲಿ ಮೇಲುಕೋಟೆಯೂ ಒಂದು. ಉಳಿದ ಮೂರೆಂದರೆ ಕಂಚಿ, ತಿರುಪತಿ, ಮತ್ತು ಶ್ರೀರಂಗಂ.

ಉದ್ದೇಶ:

ಪ್ರಸ್ತುತ 'ಮೇಲುಕೋಟೆ - ಒಂದು ಸಾಂಸ್ಕೃತಿಕ ಅಧ್ಯಯನ' ಎನ್ನುವ ಪ್ರಬಂಧದಲ್ಲಿ ಪ್ರಸ್ತಾಪಿಸಲು ನಿರ್ಣಯಿಸಿರುವ ಉದ್ದೇಶಗಳು ಕೆಳಗಿನಂತಿವೆ.

ಮೇಲುಕೋಟೆಯ ಪೌರಾಣಿಕ ಪ್ರಾಚೀನತೆಯನ್ನು ಗುರುತಿಸುವುದು. ಪ್ರಾಗೈತಿಹಾಸ ಕಾಲದ ನೆಲೆಯಾಗಿ ನಿರೂಪಿಸುವುದು ಹಾಗೂ ಮೇಲುಕೋಟೆಯ ಹೆಸರಿನ ಅವಲೋಕನ, ವಿವಿಧ ಕಾಲ ಘಟ್ಟದಲ್ಲಿ ಮೇಲುಕೋಟೆಯ ಚಾರಿತ್ರಿಕ ಬೆಳವಣಿಗೆಯನ್ನು ವಿಶ್ಲೇಷಿಸುವುದು ನಮ್ಮ ಮೊದಲ ಹಂತದ ಉದ್ದೇಶವಾಗಿದೆ.

ಮೇಲುಕೋಟೆಯ ಅಧಿಕೃತ ಇತಿಹಾಸ ಆರಂಭವಾದುದು ರಾಮಾನುಜಾಚಾರ್ಯರಿಂದ. ಆಚಾರ್ಯರು ಕರ್ನಾಟಕಕ್ಕೆ ಬರಲು ಕಾರಣಗಳ ಸ್ಪಷ್ಟೀಕರಣ, ರಾಮಾನುಜರು ಮೇಲುಕೋಟೆಗೆ ಬಂದ ದಾರಿ, ಇಲ್ಲಿಗೆ ಬರುವ ಮುನ್ನ ರಾಮಾನುಜರ

ನೆಲೆಗೆ ಶಾಸನಾಧಾರಗಳಿಂದ ನಿರೂಪಣೆಯ ಉದ್ದೇಶವಿದೆ. ಆಚಾರ್ಯರು ಮೇಲುಕೋಟೆಗೆ ಬರಲು ಕಾರಣಗಳ ಹೋಲಿಕೆ ಹಾಗೂ ಮೇಲುಕೋಟೆಗೆ ಬರುವ ಮುನ್ನ ರಾಮಾನುಜರಿಗೆ ಇದರ ಸ್ಥಳ ನಿರ್ದೇಶನಗೊತ್ತಿತ್ತು ಎಂದು ನಿರೂಪಿಸುವುದು. ಹಾಗೆಯೇ ರಾಮಾನುಜರ ಸಹೃದಯತೆಯನ್ನು ಕಾರಣಗಳ ಮೂಲಕ ಗುರುತಿಸುವ ಉದ್ದೇಶಗಳನ್ನು ಹೊಂದಿದೆ.

ಹೊಯ್ಸಳ ಅರಸು ಬಿಟ್ಟಿದೇವನು ಆಚಾರ್ಯರಿಂದ ಪ್ರಭಾವಿತನಾದನು. ಮುಂದೆ ವೈಷ್ಣವ ಧರ್ಮಕ್ಕೆ ಮಂತಾಂತರಗೊಂಡು, ಆಚಾರ್ಯರಿಗೆ ಆಶ್ರಯ ನೀಡಿ ಅವರ ಮೂಲಕ ಮೇಲುಕೋಟೆಯನ್ನು ಜೀರ್ಣೋದ್ಧಾರ ಮಾಡಿಸಿದನು. ಈ ಹಂತದಲ್ಲಿ ಮೆರೆದ ಧಾರ್ಮಿಕ ಸಮನ್ವಯತೆ ಹಾಗೂ ಧರ್ಮ, ಸಮಾಜ ಮತ್ತು ಸಂಸ್ಕೃತಿಗೆ ಇವರ ಅಪೂರ್ವ ಕೊಡುಗೆಗಳನ್ನು ಶಾಸನಾಧಾರಗಳಿಂದ ವಿಶ್ಲೇಷಿಸುವುದು. ವಿಜಯನಗರದ ಅರಸರು ಹಿಂದೂಧರ್ಮರಕ್ಷಕರಾಗಿ ಪ್ರವರ್ಧಮಾನಕ್ಕೆ ಬಂದರು. ಇವರ ಕಾಲದಲ್ಲಿ ವೈಷ್ಣವ ಧರ್ಮ ತನ್ನ ಪರಾಕಾಷ್ಠತೆಯ ಹಂತವನ್ನು ತಲುಪಿತು. ಇವರು ಮೇಲುಕೋಟೆಗೆ ಉದಾರ ದಾನ ದತ್ತಿ ನಿಡಿ ಒಂದು ವಿಶಿಷ್ಟ ಸಾಂಸ್ಕೃತಿಕ ಕೇಂದ್ರವಾಗಿಸಿದರು. ವಿಶಿಷ್ಟ ಕೆತ್ತನೆಗೆ ಹೆಸರಾದ ಇವರ ಕಾಲದಲ್ಲಿ ಮೇಲುಕೋಟೆ ದೇವಾಲಯದ ಕಲೆ ಮತ್ತು ವಾಸ್ತುಶಿಲ್ಪದ ಪ್ರೌಢಿಮೆಯನ್ನು ಗುರುತಿಸುವವು. ಮುಂದೆ ಮೈಸೂರು ಒಡೆಯರು ನಾರಾಯಣನ ಭಕ್ತರಾಗಿದ್ದು ಇಲ್ಲಿನ ಸಾಂಸ್ಕೃತಿಕ ಹಿರಿಮೆಯನ್ನು ಇಮ್ಮಡಿಗೊಳಿಸಿದರು. ಇವರ ಕೊಡುಗೆಗಳನ್ನು ಶಾಸನಾಧಾರಗಳಿಂದ ನಿರೂಪಿಸುವುದು. ಮುಸ್ಲೀಂ ದೊರೆಯ ಕಾಲದಲ್ಲಿಯೂ ಮೇಲು ಕೋಟೆಯು ಪ್ರೋತ್ಸಾಹಗೊಂಡಿತು. ಮುಸ್ಲೀಂ ದೊರೆಗಳ ಧಾರ್ಮಿಕ ಸಹಿಷ್ಣುತೆಯನ್ನು ಗುರುತಿಸುವ ಉದ್ದೇಶಗಳನ್ನು ಮಾಡಲಾಗಿದೆ.

ಮೇಲುಕೋಟೆಯ ವಿಶಿಷ್ಟ ಸಂಸ್ಕೃತಿಯ ಮೂಲ ಕೇಂದ್ರ ಇಲ್ಲಿನ ದೇವಾಲಯಗಳು. ಇಲ್ಲಿನ ಸುಂದರ ನಾರಾಯಣಸ್ವಾಮಿ ದೇವಾಲಯವು ಏಕ ಕಾಲದಲ್ಲಿ ನಿರ್ಮಾಣವಾಗಿಲ್ಲ. ಹಾಗೂ ಕಾಲದ ವಿವಿಧ ಹಂತಗಳಲ್ಲಿ ಕಟ್ಟಿದ್ದುದಕ್ಕೆ ಯಾವುದೇ ಸಮರ್ಥ ಆಧಾರಗಳಿಲ್ಲ. ಆದ್ದರಿಂದ ಈ ದೇವಾಲಯದ ಶೈಲಿ ಮತ್ತು ಇತರ ಕಟ್ಟಡಗಳೊಂದಿಗೆ ಹೋಲಿಕೆಗಳ ಮೂಲಕ ಕಾಲ ನಿರ್ಧಾರ ಮಾಡುವ ಉದ್ದೇಶವಿದೆ.

ಇಲ್ಲಿರುವ ಕೊಳ ಮತ್ತು ಮಂಟಪಗಳು ವಿಶೇಷ ಮಹತ್ವವನ್ನು ಪಡೆದಿವೆ. ಕೊಳಗಳು ನೀರಿನ ಆಶ್ರಯತಾಣಗಳಾಗಿದ್ದು, ವೈಜ್ಞಾನಿಕ ಮಹತ್ವವನ್ನು ಹೊಂದಿವೆ [3]. ಹಾಗೆಯೇ

ಮಂಟಪಗಳ ಧಾರ್ಮಿಕ ಮತ್ತು ಸಾಮಾಜಿಕ ಮಹತ್ವವನ್ನು ತಿಳಿಸುವುದು ಪ್ರಬಂಧದ ಪ್ರಮುಖ ಉದ್ದೇಶವಾಗಿದೆ.

ಒಂದು ಜನಾಂಗದ ಸಂಸ್ಕೃತಿಯ ಸಾಧನೆ ಸ್ಪಷ್ಟವಾಗಿ ಗೋಚರ ವಾಗುವುದು ಅವರ ಸಾಹಿತ್ಯದಲ್ಲಿ. ಮಾನವನು ಕಂಡುಕೊಂಡ ಅಭಿವ್ಯಕ್ತಿಯ ಸಾಧನೆಗಳಲ್ಲೆಲ್ಲಾ ಉಕ್ತಿಯೇ ಅತ್ಯಂತ ಪ್ರಭಾವಶಾಲಿಯಾದುದು [4]. ಮೇಲುಕೋಟೆ ದೇವಭಾಷೆ ಸಂಸ್ಕೃತಕ್ಕೆ ಪ್ರಸಿದ್ಧಿ. ಇಲ್ಲಿರುವ ಅಪಾರ ಸಂಸ್ಕೃತ ಸಾಹಿತ್ಯ ಇಲ್ಲಿನ ಸಂಸ್ಕೃತಿಯ ಅಭಿವ್ಯಕ್ತಿಗಳಂತಿವೆ. ಆಧುನಿಕ ಕನ್ನಡ ಸಾಹಿತ್ಯಕ್ಕೆ ಪು.ತಿ.ನ ಅವರ ಕೊಡುಗೆಯನ್ನು ವಿಮರ್ಶಿಸುವ ಪ್ರಯತ್ನ ಮಾಡಲಾಗಿದೆ. ಜಾನಪದ, ವೃತ್ತಿರಂಗ, ಪತ್ರಿಕೋದ್ಯಮದಲ್ಲಿ ಮೇಲುಕೋಟೆ ಸಾಧನೆಯನ್ನು ಹೊರಗೆಳೆಯುವ ಉದ್ದೇಶವಿದೆ.

ಮೇಲುಕೋಟೆಯ ಶೈಕ್ಷಣಿಕ ಸಾಧನೆಯು ಅದರ 'ಜ್ಞಾನಮಂಟಪ' ಎಂಬ ಹೆಸರನ್ನು ಸಾರ್ಥಕಪಡಿಸುವಂತಿದೆ. ಪ್ರಾಚೀನ ಗುರುಕುಲ ಪದ್ಧತಿಗಳು, ಇಲ್ಲಿನ ವೇದ ಪಾಠಶಾಲೆಯ ಸಾಧನೆಗಳು ಇಲ್ಲಿನ ಸಮಾಜದ ಜನತೆಯನ್ನು ಸುಸಂಸ್ಕೃತರನ್ನಾಗಿ ಮಾಡಲು ಕಾರಣವಾದ ಅಂಶಗಳ ಅವಲೋಕನ ಮಾಡಲು ಉದ್ದೇಶಿಸಲಾಗಿದೆ.

ಧರ್ಮವು ಸಂಸ್ಕೃತಿಯ ಅವಿಭಾಜ್ಯ ಅಂಗ. ಮನುಷ್ಯನ ಭಾವನೆಯನ್ನು ಪವಿತ್ರವಾಗಿಸುವುದೇ ಧರ್ಮದ ಕೆಲಸ. ಧರ್ಮಾವಲಂಬಿಯಾದ ಸತ್ಕ್ರಿಯೆಗಳು ಧಾರ್ಮಿಕ ಆಚರಣೆಗಳಾಗುತ್ತವೆ[5]. ಸ್ಥಳದ ನಂಬಿಕೆಗಳು, ಸಿದ್ಧಾಂತಗಳು ಹಾಗೂ ಸಂಸ್ಕೃತಿಯು ಧಾರ್ಮಿಕ ಆಚರಣೆಗಳ ಮೂಲಕ ಅಭಿವ್ಯಕ್ತಗೊಳ್ಳುತ್ತದೆ. ಈ ಹಿನ್ನೆಲೆಯಲ್ಲಿ ಇಲ್ಲಿನ ಆಚರಣೆಗಳನ್ನು ಗುರುತಿಸಲಾಗಿದೆ.

ಧರ್ಮದ ನಿಜ ಸ್ವರೂಪದ ಬೆಳಕಿನಲ್ಲಿ ಸಾಮಾಜಿಕ ಜೀವನವನ್ನು ಹಸನುಗೊಳಿಸುವ ಪ್ರಯತ್ನಗಳು ಇಲ್ಲಿ ನಿರಂತರವಾಗಿ ಸಾಗಿ ಬಂದಿತು. ಆಲಯಾಶ್ರಿತ ಗ್ರಾಮದಲ್ಲಿನ ಸಾಮಾಜಿಕ ಸ್ತರಗಳ ಜೀವನ ಶೈಲಿಯನ್ನು ಸಂಸ್ಕೃತಿಯೊಂದಿಗೆ ಮೇಳವಿಸುವ ಕಾರ್ಯ. ಇಲ್ಲಿನ ವಿಶೇಷ ನೀರಾವರಿ ವ್ಯವಸ್ಥೆಯು ಪ್ರಸ್ತುತ ದಿನಗಳಿಗೆ ಅನುಕರಣೀಯವಾದ ಅಂಶ. ಇವುಗಳ ಸ್ವರೂಪವನ್ನು ತಿಳಿಸುವ ಉದ್ದೇಶ ಹೊಂದಿದೆ.

ಒಟ್ಟಾರೆಯಾಗಿ ಮೇಲುಕೋಟೆಯು ಒಂದು ಐತಿಹಾಸಿಕವಾಗಿ, ಪೌರಾಣಿಕವಾಗಿ, ಧಾರ್ಮಿಕವಾಗಿ, ವೈಶಿಷ್ಟ್ಯಪೂರ್ಣವಾದ ಸ್ಥಳವಾಗಿದೆ. ಇಲ್ಲಿನ ಪ್ರಾಚೀನತೆ ಎಷ್ಟು,

ರಾಮಾನುಜರು ಇದರ ಸಾಕಾರಕೆ ಎಷ್ಟು ಕಾರಣರು, ಇಲ್ಲಿನ ಸಂಸ್ಕೃತಿಗೆ ರಾಜರ ಕೊಡುಗೆ ಎಷ್ಟು, ಸಾಂಸ್ಕೃತಿಕ ಪರಂಪರೆಗೆ ದೇವಾಲಯ, ಶಿಕ್ಷಣ, ಸಾಹಿತ್ಯಗಳ ಕೊಡುಗೆಯನ್ನು ತಿಳಿಸುವುದೆ ಅಧ್ಯಯನದ ಮೂಲ ಉದ್ದೇಶವಾಗಿದೆ.

ವ್ಯಾಪ್ತಿ:

ಮೇಲುಕೋಟೆಯು ಪ್ರಾಚೀನ ಪುಣ್ಯ ಕ್ಷೇತ್ರ. ಇದು ಪೌರಾಣಿಕ ಪ್ರಾಚೀನತೆಯನ್ನು ಹೊಂದಿದೆ. ನಾರದಪುರಾಣ, ಮತ್ಸ್ಯಪುರಾಣ, ಪದ್ಮಪುರಾಣ, ಆಗಮಗಳಲ್ಲಿಯೂ ಮೇಲುಕೋಟೆ ಉಲ್ಲೇಖಿತವಾಗಿದೆ. ಬೃಹತ್ ಶಿಲಾಯುಗದ ಕುರುಹುಗಳು ಹಾಗೂ ಉಪಕರಣಗಳು, ಬರಹಗಳು ಇಲ್ಲಿ ಲಭ್ಯವಿದ್ದು ಇದರ ಇತಿಹಾಸಕಾಲ ಕ್ರಿಸ್ತಪೂರ್ವಕ್ಕೆ ಸೇರಿಕೊಂಡಿದೆ. ಹೊಗರಿದೇವಾಲಯದ ಬಳಿ ಇರುವ ಮಾನವನ ರೇಖಾಚಿತ್ರ ಇದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ. ನಂತರ ಮೌರ್ಯರ ಅಧೀನದಲ್ಲಿದ್ದುದು, ಮೈಸೂರು ಪ್ರಾಂತ್ಯ ಮೌರ್ಯರ ರಾಜ್ಯಕ್ಕೆ ಸೇರಿದ್ದ ಅಂಶ ಪೂರಕವಾಗಿದೆ. ಮೌರ್ಯರ ನಂತರ ಗಂಗರ ಕಾಲದವರೆಗಿನ ಇತಿಹಾಸ ಸ್ಪಷ್ಟವಾಗಿ ಗುರುತಿಸಲಾಗಿಲ್ಲ.

ಮುಂದೆ ಮೇಲುಕೋಟೆಯು ಗಂಗರ ಪ್ರಭಾವಕ್ಕೆ ಒಳಗಾಯಿತು. ಗುಹಾಂತರ ದೇವಾಲಯದ ಪ್ರಯತ್ನ ಇದಕ್ಕೆ ನಿದರ್ಶನವಾಗಿದೆ. ಚೋಳರ ಪ್ರಭಾವ ಇಲ್ಲಿದ್ದರೂ ಅದು ಪ್ರಖರತೆಯನ್ನು ಪಡೆಯಲಿಲ್ಲ. ಹೊಯ್ಸಳರ ಕಾಲದಲ್ಲಿ ಇಲ್ಲಿನ ಸಂಸ್ಕೃತಿ ವಿಶೇಷ ರಾಜಾಶ್ರಯ ಪಡೆದು ವಿಜೃಂಭಿಸಿತು. ಚೋಳ ದೊರೆಯಿಂದ ಪೀಡಿತನಾಗಿ ಬಂದ ರಾಮಾನುಜಾಚಾರ್ಯರಿಗೆ (ಕ್ರಿ.ಶ.1098) ವಿಷ್ಣುವರ್ಧನನು ಆಶ್ರಯ ನೀಡಿದನು. (1108 - 1114 ಕ್ರಿ.ಶ) ಹೊಯ್ಸಳರ ಆಳ್ವಿಕೆಯಲ್ಲಿ ರಾಮಾನುಜರಿಂದ ಶ್ರೀ ವೈಷ್ಣವ ಕೇಂದ್ರವಾಗಿ ಮಹತ್ವ ಪಡೆದಿದ್ದ ಅಂಶವನ್ನು ಹೊಯ್ಸಳರ ಎಂಟು ಶಾಸನಗಳು ಖಚಿತಪಡಿಸುತ್ತವೆ[6].

ನಂತರ ವಿಜಯನಗರದ ಅರಸರು ಹಾಗೂ ಪ್ರಾಂತ್ಯಾಧಿಕಾರಿಗಳು ಸುಮಾರು 30 ಶಾಸನಗಳನ್ನು ನೀಡಿದ್ದು, ಅವುಗಳಲ್ಲಿ ಐವತ್ತಿಬ್ಬರು, ಶ್ರೀ ವೈಷ್ಣವರನ್ನೊಳಗೊಂಡ ಆಡಳಿತ ಮಂಡಳಿ, ಹನುಮ ಹಾಗೂ ರಾಮಾನುಜಮುದ್ರೆ. ಅಲ್ಲಿ ಬಳಸುತ್ತಿದ್ದ ದೇಶಾಂತ್ರಿ ಮುಂತಾದ ಹತ್ತು ಹಲವು ವಿಷಯಗಳು ಉಲ್ಲೇಖ ಕಂಡು ಬರುವುದರ ಜೊತೆಗೆ ಇಲ್ಲಿನ ಧಾರ್ಮಿಕ ಮಹತ್ವ ಮನದಟ್ಟಾಗುತ್ತದೆ.

ರಾಜಾಶ್ರಯ ಮುಂದುವರಿದು ಮೈಸೂರು ಒಡೆಯರು ವಿಷ್ಣುವಿನ ಆರಾಧಕರಾಗಿದ್ದು ಇಲ್ಲಿನ ದೇವಾಲಯ, ಕಲ್ಯಾಣಿಗಳನ್ನು ಜೀರ್ಣೋದ್ಧಾರ ಮಾಡಿದರಲ್ಲದೆ, ಇಲ್ಲಿನ ಧಾರ್ಮಿಕ ಉತ್ಸವಗಳಿಗೆ ವಿಶೇಷ ಪ್ರೋತ್ಸಾಹ ನೀಡಿದರು. ಮುಂದೆ ಟಿಪ್ಪು ಸುಲ್ತಾನನ ಕಾಲದಲ್ಲಿಯೂ ಪ್ರೋತ್ಸಾಹಿತವಾಗಿ ಮುಂದುವರಿದು ಒಡೆಯರಿಂದ ಮತ್ತಷ್ಟು ವೈಭವ ಪೂರ್ಣವಾಯಿತು. ಸಾಹಿತ್ಯ, ಶಿಕ್ಷಣಕ್ಕೆ ಒಡೆಯರ ಕೊಡುಗೆ ಸ್ಮರಣಾರ್ಹವಾದುದಾಗಿದೆ. ಹಾಗೆಯೇ ತನ್ನ ಸಾಂಸ್ಕೃತಿಕ ಪರಂಪರೆಯನ್ನು ಉಳಿಸಿಕೊಂಡು ಇಂದಿಗೂ ಆಚರಿಸುತ್ತಿದೆ.

ಅಡಿಟಿಪ್ಪಣಿಗಳು:

1. ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ, ತೈಲೂರು ವೆಂಕಟಕೃಷ್ಣ. ಪು.9
2. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ತಿಪ್ಪೇರುದ್ರಸ್ವಾಮಿ ಹೆಚ್. ಪು.66,67
3. ಮೇಲುಕೋಟೆ ಥ್ರೂ ದಿ ಏಜಸ್, ಸಂಸ್ಕೃತ ಸಂಶೋಧನಾ ಸಂಸ್ಥೆ. ಪು.188, 189
4. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಹೆಚ್. ತಿಪ್ಪೇರುದ್ರಸ್ವಾಮಿ. ಪು. 311
5. ಸಿರಿಯೊಡಲು, 63ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸಂಚಿಕೆ. ಪು.266
6. ಕರ್ನಾಟಕ ರಾಜ್ಯ ಗ್ಯಾಸೆಟಿಯರ್. ಮಂಡ್ಯ ಜಿಲ್ಲೆ. ಪು.958

ಅಧ್ಯಾಯ: 2

ಮೇಲುಕೋಟೆ ಪ್ರಾಚೀನತೆ - ಪೌರಾಣಿಕ ವಿವರಣೆ

[illegible]

[illegible]

[illegible]

ಅಧ್ಯಾಯ: 2

ಮೇಲುಕೋಟೆ ಪ್ರಾಚೀನತೆ - ಪೌರಾಣಿಕ ವಿವರಣೆ

2.1 ಮೇಲುಕೋಟೆ ಭೌಗೋಳಿಕ ಪರಿಸರ:

ದಖನ್ ಪ್ರಸ್ಥಭೂಮಿಯ ದಕ್ಷಿಣದಂಚಿನಲ್ಲಿರುವ ಮೇಲುಕೋಟೆ ಕರ್ನಾಟಕದ ಪ್ರಾಚೀನ ಪುಣ್ಯಕ್ಷೇತ್ರ. ಇದೊಂದು ನಿಸರ್ಗರಮಣೀಯವಾದ ತಾಣ. ಎತ್ತರವಾದ ಬೆಟ್ಟದ ಸಾಲು. ಅಲ್ಲಲ್ಲಿ ಮುಗಿಲೆತ್ತರವಾದ ಮರಗಳು, ಬಿರುಸಾಗಿ ಬೀಸುವ ತಂಗಾಳಿ, ನೂರಾರು ಕಲ್ಯಾಣಿಗಳು, ಪುಷ್ಕರಣಿಗಳು ಹಳೆಯದಾದರೂ ಓರಣವಾದ ಊರು. ಇದು ಕರ್ನಾಟಕದ ಪ್ರಾಚೀನ ಸಾಂಸ್ಕೃತಿಕ ಕೇಂದ್ರಗಳಲ್ಲಿ ಅತ್ಯಂತ ಪ್ರಮುಖವಾದುದು.

ಮೇಲುಕೋಟೆಯು ಸಮುದ್ರಮಟ್ಟದಿಂದ 3579 ಅಡಿ ಎತ್ತರದಲ್ಲಿದೆ. ಇದು ಕಂದು ಬಣ್ಣದ ಗ್ರಾನೈಟ್ ಶಿಲೆಯ ಮೇಲಿದೆ. ಇದು ಕರ್ನಾಟಕ ರಾಜ್ಯ, ಮಂಡ್ಯ ಜಿಲ್ಲೆಯಿಂದ ಪಶ್ಚಿಮಕ್ಕೆ 35 ಕಿ.ಮೀ. ದೂರದಲ್ಲಿದೆ. ಇದು 12^0.40 ಎಫ್ ಎನ್ ಅಕ್ಷಾಂಶ 76^0. 43 ಎಫ್ ಇ ರೇಖಾಂಶಗಳಲ್ಲಿ ನೆಲೆಸಿದೆ. ಇಲ್ಲಿರುವ ಬೆಟ್ಟವು 3589 ಅಡಿಗಳಷ್ಟು ಎತ್ತರದಲ್ಲಿದೆ. ಈ ಬೆಟ್ಟಗಳು ಬೂದು ಹಾಗೂ ಕಂದು ಬಣ್ಣದ ಶಿಲೆಗಳಿಂದ ರಚಿತವಾಗಿದೆ [1].

ಈ ಪ್ರಸ್ಥಭೂಮಿಯು ಆರ್ಕೀಯನ್ ಕಾಲಕ್ಕೆ ಸೇರಿದ್ದು 1 ಸಾವಿರ ಮಿಲಿಯನ್ ವರ್ಷಗಳಷ್ಟು ಹಳೆಯದು ಎನ್ನಲಾಗಿದೆ. ಇದು ಪುರಾಣ ಮತ್ತು ಆಗಮಗಳ ಕಾಲಗಣನೆಗೆ ಹೊಂದಿಕೆಯಾಗಿದೆ. ಈ ಪ್ರದೇಶಕ್ಕೆ 'ಶೀಲ್ಡ್ ಏರಿಯಾಸ್' ಎಂದು ಕರೆಯಲಾಗುತ್ತದೆ. 'ರಾಷ್ಟ್ರೀಯ ಪ್ರಾಚ್ಯ ವಸ್ತು' ಎಂದು ಘೋಷಿತವಾಗಿರುವ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿರುವ ಕಲ್ಲು ಸಹ ಈ ಪ್ರದೇಶದ ಕಲ್ಲಿಗೆ ಹೊಂದಿಕೆಯಾಗಿದೆ.

ಪುರಾಣದಲ್ಲಿ ಉಲ್ಲೇಖಿತವಾಗಿರುವಂತೆ ಗರುಡನು ಶ್ವೇತದ್ವೀಪದಿಂದ ಬಿಳಿಮಣ್ಣನ್ನು ಇಲ್ಲಿಗೆ ತಂದನು ಎಂಬುದು ಐತಿಹ್ಯ. ಈಗಲೂ ಈ ಮಣ್ಣು ಇಲ್ಲಿದ್ದು ವೈಷ್ಣವರು ಈ ಮಣ್ಣಿನಿಂದಲೇ ನಾಮವನ್ನು ತಯಾರಿಸುತ್ತಾರೆ. ಶ್ರೀ ವೇದಾಂತ ದೇಶಿಕರು ತಮ್ಮ ''ಸಂಕಲ್ಪ ಸೂತ್ರ ಸೂರ್ಯೋದಯ'' ಎಂಬ ಗ್ರಂಥದಲ್ಲಿ ಈ ಸ್ಥಳದ ಕುರಿತು ಹೀಗೆ ಹೇಳಿದ್ದಾರೆ. ''ಯಾದವಾದ್ರಿಯು ಕರ್ನಾಟಕಕ್ಕೆ ಸುಂದರ ಕರ್ಣಕುಂಡಲದಂತಿದೆ.''

2.2 ಮೇಲುಕೋಟೆ – ಪೌರಾಣಿಕ ವಿವರಣೆ:

ಅನಾದಿಕಾಲದಿಂದಲೂ ಪ್ರಪಂಚವನ್ನು ಅನೇಕ ಸಮಸ್ಯೆಗಳು ಬಾಧಿಸುತ್ತಿವೆ. ಅವುಗಳನ್ನು ಎದುರಿಸುವುದೇ ಮಾನವರ ಸವಾಲುಗಳು ಆಗಿದ್ದವು. ಅಂತಹಾ ಸವಾಲುಗಳನ್ನು ಎದುರಿಸಲು ಸಮಾಜ ಕಂಡುಕೊಂಡ ಮಾರ್ಗಗಳೂ ಇತಿಹಾಸವನ್ನೇ ನಿರ್ಮಿಸಿವೆ. ಸಮಸ್ಯೆ - ಸವಾಲುಗಳ ಸಂದಿಗ್ದ ಹಂತದಲ್ಲೇ ನಂಬಿಕೆಗಳು ಹುಟ್ಟಿಕೊಳ್ಳುತ್ತವೆ. ನಂಬಿಕೆಗಳ ಬೆನ್ನಲ್ಲೇ ಪುರಾಣ, ಕಾವ್ಯಗಳು ಸೃಷ್ಟಿಯಾಗುತ್ತವೆ. ಹಾಗಾಗಿ ಪುರಾಣಗಳು ಸುಳ್ಳಿನ ಕಂತೆಯಲ್ಲ. ಬದುಕಿನ ಹಲವಾರು ಪ್ರಶ್ನೆಗಳಿಗೆ ಉತ್ತರ ರೂಪದ ಸಮಾಧಾನವೇ ಆಗಿದೆ [2].

ಮಾನವ ಆ ರೀತಿಯ ತಾತ್ವಿಕ ಸಮಾಧಾನದ ಮುಖ್ಯ ನೆಲೆಗಳಲ್ಲಿ ಪುರಾಣಗಳೂ ಒಂದು. ಪುರಾಣಗಳಲ್ಲಿ ದೊರೆಯುವ ಸಂಗತಿಗಳ ಅವಲೋಕನದಿಂದ ಮೇಲುಕೋಟೆಯ ಪ್ರಾಚೀನತೆ, ಪರಂಪರೆ, ಸಂಸ್ಕೃತಿ ಮತ್ತು ವಿಶಿಷ್ಟತೆಯ ಪರಿಚಯವಾಗುತ್ತದೆ.

''ಪುರಾಣ ಕೇವಲ ಸೃಷ್ಟಿಕ್ರಿಯೆಯನ್ನು ಅಥವಾ ದೇವರ ಲೀಲೆಗಳನ್ನಷ್ಟೇ ಹೇಳುವುದಿಲ್ಲ. ಅದು ಮಾನವನ ಬೆಳವಣಿಗೆಯ ಒಂದು ಹಂತವನ್ನ ಹೇಳುತ್ತದೆ'' ಪುರಾಣಗಳೆಂದರೆ ಅಮೂರ್ತ ಭಾವನೆಗಳನ್ನು ಮೂರ್ತಗೊಳಿಸುವ ಸಲುವಾಗಿ ಕಟ್ಟಿದ ವಿವರಣೆ. ಐತಿಹ್ಯ ಹಾಗೂ ಮತಧರ್ಮಗಳೊಡನೆ ಅವಿನಾಭಾವ ಸಂಬಂಧ ಪುರಾಣದ್ದು. ಚರಿತ್ರೆಯ ಅಂಶ ಐತಿಹ್ಯಕ್ಕೆ ಆಧಾರವಾದರೆ ಐತಿಹ್ಯ ಪುರಾಣಕ್ಕೆ ಆಧಾರ. ಮೂಲತಃ ಇವೆರಡೂ ಕಟ್ಟು ಕಥೆಯನ್ನಾಧರಿಸಿದ್ದರೂ ಅವುಗಳಾಚೆಗೆ ಚಿಂತನೆಯೂ ಸೇರಿರುತ್ತದೆ. ಆದ್ದರಿಂದ ಪುರಾಣಗಳನ್ನು ಸುಳ್ಳೆಂದು ನಿರಾಕರಿಸದೆ ಮಾನವ ಬೆಳವಣಿಗೆಯ ಹಂತಗಳನ್ನು ಗುರುತಿಸಲು ನೆರವಾಗುವುದರಿಂದ 'ಮಾನವನ ವಿಕಾಸದ ಚರಿತ್ರೆಯೇ ಪುರಾಣ' ಎನ್ನುತ್ತಾರೆ ಆಂಡ್ರೂ ಲ್ಯಾಂಗ್. 'ಪುರಾಣ ಎನ್ನುವುದು ಚರಿತ್ರೆಯ ಮಾತೃಕೆ' ಎಂದು ಟಿ.ಎಸ್. ವಿಲಿಯಟ್ ಸಮರ್ಥಿಸಿದ್ದಾರೆ.

''ಪುರಾಣಗಳ ಮೂಲಕ ಚಾರಿತ್ರಿಕ ಘಟನೆಗಳನ್ನು ಸೈದ್ದಾಂತಿಕ ಹಿನ್ನೆಲೆಯನ್ನು ಪುನರ್‌ರಚಿಸಲು ಸಾಧ್ಯವಿದೆ [3].''

ಪೌರಾಣಿಕ ಅಧ್ಯಯನದಿಂದ ಪ್ರಚುರವಾಗುವ ಪ್ರಮುಖ ಅಂಶಗಳೆಂದರೆ, ಸಂಸ್ಕೃತಿಯ ಅವಿಭಾಜ್ಯ ಅಂಗವಾದ ಧರ್ಮ, ದೇವರುಗಳ ಖಚಿತ ನಂಬಿಕೆ ತರುತ್ತದೆ.

ದೇವಾಧೀದೇವತೆಗಳ ಮಹಿಮೆ ಮತ್ತು ಧರ್ಮದ ಆಚರಣೆಯಿಂದ ಸಿಗಬಹುದಾದ ಲೌಕಿಕ - ಅಲೌಕಿಕ ಫಲಗಳ ಅರಿವು ಕೊಡುತ್ತದೆ. ದೇವತೆಗಳ ಮತ್ತು ಸ್ಥಳದ ಉಲ್ಲೇಖದಿಂದಾಗಿ ಪ್ರಾಪ್ತವಾಗುವ ಪ್ರಾಚೀನತೆ ಮತ್ತು ಪಾವಿತ್ರ್ಯತೆಯ ಅರಿವಾಗುತ್ತದೆ. ಅಂತಿಮವಾಗಿ ಪೌರಾಣಿಕ ಕಥೆಗಳ ಕಲ್ಪನೆಯ ಹಿಂದೆ ಅರ್ಥವಾಗದ ಜಗತ್ತನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವಿದೆ.

ಈ ಆಧಾರಗಳ ಪರಿಧಿಯಲ್ಲಿ ಮೇಲುಕೋಟೆಯ ಪೌರಾಣಿಕ ಪ್ರಾಚೀನತೆಯನ್ನು ಅವಲೋಕಿಸಿದಾಗ ಅನೇಕ ಮಹತ್ವದ ಸಂಗತಿಗಳು ಮನದಟ್ಟಾಗುತ್ತವೆ.

ಮೇಲುಕೋಟೆ ಮತ್ತು ಪುರಾಣಗಳು

ನಾರದೀಯ ಪುರಾಣ:

ನಾರದೀಯ ಪುರಾಣದಲ್ಲಿ ಅಂತರ್ಗತವಾಗಿರುವ ಯಾದವಗಿರಿ ಮಹಾತ್ಮೆಯ ಭಾಗದಲ್ಲಿ ಭೂವೈಕುಂಠವೆಂದು ಕರೆಯಲ್ಪಡುವ ಯಾದವಗಿರಿಯು ವರ್ಣಿಸಲ್ಪಟ್ಟಿರುವುದು. ಇದು ಹನ್ನೆರಡು ಅಧ್ಯಾಯಗಳನ್ನು ಹೊಂದಿದ್ದು ಮೊದಲ ಅಧ್ಯಾಯದಲ್ಲಿ ಬದರಿ ನಾರಾಯಣನು ವ್ಯಾಸಾದಿ ಮಹರ್ಷಿಗಳಿಗೆ ಈ ಸ್ಥಳದ ವೈಶಿಷ್ಟ್ಯವನ್ನು ವಿವರಿಸಿದ್ದಾನೆ. ಈ ಕ್ಷೇತ್ರದ ವಿವಿಧ ಸ್ಥಳಗಳು, ತೀರ್ಥಗಳು ಈ ಕ್ಷೇತ್ರಕ್ಕೆ ಕೊಡುಗೆ ನೀಡಿದ ಮಹಾಪುರುಷರು. ಅವರು ಅನುಭವಿಸಿದ ಫಲಗಳ ಕುರಿತು ಸಂತೋಷಭರಿತನಾಗಿ ಭಗವಂತನು ಋಷಿಗಳಿಗೆ ಉಪದೇಶಿಸಿದ್ದಾನೆ[4].

ಮುಂದೆ 2.3.4ನೇ ಅಧ್ಯಾಯಗಳಲ್ಲಿ ಭಗವಂತನ ಆಜ್ಞೆಯಂತೆ ಬ್ರಹ್ಮದೇವನು ಸನತ್ಕುಮಾರನಿಗೆ ಕೊಟ್ಟ ದಿವ್ಯ ವಿಮಾನ (ಮೂರ್ತಿ) ಮತ್ತು ಮೂರ್ತಿಯನ್ನು ಕಲ್ಯಾಣತೀರ್ಥದ (ಮೇಲುಕೋಟೆಯ) ತೀರದಲ್ಲಿ ಪೂರ್ವಾಭಿಮುಖವಾಗಿ ಸ್ಥಾಪಿಸಿದ ವಿಚಾರವನ್ನು ವಿವರಿಸಲಾಗಿದೆ[5].

6ನೇ ಅಧ್ಯಾಯದಲ್ಲಿ ಶ್ರೀರಾಮನು ರಾವಣನೊಂದಿಗೆ ಯುದ್ಧ ಮುಗಿಸಿ ವಿಭೀಷಣನೊಂದಿಗೆ ಅಯೋಧ್ಯೆಗೆ ಬಂದಾಗ ದಿವ್ಯಮೂರ್ತಿಯೆಂದನ್ನು ವಿಭೀಷಣನಿಗೆ ಕೊಡುತ್ತಾನೆ. ಮತ್ತೊಂದು ಪ್ರಸಂಗದ ಪ್ರಕಾರ ಶ್ರೀರಾಮನು ಅದನ್ನು ಹನುಮಂತನಿಗೆ

ಕೊಟ್ಟನು. ಹನುಮಂತನು ಕುಶ ಮಹಾರಾಜನಿಗೆ ಕೊಡಲಾಗಿ ತನ್ನ ಮಗಳು ಕನಕ ಮಾಲಿನಿಯನ್ನು ಯದು ವಂಶೋತ್ಪನ್ನನಾದ ಯದುಶೇಖರನಿಗೆ ವಿವಾಹ ಮಾಡಿ ಬಳುವಳಿಯಾಗಿ ಮೂರ್ತಿಯನ್ನು ಕೊಟ್ಟನು. ಮೇಲುಕೋಟೆಯಲ್ಲಿರುವ ಶ್ರೀರಾಮಪ್ರಿಯನಾದ ಈ ಮೂರ್ತಿಯು ಯದುವಂಶಕ್ಕೆ ಬಂದು ಕ್ರಮವಾಗಿ ಶ್ರೀಕೃಷ್ಣನಿಂದಲೂ ಆರಾಧಿಸಿದ ವಿಚಾರವನ್ನು ಒಳಗೊಂಡಿದೆ.

7 ಮತ್ತು 8ನೇ ಅಧ್ಯಾಯಗಳಲ್ಲಿ ಇಲ್ಲಿನ ಸುಂದರ ಪುಷ್ಕರಣಿಗಳ ಕುರಿತ ವಿಚಾರಗಳಿವೆ. ಯಾದವಗಿರಿಯಲ್ಲಿರುವ ಅಷ್ಟತೀರ್ಥಗಳು ಅಷ್ಟಾಕ್ಷರಿಮಂತ್ರಗಳನ್ನು ಹೇಳುತ್ತವೆ. ಇವುಗಳಲ್ಲಿ ವೇದ ಪುಷ್ಕರಿಣೀ ಎಂದು ಕರೆಯಲಾಗುವ ಕಲ್ಯಾಣಿಯೂ ಸೇರಿರುವ ವಿಚಾರಗಳಿವೆ[6].

9ನೇ ಅಧ್ಯಾಯದಲ್ಲಿ ದತ್ತಾತ್ರೇಯನ ಅವತಾರವೆತ್ತಿದ ಮಹಾ ವಿಷ್ಣುವು ತ್ರೇತಾಯುಗದಲ್ಲಿ ನಾಲ್ಕು ವೇದಗಳನ್ನೇ ಶಿಷ್ಯರನ್ನಾಗಿ ಮಾಡಿಕೊಂಡು ಅವರಿಗೆ ನಾಲ್ಕು ವೇದಗಳನ್ನು ಈ ಕಲ್ಯಾಣಿತೀರ್ಥದಲ್ಲಿ ಬೋಧಿಸಿದನು. ಆದ್ದರಿಂದ ಈ ತೀರ್ಥಕ್ಕೆ ಕಲ್ಯಾಣಿತೀರ್ಥ ಎಂದು ಹೆಸರಾಯಿತು[7].

ನಾರದೀಯ ಪುರಾಣದಲ್ಲಿ ಅಂತರ್ಗತವಾಗಿರುವ ಯಾದವಗಿರಿ ಮಹಾತ್ಮ್ಯದಲ್ಲಿ ಮೇಲುಕೋಟೆಯ ವೈಶಿಷ್ಟತೆಯ ಸ್ಪಷ್ಟ ಅರಿವಾಗುತ್ತದೆ. ಯಾದವಗಿರಿ ಎಂದು ಹೆಸರಾಗಿದ್ದ ಮೇಲುಕೋಟೆಯ ಪ್ರಾಚೀನತೆಯನ್ನು ಪುರಾಣಗಳಲ್ಲಿಯೂ ಗುರ್ತಿಸಲು ಈ ಗ್ರಂಥದಲ್ಲಿನ ವಿಚಾರಗಳು ಉಪಯುಕ್ತವಾಗಿವೆ.

ಮತ್ಸ್ಯ ಪುರಾಣ:

ಮತ್ಸ್ಯಪುರಾಣವು 12 ಅಧ್ಯಾಯಗಳನ್ನು ಒಳಗೊಂಡಿದೆ. ಇದರಲ್ಲಿ ಕೃಷ್ಣನು ಜರಾಸಂಧನನ್ನು ಸೋಲಿಸಿದ ನಂತರ ಪ್ರಶಾಂತ ಸ್ಥಳಕ್ಕೆ ಹೋಗುವ ಬಯಕೆಯಾಗುತ್ತದೆ. ಕೃಷ್ಣನು ಬಲರಾಮನೊಂದಿಗೆ ಗೋಮಂತಗಿರಿಗೆ ಬಂದು ನೆಲೆಸುತ್ತಾನೆ. ಮುಂದೆ ಇದೆ ಯಾದವಗಿರಿಯಾಯಿತು ಎಂಬ ಉಲ್ಲೇಖವಿದೆ. ಇಲ್ಲಿ ಹೇಳಲಾಗಿರುವ 66 ಕೋಟಿ ತೀರ್ಥಗಳಲ್ಲಿ ಮೇಲುಕೋಟೆಯ ಕಲ್ಯಾಣಿತೀರ್ಥ, ದರ್ಭತೀರ್ಥ, ಪಾಲಾಸತೀರ್ಥ, ಪದ್ಮತೀರ್ಥ, ನಾರಾಯಣತೀರ್ಥ, ಮೈತ್ರೇಯ ತೀರ್ಥಗಳ ಉಲ್ಲೇಖವಿದೆ.

ಪದ್ಮಪುರಾಣ:

ಪದ್ಮಪುರಾಣದಲ್ಲಿಯೂ ಸಹ ಮೇಲುಕೋಟೆಯ ಕಲ್ಯಾಣಿ ತೀರ್ಥದ ವೈಶಿಷ್ಟ್ಯತೆಯನ್ನು ಸಾರುವ ಅಂಶವಿದೆ. ಮಾಘ ಮತ್ತು ಮಕರ ತಿಂಗಳಿನಲ್ಲಿ ಕಲ್ಯಾಣಿಯಲ್ಲಿ ಸ್ನಾನ ಮಾಡುವುದು ಶ್ರೇಷ್ಠವಾದುದಾಗಿದೆ. ಮತ್ತು ಭಕ್ತರ ಎಲ್ಲಾ ಪ್ರಾರ್ಥನೆಗಳು ಈ ಕಾಲದಲ್ಲಿ ಈಡೇರುತ್ತದೆ ಎಂದು ತಿಳಿಸಲಾಗಿದೆ[8].

ಆಗಮಗಳು ಮತ್ತು ಮೇಲುಕೋಟೆ

ಆಗಮಗಳು ಚಿತ್ತಶುದ್ಧಿಗೆ ಸಾಧಕವಾದ ಧಾರ್ಮಿಕ ವಿಚಾರಗಳ ಜೊತೆಗೆ ಮನೋವಿಕಾಸಕ್ಕೆ ಉತ್ತೇಜಕಗಳಾದ ಶಿಲ್ಪ, ಚಿತ್ರ ಹಾಗೂ ಸಂಗೀತಗಳ ಮೂಲಕ ಜನಪ್ರಿಯವಾಗಿ ಬಳಕೆಯಲ್ಲಿವೆ. ಆಗಮಗಳಲ್ಲಿ ಜಗತ್ತಿನ ಸೃಷ್ಟಿಯಿಂದ ಹಿಡಿದು ಪ್ರಳಯದವರೆಗಿನ ಲೋಕದ ವಿಶಿಷ್ಟ ಆಗುಹೋಗುಗಳ ವಿಮರ್ಶೆಯಿರುತ್ತದೆ [9]. ಆಗಮಗಳಲ್ಲಿರುವ ಹಲವಾರು ವಿಷಯಗಳು ಸ್ಥಳ ಮಹಾತ್ಮೆಯಂತಹ ಪುರಾಣಗಳಲ್ಲಿ ಸಾಂದರ್ಭಿಕವಾಗಿ ಬರುತ್ತದೆ. ಉಪನಿಷತ್ತುಗಳಲ್ಲಿರುವ ದಿವ್ಯ ಆದರ್ಶಗಳು ಬದುಕಿನಲ್ಲಿ ಹಾಸುಹೊಕ್ಕಾಗುವಂತೆ ಮಾಡಿ ಧರ್ಮವನ್ನು ಸಮುದಾಯದ ಉಸಿರಾಗಿಸಿದ್ದೇ ಆಗಮಗಳು.

ವಿಷ್ಣುವನ್ನು ಆರಾಧಿಸುವ 'ಪಾಂಚರಾತ್ರ ಆಗಮ' ಸಂಬಂಧಿಸಿದ 'ಸಾತ್ವತಸಂಹಿತೆ' ಎಂಬ ಗ್ರಂಥಕ್ಕೆ ಬರೆದಿರುವ 'ಈಶ್ವರಸಂಹಿತಾ' ಎಂಬ ಭಾಷ್ಯದಲ್ಲಿ 'ಯಾದವಾಚಲ ಮಹಾತ್ಮ್ಯೆ' ಎಂಬ ಅಧ್ಯಾಯವು ಮೇಲುಕೋಟೆಯ ಬಗೆಗೆ 300 ಶ್ಲೋಕಗಳನ್ನು ಹೊಂದಿದೆ [10]. ಶ್ಲೋಕದಲ್ಲಿ ಮೇಲುಕೋಟೆಯ ಭೌಗೋಳಿಕ ಮತ್ತು ಗೋಪುರಗಳ ಲಕ್ಷಣಗಳ ವಿವರಣೆಯಿದೆ. ಅದೇ ರೀತಿ ಶಿಲ್ಪಶಾಸ್ತ್ರದ ರೀತ್ಯಾ ಮುಖ್ಯ ದೇವಾಲಯ ನಾರಾಯಣ ದೇವಾಲಯದ ವರ್ಣನೆಯಿದೆ ಹಾಗೂ ನರಸಿಂಹಸ್ವಾಮಿ ಬೆಟ್ಟದ ವರ್ಣನೆಯೂ ಇದೆ. ಮೇಲುಕೋಟೆ ದೇವಾಲಯದ ದ್ವಾರ ಮತ್ತು ಕಂಬಗಳಲ್ಲಿ ಇದಕ್ಕೆ ಪೂರಕವಾದ ಅಂಶಗಳಿವೆ. ಈಶ್ವರ ಸಂಹಿತೆಯ 20ನೇ ಅಧ್ಯಾಯದಲ್ಲಿ ವಿಷ್ಣು ನಾರಾಯಣನಾಗಿ ಮೇಲುಕೋಟೆಯಲ್ಲಿ ನೆಲೆಸಿರುವ ವಿಚಾರವಿದೆ.

2.3 ಪ್ರಾಗೈತಿಹಾಸಿಕ ಕಾಲದಲ್ಲಿ ಮೇಲುಕೋಟೆ:

ಪೌರಾಣಿಕ ಹಿನ್ನೆಲೆಯನ್ನು ಹೊಂದಿರುವ ಮೇಲುಕೋಟೆಯಲ್ಲಿ ದೊರೆತಿರುವ ಪ್ರಾಗೈತಿಹಾಸ ಕಾಲದ ಪುರಾವೆಗಳು ಇದರ ಪ್ರಾಚೀನತೆಯನ್ನು ಕ್ರಿಸ್ತಪೂರ್ವ ಯುಗಕ್ಕೆ ಕೊಂಡೊಯ್ದಿರುವುದು ದೃಢಪಟ್ಟಿದೆ. ಯಾವುದೇ ದೇಶದ ಇಲ್ಲವೇ ಪ್ರದೇಶದ ಇತಿಹಾಸ ಸಂಸ್ಕೃತಿಯ ಪುನರ್ರಚನೆಗೆ ಅಲ್ಲಿರುವ ಪುರಾತತ್ವ ಆಧಾರಗಳು ಅವುಗಳ ವೈಜ್ಞಾನಿಕ ಮತ್ತು ವಿಮರ್ಶಾತ್ಮಕ ಅಧ್ಯಯನ ಅತ್ಯಗತ್ಯ [11]. ಪೂರ್ವ ಇತಿಹಾಸದ ಪುರಾವೆಗಳು ಆ ಪ್ರದೇಶದ ಸಾಂಸ್ಕೃತಿಕ ಪರಂಪರೆಗೆ ಸೋಪಾನವಾಗಿದೆ.

ಈ ಭಾಗವು ಪರಿಸರಾತ್ಮಕವಾಗಿ ಪೂರ್ವೇತಿಹಾಸದ ನೆಲೆಗಳಿಗೆ ಮಹತ್ವ ಪಡೆದಿದೆ. ಈ ಕಾರಣದಿಂದ ಈ ಹಂತದ ಇತಿಹಾಸವು ಹೆಚ್ಚು ಆಸಕ್ತಿಯಿಂದ ಕೂಡಿದೆ. ಮಂಡ್ಯ ಜಿಲ್ಲೆಯ ರಂಗನತಿಟ್ಟು, ಶ್ರೀರಂಗಪಟ್ಟಣ, ಹುಳಂಬಳ್ಳಿ, ಹಲಗೂರು, ಬೆಳಕವಾಡಿ, ಕುಂತಿಬೆಟ್ಟ, ಶೆಟ್ಟಹಳ್ಳಿ, ತೊಣ್ಣೂರು, ಮೇಲುಕೋಟೆ, ಹೊಸಕೋಟೆ ಮತ್ತು ಸಿರಗನಹಳ್ಳಿಗಳಲ್ಲಿ ಪ್ರಾಗೈತಿಹಾಸಿಕ ನೆಲೆಗಳನ್ನು ಸಂಶೋಧಕರು ಪತ್ತೆಹಚ್ಚಿರುತ್ತಾರೆ. ಅಲ್ಲದೆಯೇ ಜಿಲ್ಲೆಯ ಹತ್ತಿರದಲ್ಲಿರುವ ತಿರುಮಕೂಡಲು ನೂತನ ಶಿಲಾಯುಗ, ಬೃಹತ್ ಶಿಲಾಯುಗ ಮತ್ತು ಇತಿಹಾಸ ಕಾಲದ ಸಂಸ್ಕೃತಿಗಳ ಸ್ಪಷ್ಟಕುರುಹುಗಳು ದೊರೆತಿದ್ದು ಕಲ್ಲಿನ ಉಪಕರಣಗಳ ಹಂತದಿಂದ ತಾಂತ್ರಿಕ ಬೌದ್ಧಿಕ ಸುಧಾರಣೆಯನ್ನು ಹೊಂದುತ್ತಾ ನಗರ ಸಂಸ್ಕೃತಿಯ ಹಂತಕ್ಕೆ ಸುಮಾರು 2000 ವರ್ಷಗಳ ಅಂತರದಲ್ಲಿ ಹೇಗೆ ಬಂತೆಂಬುದನ್ನು ಇಲ್ಲಿ ಸ್ಥೂಲವಾಗಿ ತಿಳಿಯಲು ಸಾಧ್ಯವಾಗಿದೆ. ಹಾಗೆಯೇ ಬೃಹತ್ ಶಿಲಾಯುಗದ ನೆಲೆಯೆಂದು ಗುರುತಿಸಲ್ಪಟ್ಟಿರುವ ಮೇಲುಕೋಟೆಯು ಸುತ್ತಲಿನ ಪ್ರಾಗೈತಿಹಾಸದ ನೆಲೆಯ ಲಭ್ಯ ಪುರಾವೆಗಳಿಗೆ ಪುಷ್ಟಿನೀಡುವಂತಿದೆ. ದಖನ್ ಪ್ರಸ್ಥಭೂಮಿಯ ದಕ್ಷಿಣದಂಚಿನಲ್ಲಿರುವ ಮೇಲುಕೋಟೆಯು ಪ್ರಾಚೀನ ಕಾಲದಿಂದಲೂ ಐತಿಹಾಸಿಕ ಘಟನೆಗಳಿಗೆ ಪ್ರೇರಕವಾದ ಕಾರಣಗಳನ್ನು ಹೊಂದಿದೆ. ಈ ಪ್ರದೇಶದ ಇತಿಹಾಸ ಸರಣಿಗೆ ಪೂರಕವಾದ ಅಂಶಗಳು ಸಾಕಷ್ಟಿವೆ. ಶಿಲಾಯುಗದ ಕಾಲದ ಸಂಸ್ಕೃತಿಯ ಅವಶೇಷಗಳನ್ನು ಹೊಂದಿರುವ ತುಮಕೂರು ಬೆಟ್ಟಗಳು ಮೇಲುಕೋಟೆಗೆ ಸಮೀಪದಲ್ಲಿವೆ. ಇಲ್ಲಿ ಶಿಲಾಯುಗ ಮತ್ತು ಬೃಹತ್ ಶಿಲಾಯುಗಕ್ಕೆ ಸೇರಿದ ಅವಶೇಷಗಳು ಸಿಕ್ಕಿವೆ.

ಇದಕ್ಕೆ ಪೂರಕವಾಗಿ ಮೇಲುಕೋಟೆಯ ಪೂರ್ವದಿಕ್ಕಿನಲ್ಲಿರುವ ಹೊಗರಮ್ಮ

ದೇವಾಲಯದ ಬಳಿ ಬಂಡೆಯೊಂದರ ಮೇಲಿರುವ ಮಾನವನ ರೇಖಾಚಿತ್ರವು ಬೃಹತ್ ಶಿಲಾಯುಗದ ಕಾಲದ ಸ್ಪಷ್ಟ ಉದಾಹರಣೆಯಾಗಿದೆ [12]. ಹೊಗರಿ ದೇವಾಲಯವು ಶಿಲಾಯುಗದ ಮಾನವನ ನೆಲೆಯಾಗಿತ್ತೆಂದು ಗುರುತಿಸಲಾಗಿದೆ.

ಮೇಲುಕೋಟೆಯ ಬೆಟ್ಟದ ಶ್ರೇಣಿಗೆ ಹೊಂದಿಕೊಂಡಂತಿರುವ ಪಾಂಡವರಗವಿಯು ಬೃಹತ್ ಶಿಲಾಯುಗಕ್ಕೆ ಸೇರಿದ ಮಾನವನ ವಾಸಸ್ಥಾನವಾಗಿದೆ. ಯೋಗಾನರಸಿಂಹ ದೇವಾಲಯಕ್ಕೆ ಹೋಗುವಾಗ ಎಡಕ್ಕಾದಂತಿರುವ ಗವಿಗಳನ್ನು ಪಾಂಡವರ ಗುಡಿಗಳೆಂದು, ಪಾಂಡವರು ಬಳಸುತ್ತಿದ್ದ ಆರು ತಟ್ಟೆಗಳ ಆಕಾರದ ಸವೆದ ಬಂಡೆಯನ್ನು ಸ್ಥಳೀಯವಾಗಿ ತೋರಿಸಲಾಗುತ್ತದೆ. ಆದರೆ ಇವು ಬೃಹತ್ ಶಿಲಾಯುಗಕ್ಕೆ ಸೇರಿದ ಕುರುಹುಗಳಾಗಿವೆ [13]. ಮೇಲುಕೋಟೆಯಲ್ಲಿ ಕಪ್ಪು, ಕೆಂಪು ಹಾಗೂ ಕಪ್ಪು ಮಿಶ್ರಿತ ಕೆಂಪು ಹೊಳಪಿನಿಂದ ಕೂಡಿದ ಮಡಿಕೆ - ಕುಡಿಕೆಗಳು ಲಭಿಸಿದ್ದು ಅವುಗಳು ಮೂಲತಃ ಜೇಡಿಮಣ್ಣಿನಿಂದ ತಯಾರಿಸಲಾಗಿದೆ. ಕೆಳ ಮುಖವಾಗಿ ಬಾಗಿದ ಕಂಠವುಳ್ಳ ಚಪ್ಪಟೆಯಾಕಾರದ ಬೋಗುಣಿ, ತಟ್ಟೆ, ಲೋಟ, ಗಡಿಗೆ, ದುಂಡುತಳದ ಅಗಲ ಬಾಯಿಯ ಹೊಳಪುಳ್ಳ ಸಣ್ಣ ಸಣ್ಣ ಮಡಕೆ, ಮುಚ್ಚಳವುಳ್ಳ ಮಡಿಕೆ ಮುಂತಾದ ನಾನಾ ಮಾದರಿಯ ಮಡಕೆಗಳು ಪತ್ತೆಯಾಗಿದ್ದು ಅವುಗಳಲ್ಲಿ ಕೆಲವಕ್ಕೆ ಎರಡೂ ಬದಿಯಲ್ಲಿ ಹಿಡಿಕೆಗಳಿವೆ. ಮೇಲುಕೋಟೆಯ ಪಾಂಡವರ ಗವಿಪರಿಸರವು ಪ್ರಾಚೀನ ಮಾನವ ನೆಲೆಯಾಗಿದ್ದುದರಲ್ಲಿ ಯಾವುದೇ ಸಂಶಯವಿಲ್ಲ.

2.4 ನಂತರದ ಇತಿಹಾಸಕಾಲದಲ್ಲಿ ಮೇಲುಕೋಟೆ:

ಪ್ರಾರಂಭದಿದಲೂ ಇತಿಹಾಸ ಘಟನೆಗಳಿಗೆ ಪ್ರೇರಕ ಅಂಶಗಳನ್ನು ಹೊಂದಿದ್ದ ಮೇಲುಕೋಟೆಯ ಅಧಿಕೃತ ಇತಿಹಾಸವನ್ನು ಮೌರ್ಯರ ಕಾಲದಿಂದ ಗುರುತಿಸಬಹುದಾಗಿದೆ. ಚಂದ್ರಗುಪ್ತ ಮೌರ್ಯನು ಭದ್ರಬಾಹುವಿನೊಂದಿಗೆ ಬಂದು ಮುಕ್ತಿಹೊಂದಿದ ಸ್ಥಳ ಶ್ರವಣಬೆಳಗೊಳ ಮೇಲುಕೋಟೆಗೆ ಕೇವಲ 25 ಕಿ.ಮೀ ದೂರ ಇದೆ. ಹಾಗೆಯೇ ಅಶೋಕನು ಭೇಟಿನೀಡಿದ್ದ ಎನ್ನಲಾದ ಬ್ರಹ್ಮಗಿರಿಯು ಮೇಲುಕೋಟೆಯಿಂದ ಹೆಚ್ಚು ದೂರದಲ್ಲಿಲ್ಲದಿರುವುದು ಮೇಲುಕೋಟೆಯು ಮೌರ್ಯರ ಆಳ್ವಿಕೆಯಲ್ಲಿದ್ದುದನ್ನು ಸ್ಪಷ್ಟಪಡಿಸುತ್ತದೆ. ಅಶೋಕನ ನಂತರ ಗಂಗರವರೆಗಿನ ಇಲ್ಲಿನ ಇತಿಹಾಸವು ಸ್ಪಷ್ಟವಾಗಿ ತಿಳಿದಿಲ್ಲ.

ಗಂಗರು:

ಸಾಹಿತ್ಯ ಮತ್ತು ಕಲಾ ಪೋಷಕರಾದ ಗಂಗರ ರಾಜಧಾನಿ ತಲಕಾಡು. ಇದು ಮೇಲುಕೋಟೆಗೆ ಸಮೀಪದಲ್ಲಿದೆ. ಮೇಲುಕೋಟೆಯ ಪೂರ್ಣಯ್ಯನ ಹೊಂಡದ ಬಳಿಯಿರುವ ಸಿಂಹಸ್ತಂಭಗಳು ಚೋಳರ ಪ್ರಭಾವವನ್ನು ಮತ್ತು ನರಸಿಂಹಸ್ವಾಮಿ ಬೆಟ್ಟದ ತಪ್ಪಲಿನಲ್ಲಿರುವ ಎರಡಂತಸ್ತಿನ ಜೈನ ಗುಹಾಲಯಗಳು ಗಂಗರ ಪ್ರಭಾವವನ್ನು ಸ್ಪಷ್ಟಪಡಿಸುತ್ತವೆ. ಇವರ ಕಾಲದಲ್ಲಿ ಜೈನರ ಪ್ರಾಬಲ್ಯ ಹೆಚ್ಚಾಗಿದ್ದು ವೈಷ್ಣವ ದೇವಾಲಯಗಳ ಬಗ್ಗೆ ಮೃದುಧೋರಣೆ ಹೊಂದಿದ್ದರು [14].

ಚೋಳರು:

ಕ್ರಿ.ಶ.10ನೇ ಶತಮಾನದಲ್ಲಿ ರಾಜರಾಜ ಚೋಳನ ಕಾಲದಲ್ಲಿ ಇತಿಹಾಸದಿಂದ ಮರೆಯಾದ ಗಂಗರ ತರುವಾಯ ಚೋಳರ ಸಂಸ್ಕೃತಿಯಿಂದ ಮೇಲುಕೋಟೆಯು ಪ್ರಭಾವಿತವಾಯಿತು. ಚೋಳರ ಕಾಲದಿಂದ ಆರಂಭವಾದ ಅಗ್ರಹಾರಗಳ ಕಲ್ಪನೆಯು ಇದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ [15]. ಶ್ರೀವೈಷ್ಣವರ ಪ್ರಭಾವವು ಕರ್ನಾಟಕದ ಮೇಲಾದುದು ಈ ಕಾಲದ ಒಂದು ಮುಖ್ಯ ಘಟ್ಟವಾಗಿರುತ್ತದೆ.

ಹೊಯ್ಸಳರು:

ಕ್ರಿ.ಶ.12ನೇ ಶತಮಾನದಲ್ಲಿ ಪ್ರಬಲರಾದ ಹೊಯ್ಸಳರು ಕರ್ನಾಟಕದ ಸಂಸ್ಕೃತಿಗೆ ಕೊಟ್ಟ ಕೊಡುಗೆ ಸ್ಮರಣಾರ್ಹ. ಧಾರ್ಮಿಕ ಸಹಿಷ್ಣುಗಳಾದ ಇವರ ಕಾಲದಲ್ಲಿ ಚೋಳರ ಕಾಲದಲ್ಲಿ ಪ್ರಬಲವಾಗಿದ್ದ ತಮಿಳು ಸಂಸ್ಕೃತಿಯು ಮತ್ತೆ ಕನ್ನಡ ಸಂಸ್ಕೃತಿಯಿಂದ ಕುಗ್ಗಿದರೂ ರಾಮಾನುಜರ ಕಾಲದ ತಮಿಳರು ಸಂತೋಷದಿಂದಿದ್ದರು. ತೊಂಡನೂರು ಇವರ ರಾಜಧಾನಿಯಾಗಿದ್ದು ಇದು ಮೇಲುಕೋಟೆಯ ದಕ್ಷಿಣಕ್ಕಿದೆ. ಮೇಲುಕೋಟೆಯ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸಿದ ಇವರು, ದೇವಸ್ಥಾನಗಳನ್ನು ಪೋಷಿಸಿ, ಇಲ್ಲಿನ ಸಂಸ್ಕೃತಿಗೆ ವಿಶೇಷ ಪ್ರೋತ್ಸಾಹ ನೀಡಿದರು.

ವಿಜಯನಗರದ ಕಾಲ:

ಇವರ ಕಾಲದಲ್ಲಿ ಮೇಲುಕೋಟೆಯು ಸಾಂಸ್ಕೃತಿಕವಾಗಿ ಸಂತೃಪ್ತವಾಯಿತು. ಇವರ ಕಾಲದಲ್ಲಿ ದೇವಾಲಯದ ನಿರ್ಮಾಣ ಶೈಲಿ ಹಾಗೂ ವಿಸ್ತೀರ್ಣಗಳಲ್ಲಿ ಬದಲಾವಣೆಯಾದವು.

ಎತ್ತರ ಸ್ತಂಭಗಳಲ್ಲಿ ಮತ್ತು ಮಂಟಪಗಳ ನಿರ್ಮಾಣದಲ್ಲಿ ವಿಶೇಷತೆ ಪಡೆದವು. ಇವರ ಕಾಲದಲ್ಲಿ ಶ್ರೀವೈಷ್ಣವ ಧರ್ಮವು ಸಂಪೂರ್ಣ ಸಹಕಾರ ಪಡೆದು ಮತ್ತು ಇಲ್ಲಿಗೆ ನೀಡಿದ ದಾನದತ್ತಿಗಳಿಂದ ಮೇಲುಕೋಟೆಯು ಮುಂಚಿನ ವೈಭವತೆಯನ್ನು ಪಡೆಯಿತು. ತಿಮ್ಮಣ್ಣದಣ್ಣ ನಾಯಕನು ಮೇಲುಕೋಟೆ ವೈಭವವನ್ನು ಇಮ್ಮಡಿಗೊಳಿಸಿದನು [16].

ಒಡೆಯರ ಕಾಲ:

16ನೇ ಶತಮಾನದಲ್ಲಿ ಪ್ರಾರಂಭವಾದ ರಾಜ ಒಡೆಯರು ನಾರಾಯಣನ ಭಕ್ತರಾಗಿದ್ದು ವಿಪುಲ ದಾನದತ್ತಿಗಳನ್ನು ನೀಡಿದ್ದಾರೆ. ರಾಜ ಒಡೆಯರಿಂದ ನೀಡಲ್ಪಟ್ಟ 'ಬಾಸ್ - ರಿಲೀಪ್' ಮಹಾಮಂಟಪದ ಸ್ತಂಭದಲ್ಲಿ ಈಗಲೂ ಕಾಣಬಹುದು. ಮೇಲುಕೋಟೆಯ ಈಗಿನ ದೇವಸ್ಥಾನದ ವೈಭವವು ಮೈಸೂರಿನ ಒಡೆಯರ ಔದಾರ್ಯದಿಂದಲೇ ಬಂದಿರುವುದರಲ್ಲಿ ಸಂಶಯವಿಲ್ಲ. 1759ರಲ್ಲಿ ನಂಜರಾಜಯ್ಯರಿಂದ ಹಿಮ್ಮೆಟ್ಟಿದ ಮರಾಠರು ಮುಂದೆ 1769ರಲ್ಲಿ ಹೈದರಾಲಿಯಿಂದ ಸೋತ ಮರಾಠರು ಮೇಲುಕೋಟೆಯನ್ನು ಲೂಟಿ ಮಾಡಿದರು. ಗುರುತು ಸಿಗದ ಹಾಗೆ ಇಲ್ಲಿನ ಧರ್ಮಕೇಂದ್ರಗಳನ್ನು ಸುಟ್ಟು ಹಾಕಿದ್ದಲ್ಲದೆ ತೇರುಗಳಿಗೂ ಬೆಂಕಿಯಿಟ್ಟು ಅದರ ಕಬ್ಬಿಣದ ಭಾಗವನ್ನು ಸಾಗಿಸಿದರೆನ್ನಲಾಗಿದೆ [17]. ನಂತರ ಬಂದ ಟಿಪ್ಪು ಹಿಂದೂ ದೇವಾಲಯಗಳಿಗೆ ಉದಾರ ಪ್ರೋತ್ಸಾಹ ನೀಡಿದನು. 1785ರ ಶಿಲಾಶಾಸನದಂತೆ ಆನೆಗಳನ್ನು ದಾನವಾಗಿ ನೀಡಿದನೆನ್ನಲಾಗಿದೆ. ಟಿಪ್ಪು ನರಸಿಂಹಸ್ವಾಮಿ ದೇವಾಲಯಕ್ಕೆ ಬೆಳ್ಳಿಯ ಬಟ್ಟಲುಗಳು, ನಗಾರಿ ಮತ್ತು ಆಭರಣಗಳನ್ನು ನೀಡಿದ್ದಾನೆ.

ನಂತರ ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ಮೇಲುಕೋಟೆಯು ಉದಾರ ದಾನದತ್ತಿಗಳಿಂದ ಪ್ರೋತ್ಸಾಹಿತವಾಯಿತು. 1868ರ ತರುವಾಯ ಬ್ರಿಟೀಷ್ ಆಳ್ವಿಕೆಯ ಕಾಲದಲ್ಲಿಯೂ ಯಾವುದೇ ತೊಡಕಿಲ್ಲದೇ ದಾನದತ್ತಿ ಪಡೆಯುವಲ್ಲಿ ಯಶಸ್ವಿಯಾಯಿತು. ಹೀಗೆ ಮೇಲುಕೋಟೆಯು ಹಲವು ರಾಜ ವಂಶಗಳಿಂದ ಆಳ್ವಿಕೆಗೊಳಪಟ್ಟು ಇಂದಿಗೂ ತನ್ನ ಮೂಲ ಸ್ಥಿತಿಯನ್ನು ಕಾಪಾಡಿಕೊಂಡು ಬಂದಿರುವುದು ಸಂತಸದ ವಿಷಯ.

2.5 ಸ್ಥಳನಾಮ ವಿಶೇಷಣ:

ಈ ಸ್ಥಳವು ಪ್ರಾಚೀನ ಸಾಹಿತ್ಯಗಳಲ್ಲಿ ಹಲವು ಹೆಸರುಗಳನ್ನು ಹೊಂದಿದೆ. ಕಾಶಿಮಹಾತ್ಮ್ಯೆಯಲ್ಲಿ ಯದುಶೈಲ ಮತ್ತು ಯಾವಗಿರಿಯೆಂದು, ಪದ್ಮಪುರಾಣದಲ್ಲಿ

ನಾರಾಯಣಗಿರಿಯೆಂದು, ಮತ್ಸ್ಯಪುರಾಣದಲ್ಲಿ ನಾರಾಯಣಪುರ, ಯಾದವ ಭೂಧರ, ನಾರಾಯಣಕ್ಷೇತ್ರ, ಗೋಮಂತಗಿರಿ, ವೈಕುಂಠವರ್ಧನ ಕ್ಷೇತ್ರ, ಯಧುಶೈಲವೆಂದು, ಸಾತ್ವತ ಸಂಹಿತೆಯಲ್ಲಿ ಭೂ ವೈಕುಂಠವೆಂದೂ ಕರೆಯಲಾಗಿದೆ. ವೇದಾದ್ರಿ, ವೇದಾಚಲ, ಮೇಲುಕೋಟೆ, ತಿರುನಾರಾಯಣಪುರ, ಜ್ಞಾನ ಮಂಟಪ, ದಕ್ಷಿಣ ಬದರಿಕಾಶ್ರಮ ಎಂಬ ಹೆಸರುಗಳಿಂದಲೂ ಕರೆಯಲ್ಪಡುತ್ತದೆ.

ನಾಮ ವಿಶೇಷಣ:

ಕೃತಾಯುಗದಲ್ಲಿ ನಾರಾಯಣನ ಸಾನ್ನಿಧ್ಯ ಉಂಟಾಗಿದ್ದರಿಂದ 'ನಾರಾಯಣಾದ್ರಿ' ಎನಿಸಿತು. ತ್ರೇತಾಯುಗದಲ್ಲಿ ದತ್ತಾತ್ರೇಯರು ಈ ಪರ್ವತದಲ್ಲಿ ವೇದಗಳನ್ನು ಉಪದೇಶಿಸಿದ್ದರಿಂದ ಇದು 'ವೇದಾದ್ರಿ' ಎನಿಸಿತು. ದ್ವಾಪರ ಯುಗದಲ್ಲಿ ಯಾದವರು ಬಂದು ನಾರಾಯಣನನ್ನು ಪೂಜಿಸಿದ್ದರಿಂದ 'ಯಾದವಾದ್ರಿ' ಆಯಿತು. ಕಲಿಯುಗದಲ್ಲಿ ರಾಮಾನುಜರು ಬಂದು ಜೀರ್ಣೋದ್ಧಾರ ಮಾಡಿದ್ದರಿಂದ 'ಯತಿಶೈಲ' ಎಂದು ಪ್ರಸಿದ್ಧವಾಯಿತು [18].

ಮೇಲುಕೋಟೆ:

ಈ ಕನ್ನಡ ಶಬ್ದವು (ಶಾಸನ92) ಕ್ರಿ.ಶ.1200. 1219ರಲ್ಲಿ ಕಂಡುಬರುವುದರಿಂದ ಹಿಂದೆಯೇ ಪ್ರಚಾರದಲ್ಲಿದೆ. ರಾಮಾನುಜಾಚಾರ್ಯರು ಮಾಡಿದ ಜೀರ್ಣೋದ್ಧಾರದಲ್ಲಿ ಕೋಟೆ ಬಾಗಿಲು ಕಟ್ಟಿದ ಖರ್ಚು ಬರೆದಿದೆ. ಇದರಿಂದ ಮೊದಲೇ ಈ ಕೋಟೆ ಇರಬಹುದು. (1099 - 1103). ಮೇಲುಕೋಟೆ ಪದವು ಮೇಲಿನ + ಕೋಟೆ =ಮೇಲುಕೋಟೆ ಆಗಿದೆ [19].

ಈ ನಾಮವು ತಮಿಳು ಪದದಿಂದ ಬಂದಿರುವ ಸಾಧ್ಯತೆಯಿದೆ. ತಮಿಳು ಪದಗಳಾದ ಮೆರ್ಕು ಮತ್ತು ಕೊಟ್ಟಿ, ಮೆರ್ಕು ಎಂದರೆ ಪಶ್ಚಿಮ ಮತ್ತು ಕೊಟ್ಟಿ ಎಂದರೆ ಕೋಟೆ. ಈ ಹಿನ್ನಲೆಯಲ್ಲಿ ಚೋಳರು ತಮ್ಮ ಪಶ್ಚಿಮದಲ್ಲಿರುವ ಈ ಊರನ್ನು ಈ ಹೆಸರಿನಿಂದ ಕರೆದಿರಬಹುದೆನ್ನಲಾಗಿದೆ [20].

ದೊಡ್ಡಗರುಡನಹಳ್ಳಿ:

ಈ ಊರಿಗೆ ಈ ಹೆಸರಿನಿಂದಲೂ ಕರೆದಿದ್ದಾರೆ. ಶ್ರವಣಬೆಳಗೊಳದ ಶಾಸನದ ಉಲ್ಲೇಖದಂತೆ ಹೊಯ್ಸಳರ ಕಾಲದಿಲ್ಲಿ ಯೋಧರಿಗೆ 'ಗರುಡ' ಎಂಬ ಪದವನ್ನು

ಉಪಯೋಗಿಸುತ್ತಿದ್ದರು. ಆದ್ದರಿಂದ ಆ ಹೆಸರಿನಿಂದ ಕರೆಯಲ್ಪಟ್ಟ 'ಗರುಡು' ಎಂಬ ಅಂಗರಕ್ಷಕ ಯೋಧ ಪಡೆಯು ಇಲ್ಲಿದ್ದರಿಂದ ಈ ಹೆಸರು ಬಂದಿರಬಹುದು.

ದೊಡ್ಡಗುರುಗಳಹಳ್ಳಿ:

ರಾಮಾನುಜಾಚಾರ್ಯರು ಈ ಊರಿನಲ್ಲಿ ವಾಸಿಸುತ್ತಿದ್ದುದ್ದರಿಂದ ಈ ಹೆಸರು ಬಂದಿರಬಹುದು ಎನ್ನಲಾಗಿದೆ. ಆಚಾರ್ಯರನ್ನು ಬಿಟ್ಟಿದೇವನು ತನ್ನ ಗುರುಗಳಾಗಿ ಸ್ವೀಕರಿಸಿದ ನಂತರ ಅವರನ್ನು ದೊಡ್ಡ ಗುರುಗಳು ಎಂದು ಕರೆಯುತ್ತಿದ್ದರು.

ಐತಿಹ್ಯಗಳು

ಯಾವುದೇ ಸಂಸ್ಕೃತಿಯ ಜೀವ ಅದರ ಸಂಪ್ರದಾಯ. ಭೂತ ಹಾಗೂ ವರ್ತಮಾನದ ಕೊಂಡಿ. ಯಾವುದೇ ಸಮಾಜವು ಯಾವ ಸಂಪ್ರದಾಯವನ್ನು ಅನುಸರಿಸುವುದೋ ಅದು ಆ ಸಮಾಜದ ಸಾಂಸ್ಕೃತಿಕ ಸ್ತರವನ್ನು ಸೂಚಿಸುತ್ತದೆ. ಆದರೆ ಸಂಪ್ರದಾಯವನ್ನು ಇತಿಹಾಸದ ಒಂದು ದಾಖಲೆ ಎಂಬುದಂತೂ ಸ್ಪಷ್ಟ. ಸಾಂಪ್ರದಾಯಿಕ ರೂಪಧಾರಣೆ ಮಾಡಿರುವ ಚಾರಿತ್ರಿಕ ಅಂಶಗಳೇ 'ಐತಿಹ್ಯ [21]. ನೈಜ ಸಂಗತಿಯ ನಂಬಿಕೆಗೆ ಕಲ್ಪನೆಯ ತೆಳು ಮುಸುಕು ಹೊದಿಸಿರುವುದೇ 'ಐತಿಹ್ಯ'. ನಿರ್ದಿಷ್ಟ ಸ್ಥಳದ ಎಲ್ಲಾ ಸಂಗತಿಗಳನ್ನು, ಪ್ರಾದೇಶಿಕ ಸಂಪ್ರದಾಯ ವೈಲಕ್ಷಣಗಳನ್ನು ಹೇಳುವುದು 'ಸ್ಥಳೀಯ ಐತಿಹ್ಯ'ಗಳ ಮುಖ್ಯ ಗುರಿ. ಪ್ರಧಾನ ಸಂಗತಿಗೆ ಪೂರಕವಾದ ಇತರ ಸಂಗತಿಗಳನ್ನು ಪ್ರಾದೇಶಿಕ ಐತಿಹ್ಯ ಸಂಬಂಧಿತ ಪುರಾಣಗಳಲ್ಲಿ ಅಂದರೆ 'ಸ್ಥಳ ಪುರಾಣ'ಗಳಲ್ಲಿ ಕಾಣಬಹುದು.

ಮೇಲುಕೋಟೆಯ ಐತಿಹ್ಯಗಳು:

ಮೇಲುಕೋಟೆಗೆ ಸಮೀಪದ ಧನುಷ್ಕೋಟಿಯ ಬಂಡೆಯ ನಡುವೆ ಸದಾ ಜಿನುಗುವ ನೀರು ಲಕ್ಷ್ಮಣನು ಸೀತೆಯ ದಾಹವನ್ನು ನೀಗಿಸಲು ಹೂಡಿದ ಬಾಣದಂತಾಯಿತು ಎಂಬ ಪ್ರತೀತಿಯಿದೆ. ಯೋಗಾನರಸಿಂಹಸ್ವಾಮಿ ಬೆಟ್ಟಕ್ಕೆ ಹೋಗುವ ಮಾರ್ಗದಲ್ಲಿ ಎಡಕ್ಕೆ ಪಾಂಡವರ ಗುಹೆ ಎಂಬುದೊಂದಿದೆ. ಇದು ಪ್ರಾಚೀನ ಋಷಿಗಳ ಧ್ಯಾನ ಗುಹೆಯಂತೆ ಗೋಚರಿಸಿದರೂ ಇಲ್ಲಿ ಪಾಂಡವರು ತಮ್ಮ ವನವಾಸ ಕಾಲದಲ್ಲಿ ಕೆಲಕಾಲ ತಂಗಿದ್ದರೆಂಬ ನಂಬಿಕೆಯಿದೆ. ಬಂಡೆಯ ಮೇಲೆ ಪಾಂಡವರ 6 ತಟ್ಟೆಗಳನ್ನು ಕೆತ್ತಿರುವುದನ್ನು

ನೋಡಬಹುದು [22]. ಇಲ್ಲಿನ ಸುಪ್ರಸಿದ್ಧ ವೈರಮುಡಿ ಉತ್ಸವದ ಉತ್ಸವ ಮೂರ್ತಿಗೆ ತೊಡಿಸುವ ವೈರಮುಡಿ ಎಂಬ ವಜ್ರ ಖಚಿತವಾದ ಕಿರೀಟವು ಕುರುಕ್ಷೇತ್ರ ಯುದ್ಧದಲ್ಲಿ ಕರ್ಣನ ಬಾಣದಿಂದ ತುಂಡರಿಸಲ್ಪಟ್ಟ ಅರ್ಜುನನ ಕಿರೀಟದ ಮೇಲು ಭಾಗ ಎಂಬ ನಂಬಿಕೆಯಿದೆ. ಗರುಡನು ಶ್ವೇತದ್ವೀಪದಿಂದ ಬಿಳಿಮಣ್ಣನ್ನು ಇಲ್ಲಿಗೆ ತಂದನು ಎಂಬುದು ಪುರಾಣ ನಂಬಿಕೆ. ಈಗಲೂ ಈ ಮಣ್ಣನ್ನು ಎಲ್ಲೆಲ್ಲೂ ಕಾಣಬಹುದು. ವೈಷ್ಣವರು ಇದರಿಂದ ಊರ್ಧ್ವಪುಂಡ್ರ (ನಾಮ) ವನ್ನು ತಯಾರಿಸುತ್ತಾರೆ [42].

ಮೇಲುಕೋಟೆ ಪಕ್ಕಕ್ಕಿರುವ ಸಮಾನ ಎತ್ತರಹೊಂದಿರುವ 'ಗರಿಕಲ್ಲು' ಎಂಬ ಬೆಟ್ಟವಿದೆ. ಈ ಬೆಟ್ಟವು ಹನುಮಂತನು ಸಂಜೀವಿನಿ ಪರ್ವತವನ್ನು ಹೊತ್ತು ಹೋಗುವುವಾಗ ಬಿದ್ದ ಪರ್ವತದ ಭಾಗವೆ 'ಗರಿಕಲ್ಲು ಬೆಟ್ಟ' ಎಂಬ ಐತಿಹ್ಯವಾಗಿದೆ. ಈಗಲೂ ಈ ಪರ್ವತದಲ್ಲಿ ಆಯುರ್ವೇದ ಅಂಶವಿರುವ ಗಿಡ ಮೂಲಿಕೆಗಳಿರುವುದನ್ನು ಕಾಣಬಹುದು.

ಅಡಿಟಿಪ್ಪಣಿಗಳು:

1. ಮೇಲುಕೋಟೆ ಥ್ರೂ ದಿ ಏಜಸ್, ಸಂಸ್ಕೃತ ಸಂಶೋಧನಾ ಸಂಸ್ಥೆ. ಪು - 41.42.43
2. ಆದಿಚುಂಚನಗಿರಿ - ಒಂದು ಸಾಂಸ್ಕೃತಿಕ ಅಧ್ಯಯನ. ಕೆ.ರಾಜೇಶ್ವರಿಗೌಡ. ಪು - 9
3. ಕರ್ನಾಟಕ ಸಂಸ್ಕೃತಿ ಸಮೀಕ್ಷೆ. ಹೆಚ್.ತಿಪ್ಪೇರುದ್ರಸ್ವಾಮಿ. ಪು - 46
4. ಯಾದವಗಿರಿ ಮಹಾತ್ಮ್ಯ. ಶ್ರೀನಿವಾಸಯ್ಯಂಗಾರ್ಯ. ಪು - 2
5. ಅದೇ. ಪು - 3
6. ಮೇಲುಕೋಟೆ ಥ್ರೂ ದಿ ಏಜಸ್. ಸಂಸ್ಕೃತ ಸಂಶೋಧನಾ ಸಂಸ್ಥೆ. ಪು -30
7. ಮೇಲುಕೋಟೆ ಪರಿಚಯ. ಹರಿಪ್ರಿಯ. ಪು -13
8. ಮೇಲುಕೋಟೆ ಥ್ರೂ ದಿ ಏಜಸ್. ಸಂಸ್ಕೃತ ಸಂಶೋಧನಾ ಸಂಸ್ಥೆ. ಪು - 32
9. ಭಾರತೀಯ ಸಂಸ್ಕೃತಿ ದರ್ಶನ. ಪು -69.70
10. ಮೇಲುಕೋಟೆ ಥ್ರೂ ದಿ ಏಜಸ್. ಸಂಸ್ಕೃತ ಸಂಶೋಧನಾ ಸಂಸ್ಥೆ. ಪು -14.15
11. ಸುವರ್ಣ ಮಂಡ್ಯ. ದೇ.ಜ.ಗೌ. ಪು - 35
12. ಕರ್ನಾಟಕ ಗ್ಯಾಜಿಟಿಯರ್. ಮಂಡ್ಯ ಜಿಲ್ಲೆ. ಪು - 39
13. ಅದೇ. ಪು - 957
14. ಅದೇ. ಪು - 957
15. ಮೇಲುಕೋಟೆ ಥ್ರೂ ದಿ ಏಜಸ್. ಪು - 62
16. ಎಫಿಗ್ರಾಫಿಯ ಕರ್ನಾಟಕ. ಸಂಪುಟ - 6, ಪಿಪಿ 74
17. ಕನ್ನಡ ವಿಷಯ ವಿಶ್ವಕೋಶ. ಪು - 1180 (ಸಂ.3)
18. ಯಾದವಗಿರಿ ಜೀರ್ಣೋದ್ಧಾರ. ಪು - 2
19. ಅದೇ. ಪು - 18.19
20. ಮೇಲುಕೋಟೆ ಥ್ರೂ ದಿ ಏಜಸ್. ಪು - 59
21. ಕನ್ನಡ ವಿಷಯ ವಿಶ್ವ ಕೋಶ. ಸಂಪುಟ - 3. ಪು - 252
22. ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ. ತೈಲೂರು ವೆಂಕಟಕೃಷ್ಣ. ಪು - 48
23. ಮೇಲುಕೋಟೆ ಥ್ರೂ ದಿ ಏಜಸ್. ಸಂಸ್ಕೃತ ಸಂಶೋಧನಾ ಸಂಸ್ಥೆ. ಪು - 42

ಅಧ್ಯಾಯ: 3

ಶ್ರೀ ರಾಮಾನುಜಾಚಾರ್ಯರು ಮತ್ತು ಮೇಲುಕೋಟೆ

ಅಧ್ಯಾಯ: 3

ಶ್ರೀ ರಾಮಾನುಜಾಚಾರ್ಯರು ಮತ್ತು ಮೇಲುಕೋಟೆ

ಪೀಠಿಕೆ:

ಕರ್ನಾಟಕದಲ್ಲಿ ಶ್ರೀವೈಷ್ಣವ ತತ್ವಗಳನ್ನು ಪ್ರಚಾರಮಾಡಿ ಅದನ್ನು ಒಂದು ಸುವ್ಯವಸ್ಥಿತ ಧರ್ಮಪಂಥವಾಗಿ ನೆಲೆಗೊಳಿಸಿದ ಮತ್ತು ಈ ನಾಡಿನಲ್ಲಿ ಅಲ್ಲಲ್ಲಿ ಹಳ್ಳವಾಗಿ ಹರಿಯುತ್ತಿದ್ದ ಈ ಧರ್ಮ ನೆರೆಗೊಂಡು ಭೋರ್ಗರೆದು ಪ್ರವಹಿಸುವಂತೆ ಮಾಡಿದ ಕೀರ್ತಿ ಶ್ರೀರಾಮನುಜಾಚಾರ್ಯರಿಗೆ ಸಲ್ಲಬೇಕು. ಶ್ರೀ ರಾಮಾನುಜರು ಭಾರತದ ಶ್ರೇಷ್ಠ ಧರ್ಮ ಪ್ರವರ್ತಕರಲ್ಲೊಬ್ಬರು. ಭಾರತದ ಆಧ್ಯಾತ್ಮಿಕ ಇತಿಹಾಸದಲ್ಲಿ ಶ್ರೀ ಶಂಕರಾಚಾರ್ಯರ ಅನಂತರ ಆಚಾರ್ಯ ಪರಂಪರೆಯಲ್ಲಿ ಕಾಣಿಸಿಕೊಂಡ ದಿವ್ಯ ಜ್ಯೋತಿಯೇ ಸರಿ. ''ಸಮರ್ಥ ಗುರುವಿನ ಮೂಲಕ ಸಿದ್ಧಾಂತಗಳು ಅರ್ಥವಾದಾಗ ಅವುಗಳ ಮೌಲಿಕ ಅಂತಃಸತ್ವಗಳು, ಮಾನವೀಯ ಮಿಡಿತಗಳು ಅಂತಃ ಕರಣವನ್ನೆಲ್ಲಾ ಅವತರಿಸುವಂತಿವೆ.''

ಕ್ರಿ.ಶ. 8-9ನೇ ಶತಮಾನದಲ್ಲಿ ವೈಷ್ಣವ ಧರ್ಮವು ವೈದಿಕ ಧರ್ಮವನ್ನು ಸುವ್ಯವಸ್ಥೆಗೊಳಿಸಿ ವೇದಾಂತವನ್ನು ಪ್ರತಿಪಾದಿಸಿದ ಶಂಕರಾಚಾರ್ಯರ ಬಿರುಸಾದ ಟೀಕೆಗಳ ಬಿರುಮಳೆಗೆ ಸಿಕ್ಕಿಕೊಂಡಾಗ ಇದನ್ನು ಸಂರಕ್ಷಿಸಿ ಸಮರ್ಥಿಸಬೇಕಾದ ಹೊಣೆಗಾರಿಕೆ ಅವರ ಅನುಯಾಯಿಗಳ ಹೆಗಲೇರಿತು. ಆ ಬಹುಭಾರವಾದ ಜವಾಬ್ದಾರಿಯನ್ನು ತನ್ನ ಹೆಗಲಿನ ಮೇಲಕ್ಕೆ ಹಾಕಿಕೊಂಡು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿದವರೆ ಶ್ರೀ ರಾಮಾನುಜಾಚಾರ್ಯರು. ಇಂದು 'ವಿಶಿಷ್ಟಾದ್ವೈತ' ಎಂದು ಕರೆಯುವ ಹಾದಿಯೂ ಹಿಂದಿನವರಿಗೆ ಅರಿವಾಗಿತ್ತು. ರಾಮಾನುಜರು ಇದಕ್ಕೊಂದು ದರ್ಶನ ರೂಪವನ್ನಿತ್ತು ಸಿದ್ಧಾಂತದ ಚೌಕಟ್ಟಿನಲ್ಲಿ ಅಳವಡಿಸಿದರು. ಬ್ರಹ್ಮಸೂತ್ರ, ಉಪನಿಷತ್ತು, ಭಗವದ್ಗೀತೆಗಳಲ್ಲಿ ನಿರೂಪವಾಗಿದ್ದ ವಿಷಯಗಳಲ್ಲಿ ತಮ್ಮ ನೂತನ ದರ್ಶನ ಸಿದ್ಧಾಂತವನ್ನು ಅರಿವು ಮಾಡಿ ಜಗತ್ತಿಗೆ ನೀಡಿದರು. ಅವರ ಸಿದ್ಧಾಂತ ವಿಶ್ವ ಸಿದ್ಧಾಂತ [1]. ಸಕಲ ಜೀವ ಕೋಟಿಯ ಮಂಗಳವಾದ ಮುಕ್ತಿ. ಅದು ಕೇವಲ ಒಂದು ಗುಂಪಿನವರ ಮಾರ್ಗದರ್ಶನಕ್ಕಲ್ಲ. ರಾಮಾನುಜರ ಕಾಲದಲ್ಲಿ ಮೇಲುಕೋಟೆಯು ಶ್ರೀ ವೈಷ್ಣವ ಪಂಥದ ಮುಖ್ಯ

[illegible]

[illegible]

[illegible]

[illegible]

[illegible]

ಕೇಂದ್ರವಾಯಿತು. ರಾಮಾನುಜರಿಗೆ ನೆಲೆಯಾಗಿ, ವೈಷ್ಣವ ಧರ್ಮದ ಪ್ರವರ್ಧನೆಗೆ ಮೇಲುಕೋಟೆ ಕೊಡುಗೆ ಅಪಾರ.

3.1 ರಾಮಾನುಜರ ಜೀವನ ಪರಿಚಯ:

''ಚೈತ್ರಾರ್ದಾ ಸಂಭವಂ ವಿಷ್ಣೋರ್ದರ್ಶನ ಸ್ಥಾಪನೋತ್ಸುಕಂ।

ತುಂಡೀರ ಮಂಡಲೇ ಶೇಷ ಮೂರ್ತಿಂ ರಾಮಾನುಜಂ ಭಜೇ॥'' ಎಂಬಂತೆ ಶ್ರೀ ಮದ್ ಶಿಷ್ಟಾದ್ವೈತ ಸ್ಥಾಪಕರಾದ ಶ್ರೀ ರಾಮಾನುಜಾಚಾರ್ಯರವರು ಚೈತ್ರ ಮಾಸದ ಆರಿದ್ರಾ ನಕ್ಷತ್ರದಲ್ಲಿ ಶ್ರೀ ವಿಷ್ಣುವಿನ ಆದಿಶೇಷಾಂಶರಾಗಿ ಅವತರಿಸಿದರೆಂದು ಜಗತ್ಪ್ರಸಿದ್ಧವಾಗಿದೆ. ಮದ್ರಾಸಿನ ಚಂಗಲ್ಪಟ್ಟು ಜಿಲ್ಲೆಯ ಶ್ರೀ ಪೆರೆಂಬುದೂರ್ ಎಂಬ ದಿವ್ಯ ಸ್ಥಳದಲ್ಲಿ 'ಅಸುರಿಕೇಶವ ಪೆರುಮಾಳ್' ಹಾಗೂ 'ಕಾಂತಿಮತಿ (ಪಿರಾಟ್ಟಿ)' ಎಂಬ ಧರ್ಮನಿಷ್ಠ ದಂಪತಿಗಳ ಮಗನಾಗಿ ರಾಮಾನುಜರು ಕ್ರಿ.ಶ.1017(ಶಾ.ಶ.939)ರಲ್ಲಿ ಜನಿಸಿದರು. ಈ ಮಗುವು ಮುಂದೆ ಜ್ಞಾನಿಯೂ, ಬುದ್ಧಿವಂತನೂ ಆದ, ಹಿರಿಯ ಸನ್ಯಾಸಿಯಾಗುತ್ತಾನೆಂದು ಆಕೆಯ ಸೋದರರಾದ ತಿರುಮಲೈನಂಬಿ ಎನಿಸಿದ ಮಹಾಪೂರ್ಣರು ಭವಿಷ್ಯವನ್ನು ನುಡಿದರು. 'ರಾಮಾನುಜ ಅಥವಾ ಇಳೆಯಪೆರುಮಾಳ್' ಎಂಬುದಾಗಿ ನಾಮಕರಣವನ್ನೂ ಮಾಡಿದರು[2].

ಆಚಾರ್ಯರ ವಿದ್ಯಾಭ್ಯಾಸ:

ಶ್ರೀ ರಾಮಾನುಜರು ಕಂಚಿಯಲ್ಲಿ ವಾಸವಾಗಿದ್ದುಕೊಂಡು ಕೇಶವ ಸೋಮಯಾಜಿಗಳಲ್ಲಿ ಶಾಸ್ತ್ರ ಅಧ್ಯಯನ ಪ್ರಾರಂಭಿಸಿ ತಮ್ಮ 16ನೇ ವಯಸ್ಸಿನಲ್ಲಿ ಎಲ್ಲಾ ವೇದಾಂತಗಳನ್ನೂ ಕಲಿತರು. ತರುವಾಯ ಕಂಚಿಯಲ್ಲಿ ಅನೇಕ ಮಂದಿ ಶಿಷ್ಯರಿಗೆ ವೇದಾಂತವನ್ನು ಹೇಳುತ್ತಲಿದ್ದ ಅದ್ವೈತ ಸನ್ಯಾಸಿಯಾಗಿದ್ದ 'ಯಾದವ ಪ್ರಕಾಶರ' ಬಳಿ ವ್ಯಾಸಂಗ ಮಾಡತೊಡಗಿದರು. ಕೆಲವು ಕಾಲಾನಂತರ ಯಾದವ ಪ್ರಕಾಶರ ಶೃತಿವಾಕ್ಯಗಳಿಗೆ ಹೇಳಿದ ಅರ್ಥಗಳು ರಾಮಾನುಜರಿಗೆ ಸರಿಹೋಗದಿರಲು ವಾಕ್ಯಾರ್ಥಮಾಡುವ ಸಂಭವದಲ್ಲಿ ಗುರುವಿಗೂ ಅದ್ಭುತ ಮೇಧಾವಿಯಾಗಿದ್ದ ಶಿಷ್ಯರಿಗೂ ವಿವಾದಗಳು ಹುಟ್ಟಿ ವಿರಸವುಂಟಾಯಿತು. ಗುರುವರ್ಯರು ರಾಮಾನುಜಾಚಾರ್ಯರಲ್ಲಿ ನಿಷ್ಠುರದಿಂದ ಪ್ರಯೋಜನವಿಲ್ಲವೆಂದು, ಇದರಿಂದ ತಮ್ಮ ಮತವು ಕ್ಷೀಣವಾಗುವುದೆಂದು ಯೋಚಿಸಿ

ರಾಮಾನುಜರಿಂದ ದೂರವಾದರು. ಕಂಚಿಗೆ ಬಂದು ನೆಲೆಸಿದ ರಾಮಾನುಜರು ಅಲ್ಲಿಯೇ 'ರಕ್ಷಾಂಬಾಳ್' ಎಂಬ ಕನ್ಯೆಯೊಡನೆ ವಿವಾಹವಾದರು.

ಪರಿವರ್ತನೆಯ ಹಾದಿಯಲ್ಲಿ:

ರಾಮಾನುಜರು ಯಾದವ ಪ್ರಕಾಶರಿಂದ ಬೇರ್ಪಟ್ಟುದ್ದು ಮಹಾ ಮೇದಾವಿಗಳೂ ಮಹಾತ್ಮರೂ ಆದ ಯಮುನಾಚಾರ್ಯರ ಪ್ರಾರ್ಥನೆಯ ಫಲವಾಗಿಯೇ ಎಂದು ಶ್ರೀ ವೈಷ್ಣವರು ಈಗಲೂ ನಂಬಿದ್ದಾರೆ. ಇದು ರಾಮಾನುಜರ ಜೀವನದಲ್ಲಿ ಅತ್ಯಂತ ಪ್ರಮುಖ ಹಂತ. ರಾಮಾನುಜರು ಗೊಂದಲದಲ್ಲಿದ್ದಾಗ ಅವರಿಗೆ ಧೈರ್ಯ ಮತ್ತು ವಿಶ್ವಾಸ ತುಂಬುತ್ತಿದ್ದವರು ಕಾಂಚೀಪೂರ್ಣರು. ಶ್ರೀ ರಂಗದಲ್ಲಿ ಯಮುನಾಚಾರ್ಯರು ಆರೋಗ್ಯವಿಲ್ಲದೆ ತಮ್ಮ ಉತ್ತರಾಧಿಕಾರಿಯ ಶೋಧದಲ್ಲಿದ್ದಾಗ ರಾಮಾನುಜರ ಹೆಸರು ಅವರ ಕಿವಿಗೆ ಬಿತ್ತು. ರಾಮಾನುಜರೇ ತಮಗೆ ಯೋಗ್ಯ ಉತ್ತರಾಧಿಕಾರಿಯಾಗಲು ಅರ್ಹರೆಂದು ಭಕ್ತರಿಂದ ತಿಳಿದರು. ಅವರನ್ನೇ ತಮ್ಮ ಮುಂದಿನ ಉತ್ತರಾಧಿಕಾರಿಯನ್ನಾಗಿ ಮಾಡಲು ಸಂಕಲ್ಪಮಾಡಿದರು. ನಂತರ ರಾಮಾನುಜರು ಯಾದವ ಪ್ರಕಾಶರಿಂದ ದೂರವಾಗಿ ವೈಷ್ಣವ ಸಂತರ (ಭಕ್ತರ) ಸತ್ಸಂಗವನ್ನು ಬಯಸಿದರು ಹಾಗೂ ಶ್ರೀ ವರದರಾಜಸ್ವಾಮಿಯ ದೇವಸ್ಥಾನದಲ್ಲಿ ಸೇವೆ ಸಲ್ಲಿಸಲು ಪ್ರಾರಂಭಿಸಿದರು [3].

ಕಾಂಚೀಪೂರ್ಣರೆಂಬ ಸಂತರು ರಾಮಾನುಜರಿಗೆ ಬಾಲ್ಯದಿಂದಲೂ ಗೌರವಾರ್ಹರಾಗಿದ್ದರು. ಇವರ ಪರಿಪೂರ್ಣತೆಗೆ ಸೋತ ರಾಮಾನುಜರು ಅವರಿಗೆ ಗೌರವ ನೀಡಿದರು. ಕಾಂಚೀಪೂರ್ಣರ ಆಜ್ಞೆಯಂತೆ ವರದರಾಜಸ್ವಾಮಿಯ ದೇವಾಲಯಕ್ಕೆ ಪ್ರತಿದಿನ ಸಮೀಪದ ಬಾವಿಯೊಂದರಿಂದ ನೀರನ್ನು ತಂದು ರಾಮಾನುಜರು ಸೇವಾಕಾರ್ಯವನ್ನು ಕೈಗೊಂಡರು.

ಯಮುನಾಚಾರ್ಯರ ಉತ್ತರಾಧಿಕಾರಿಯಾಗಿ ಆಚಾರ್ಯರು:

ಸಾವಿನಂಚಿನಲ್ಲಿದ್ದ ಯಮುನಾಚಾರ್ಯರು, ರಾಮಾನುಜರು ಯಾದವ ಪ್ರಕಾಶರಿಂದ ಬೇರೆಯಾದ ಸುದ್ದಿ ತಿಳಿದು ಸಂತೋಷಗೊಂಡರು. ರಾಮಾನುಜರು ಶ್ರೀರಂಗಕ್ಕೆ ಬಂದು ಶ್ರೀ ವೈಷ್ಣವ ಪಂಥದ ನೇತೃತ್ವದ ಜವಾಬ್ದಾರಿಯನ್ನು ಹೊರುವಂತಾಗಲೆಂದು ಶ್ರೀರಂಗನಾಥರಲ್ಲಿ ಪ್ರಾರ್ಥಿಸಿದರು. ತಮ್ಮ ಶಿಷ್ಯರಾದ

ಮಹಾಪೂರ್ಣ ಎಂಬುವವರನ್ನು ರಾಮಾನುಜರ ಬಳಿಗೆ ಕಳುಹಿಸಿ ಶ್ರೀರಂಗಕ್ಕೆ ಬರುವಂತೆ, ಮನವಲಿಸುವಂತೆ ಕೇಳಿಕೊಂಡರು. ಮಹಾಪೂರ್ಣರು ರಾಮಾನುಜರಿಗೆ ತಮ್ಮ ಗುರುಗಳ ಅಪೇಕ್ಷೆಯನ್ನು ತಿಳಿಸಿದರು. ರಾಮಾನುಜರು ಸಮ್ಮತಿಸಿ, ಶ್ರೀರಂಗಕ್ಕೆ ತೆರಳಲು ಸಿದ್ಧರಾದರು.

ಇದೇ ಕಾಲದಲ್ಲಿ ಯಮುನರು ವ್ಯಾಸಸೂತ್ರಕ್ಕೆ ಯೋಗ್ಯವಾದ ಭಾಷ್ಯವನ್ನು ಮಾಡಿ, ವೇದಾಂತಸಾರ ತಿರುವಾಯಿಮೊಳಿ ಎಂಬ ಪ್ರಬಂಧವನ್ನು ತಿರುಮಂತ್ರಾರ್ಥವನ್ನು ಶಿಷ್ಯರಿಗೆ ಉಪದೇಶಿಸಿ ತನ್ಮೂಲಕ ಶ್ರೀವಿಶಿಷ್ಟಾದ್ವೈತ ಸಿದ್ಧಾಂತವನ್ನು ಪ್ರತಿಪಾದಿಸುವ ಉದ್ದೇಶವು ನೆರವೇರದುದರಿಂದ ಈ ಕೊರತೆಯಲ್ಲಿಯೇ ತಮ್ಮ ಮೂರು ಬೆರಳನ್ನು ಮಡಿಸಿಕೊಂಡು ದೈವಾಧೀನರಾದರು.

ದೈವಾಧೀನದ ಸುದ್ದಿ ತಿಳಿದ ರಾಮಾನುಜರು ದುಃಖ ಮತ್ತು ನಿರಾಸೆಯಿಂದ ದರ್ಶನ ಪಡೆಯಲು ಧಾವಿಸಿದರು. ಬಲಗೈಯ ಮೂರು ಬೆರಳುಗಳು ಮಡಿಸಿಕೊಂಡಿರುವುದನ್ನು ಗಮನಿಸಿದರು. ಈ ಮೂರು ಬೆರಳುಗಳು ಮೂರು ಬಯಕೆಯನ್ನು ಮತ್ತು ತಮಗಾಗಿ ಅವರು ನೀಡಬಯಸಿದ್ದ ಮೂರು ಸಂದೇಶವನ್ನು ಪ್ರತಿನಿಧಿಸುತ್ತಿರುವ ವಿಷಯ ತಿಳಿದರು. ತಾವು ಮೂರು ಸಂಕಲ್ಪಗಳನ್ನು ಜನಸ್ತೋಮದ ಎದುರು ನೆರವೇರಿಸುವ ಭರವಸೆ ನೀಡಿದ ನಂತರ ಬೆರಳುಗಳು ಸಡಿಲಗೊಂಡು ನೇರವಾದವು. ನಂತರ ಮೊದಲಿನಂತೆ ವರದರಾಜ ಸ್ವಾಮಿ ದೇವಾಲಯದಲ್ಲಿ ಕಾಂಚೀಪೂರ್ಣರ ಸತ್ಸಂಗದಲ್ಲಿ ಕಾಲಕಳೆದರು.

ಸನ್ಯಾಸ ಸ್ವೀಕಾರ (ರಾಮಾನುಜರು):

ಯಮುನರ ಮರಣದ ತರುವಾಯ ಶ್ರೀ ರಂಗದ ಮಠದಲ್ಲಿ ಶಾಸ್ತ್ರಗಳ ಸೂಕ್ಷ್ಮ ಅರ್ಥಗಳನ್ನು ವಿವರಿಸಿ ಹೇಳುವಂತಹಾ ಯೋಗ್ಯ ಗುರುಗಳು ಇಲ್ಲದಂತಾಯಿತು. ಆದುದರಿಂದ ಶ್ರೀ ರಾಮಾನುಜರಿಗೆ ದೀಕ್ಷೆನೀಡಿ ಅವರನ್ನು ಶ್ರೀರಂಗಕ್ಕೆ ಕರೆದು ತರುವ ಹೊಣೆಗಾರಿಕೆಯನ್ನು ಮಠದ ಶಿಷ್ಯರಲ್ಲೊಬ್ಬರಾದ ಮಹಾಪೂರ್ಣರಿಗೆ ಒಪ್ಪಿಸಲಾಯಿತು. ಆ ವೇಳೆಗೆ ಕಂಚಿಯಲ್ಲಿದ್ದ ಶ್ರೀ ರಾಮಾನುಜರಿಗೂ ಯೋಗ್ಯವಾದ ಗುರುಗಳೊಬ್ಬರ ಮಾರ್ಗದರ್ಶನ ಅವಶ್ಯವೆಂಬ ಭಾವನೆಯುಂಟಾಗಿ ಮಹಾಪೂರ್ಣರನ್ನು ತಮ್ಮ ಗುರುಗಳಾಗಿ ಸ್ವೀಕರಿಸಬೇಕೆಂಬ ಇಚ್ಛೆಯಿಂದ ಅವರು ಶ್ರೀರಂಗಕ್ಕೆ ಹೊರಟರು. ಹೀಗೆ ಇಬ್ಬರು ಮಾರ್ಗ ಮಧ್ಯದಲ್ಲಿ 'ಮಧುರಾಂತಕಮ್' ಎಂಬಲ್ಲಿ ಭೇಟಿಯಾದರು. ನಂತರ ಕಂಚಿಗೆ ಬಂದು ಪರಸ್ಪರ ಸಹಕಾರದಲ್ಲಿ 6 ತಿಂಗಳುಗಳ ಕಾಲಕಳೆದರು. ರಾಮಾನುಜರ ಪತ್ನಿಯು

ಮಹಾಪೂರ್ಣರು ತಮ್ಮ ವರಲ್ಲದ ಕಾರಣ ಉಣಬಡಿಸಲು ತಿರಸ್ಕರಿಸಲಾಗಿ ಪತಿ - ಪತ್ನಿಯರ ನಡುವಣ ಸಂಬಂಧ ಮುರಿಯಲು ಕಾರಣವಾಯಿತು. ಪತ್ನಿಯನ್ನು ತವರುಮನೆಗೆ ಕಳುಹಿಸಿ ಶ್ರೀರಾಮಾನುಜರು ಸನ್ಯಾಸವನ್ನು ಸ್ವೀಕರಿಸಿದರು. ಅನಂತರ ಅವರೂ ಶ್ರೀರಂಗಕ್ಕೆ ತೆರಳಿ ಅಲ್ಲಿನ ಮಠಾಧಿಪತ್ಯವನ್ನು ವಹಿಸಿದರು[4].

ಶ್ರೀರಂಗಮಠಾಧಿಪತಿಯಾಗಿ ರಾಮಾನುಜರು:

ಶ್ರೀರಂಗದ ರಂಗನಾಥ ದೇವಾಲಯದಲ್ಲಿ ಹಲವಾರು ಸುಧಾರಣೆಗಳನ್ನು ಜಾರಿಗೆ ತಂದರು. ದೇವಾಲಯದ ಆಡಳಿತವನ್ನು ಉತ್ತಮಗೊಳಿಸಲು ಕೆಲವು ಮಾರ್ಪಾಡುಗಳನ್ನು ಮಾಡಿದರು. ಈ ಬದಲಾವಣೆಗಳನ್ನು ಆಚರಣೆಗೆ ತರಲು ಕೆಲವು ವರ್ಷಗಳೇ ಹಿಡಿದಿರಬಹುದು. ಅಲ್ಲಿನ ಪರಿಸ್ಥಿತಿಗಳು ಒಂದು ನೆಲೆಗೆ ಬಂದಿದೆ ಎಂಬುದನ್ನು ಖಚಿತ ಪಡಿಸಿಕೊಂಡು ಆಚಾರ್ಯರು ದೀರ್ಘ ಕಾಲದ ತೀರ್ಥಯಾತ್ರೆಗೆ ಹೊರಟರು. ವಿದ್ಯಾಧಿದೇವತೆಯಾದ ಸರಸ್ವತೀಪೀಠವೆನಿಸಿದ ಕಾಶ್ಮೀರದಲ್ಲಿದ್ದಾಗ ಆ ದೇವಿಯೇ ಇವರಿಗೆ ಭಾಷ್ಯಕಾರರೆಂಬ ಬಿರುದನ್ನು 'ಹಯಗ್ರೀವರ' ಮೂರ್ತಿಯೊಂದನ್ನು ಇತ್ತು ಗೌರವಿಸಿದಳೆಂಬ ಪ್ರತೀತಿಯಿದೆ[5].

ಇಷ್ಟೆಲ್ಲಾ ಆದ ಬಳಿಕ ತಾವು ಉಪದೇಶಿಸಿದ ವಿಶಿಷ್ಟಾದ್ವೈತ ಸಿದ್ಧಾಂತದ ಪ್ರಚಾರ ಕಾರ್ಯದಲ್ಲಿ ಮಗ್ನರಾಗಿ ಶ್ರೀರಂಗದಲ್ಲಿ ಸ್ವಸ್ಥಚಿತ್ತರಾಗಿ ವಾಸಿಸತೊಡಗಿದ್ದರು. ತಮಿಳು ನಾಡಿನ ಚೋಳರ ಅರಸ ಶೈವ ಧರ್ಮಿಯನಾಗಿದ್ದು ತನ್ನ ಪ್ರಜೆಗಳೆಲ್ಲರನ್ನೂ ಆ ಧರ್ಮವನ್ನು ಸ್ವೀಕರಿಸುವಂತೆ ಒತ್ತಾಯಿಸಿ ಶೈವರಲ್ಲದವರನ್ನು ಪೀಡಿಸುವ ಧರ್ಮಾಂಧತೆಯ ನೀತಿ ಕೈಗೊಂಡಿದ್ದನು. ರಾಮಾನುಜರ ಶಿಷ್ಯರು ವ್ಯಾಕುಲ ಚಿತ್ತರಾಗಿ ತಮ್ಮ ಆತ್ಮ ರಕ್ಷಣೆಗಾಗಿ ಚೋಳ ದೇಶವನ್ನು ಬಿಟ್ಟು ಹೋಗಬೇಕೆಂದು ಪ್ರಾರ್ಥಿಸಿದರು. ಈ ಮಧ್ಯೆ ಶ್ರೀ ರಾಮಾನುಜರನ್ನು ಕರೆದೊಯ್ಯಲು ಅರಸನ ದೂತರು ಬಂದಾಗ ಶ್ರೀಗಳಂತೆ ವೇಷದರಿಸಿದ್ದ ಕೋರೇಶನನ್ನು ಮಹಾಪೂರ್ಣರ ಜೊತೆಯಲ್ಲಿ ಚೋಳ ಅರಸನ ಆಸ್ಥಾನಕ್ಕೆ ಒಯ್ಯಲಾಯಿತು. ಈ ಘಟನೆ ಶ್ರೀ ರಾಮಾನುಜರು ಕರ್ನಾಟಕಕ್ಕೆ ಬಂದು ನೆಲೆಸಲು ಕಾರಣವಾಯಿತು.

ಕರ್ನಾಟಕದಲ್ಲಿ ರಾಮಾನುಜರು:

ಸಾಂಪ್ರದಾಯಿಕ ಕಥೆಗಳ ಪ್ರಕಾರ ಶ್ರೀ ರಾಮಾನುಜರು ಕರ್ನಾಟಕದಲ್ಲಿ 12 ಅಥವಾ

20 ವರ್ಷಗಳ ಕಾಲ ನೆಲೆಸಿದ್ದರೆಂಬ ಪ್ರತೀತಿ ಇದೆ. ಆಗ ಅವರು ಹೊಯ್ಸಳ ಅರಸನಾದ ಬಿಟ್ಟಿದೇವನನ್ನು ಶ್ರೀ ವೈಷ್ಣವ ಧರ್ಮಕ್ಕೆ ಮತಾಂತರಗೊಳಿಸಿದರೆಂದೂ ಮೇಲುಕೋಟೆಯಲ್ಲಿ ಚೆಲುವನಾರಾಯಣನನ್ನು ಪ್ರತಿಷ್ಠಾಪಿಸಿದರೆಂದೂ ತಿಳಿದು ಬರುತ್ತದೆ. ಶ್ರೀ ವೈಷ್ಣವ ಧರ್ಮವು ಆಗಿನ ಮೈಸೂರು ಪ್ರಾಂತ್ಯ ಉದ್ದಗಲಗಳಲ್ಲಿ ವಿಸ್ತರಿಸಿ ಅಲ್ಲಿನ ಜನಪ್ರಿಯ ಧರ್ಮಗಳಲ್ಲೊಂದಾಯಿತು.

ಬಾಳಿನ ಸಂಧ್ಯಾಕಾಲ:

ಚೋಳ ಅರಸ ಮರಣವನ್ನಪ್ಪಿದನೆಂದು ಸುದ್ದಿಯನ್ನು ತಿಳಿದ ಆಚಾರ್ಯರು ಆನಂತರ ಶ್ರೀರಂಗಕ್ಕೆ ಹಿಂತಿರುಗಿದರು. ಅಲ್ಲಿ ಎರಡು ದಶಕಗಳ ಕಾಲ ಜೀವಿಸಿದ್ದರು. ಆ ವರ್ಷಗಳಲ್ಲಿಯೇ ಶ್ರೀಭಾಷ್ಯವನ್ನು ಸಂಪೂರ್ಣಗೊಳಿಸಿದರು. ತಮ್ಮ ಪ್ರಿಯಶಿಷ್ಯ ಕೋರೇಶನ ಪುತ್ರ ಪರಾಶರನಿಗೆ ವೈಷ್ಣವ ಸಮುದಾಯದ ನಾಯಕತ್ವದ ಭಾರ ವಹಿಸಿ ತಮ್ಮ ಉತ್ತಾರಾಧಿಕಾರಿಯಾಗಿ ನೇಮಿಸಿದರು. ಶ್ರೀಭಾಷ್ಯವನ್ನು ಸಂಪೂರ್ಣಗೊಳಿಸಿದ ನಂತರ 10 ವರ್ಷಗಳ ಕಾಲ ವಿಶ್ರಾಂತಿ ಪಡೆದು ಅಂತಿಮವಾಗಿ ಕ್ರಿ.ಶ.1137ರಲ್ಲಿ ದಿವಂಗತರಾದರು [6].

3.2 ಮೇಲುಕೋಟೆಯಲ್ಲಿ ರಾಮಾನುಜಾಚಾರ್ಯರು:

ಮೇಲುಕೋಟೆಯು ಒಂದು ಪ್ರಸಿದ್ಧ ಶ್ರೀ ವೈಷ್ಣವ ಕ್ಷೇತ್ರ. ಇದು ರಾಮಾನುಜರ ಆಗಮನದಿಂದ ಸ್ಪಷ್ಟತೆಯನ್ನು ಪಡೆಯಿತು. ವೈಷ್ಣವ ಧರ್ಮ ಸಂಸ್ಕೃತಿಯು ಆಚಾರ್ಯರಿಂದ ಇಲ್ಲಿ ಪ್ರಜ್ವಲಿಸಲು ಆರಂಭಿಸಿತು. ಶ್ರೀ ವೈಷ್ಣವ ಕ್ಷೇತ್ರಗಳೆಂದು ಖ್ಯಾತವಾಗಿರುವ ನಾಲ್ಕು ಕ್ಷೇತ್ರಗಳಲ್ಲಿ ಇದೂ ಒಂದು. ಇತರ ಮೂರೆಂದರೆ ಕಂಚಿ, ತಿರುಪತಿ, ಶ್ರೀರಂಗಮ್. ರಾಮಾನುಜರ ಆಗಮನದಿಂದ 'ಯತಿಶೈಲ' ಎಂದು ಹೆಸರಾದ ಮೇಲುಕೋಟೆ ಮುಂದೆ ವಿಶಿಷ್ಟ ಸಾಂಸ್ಕೃತಿಕ ಕೇಂದ್ರವಾಗಿಯೂ ಪ್ರಸಿದ್ಧಿಪಡೆಯಿತು.

ಮೇಲುಕೋಟೆಗೆ ರಾಮಾನುಜರ ಹಾದಿ:

ರಾಮಾನುಜರು ಕರ್ನಾಟಕದಲ್ಲಿ ಕೈಗೊಂಡ ಸಂಚಾರದ ಸರಿಯಾದ ಮಾರ್ಗ ಯಾವುದೆಂದು ಎಲ್ಲೂ ದಾಖಲಾಗಿಲ್ಲ. ಒಂದು ಮೂಲದ ಪ್ರಕಾರ ಧಾರ್ಮಿಕ ಘರ್ಷಣೆಯಿಂದ ತಮಿಳುನಾಡಿನಿಂದ ರಾಮಾನುಜರು ಮೊದಲು ಬಂದುದು ನಾಗಮಂಗಲ ತಾಲ್ಲೋಕಿನ ಪಡುವಲ ಪಟ್ಟಣಕ್ಕೆ ಹತ್ತಿರದ ಬಸವನ ಬೆಟ್ಟದಲ್ಲಿ ವಾಸವಾಗಿದ್ದು ಮುಂದೆ

ತೊಣ್ಣೂರಿಗೆ ಬಂದರು[7]. ಇನ್ನೊಂದು ಮೂಲದ ಪ್ರಕಾರ ರಾಮಾನುಜರು ಮೇಲ್ಮೊರ್ಗವಾಗಿ ತಾಯಿ ಕಾವೇರಿ ನದಿಯನ್ನು ಅನುಸರಿಸಿ ಸತ್ಯ ಮಂಗಲದ ಮೂಲಕ ಕನ್ನಡ ನಾಡನ್ನು ಪ್ರವೇಶಿಸಿದರು. ಅನಂತರ ಒಳಮಾರ್ಗವಾಗಿ ನಡೆದು ಕಾವೇರಿ ತಾಯಿಯಿ ಕೃಪೆಗೆ ಪಾತ್ರವಾದ ರಾಮನಾಥಪುರವನ್ನು ತಲುಪಿ ಅಲ್ಲಿಂದ ಮಿರ್ಲೆ ಹಾಗೂ ಸಾಲಿಗ್ರಾಮಗಳನ್ನು ಹಾದು ಮೇಲುಕೋಟೆಯ ಮಾರ್ಗದಲ್ಲಿದ್ದ ಹೊಯ್ಸಳ ರಾಜ್ಯದ ಉತ್ತರ ಗಡಿಯ ರಾಜಧಾನಿಯಾದ ತೊಂಡನೂರಿಗೆ ಬಂದರು[8]. ನಿಖರ ಆಧಾರದ ಕೊರತೆಯಿಂದ ಈ ಕುರಿತು ಏಕಾಭಿಪ್ರಾಯಕ್ಕೆ ಬರಲಾಗಿಲ್ಲ.

ರಾಮಾನುಜರು ಕರ್ನಾಟಕಕ್ಕೆ ಬರಲು ಕಾರಣ:

ಶ್ರೀ ರಾಮಾನುಜರ ಬಾಳುವೆಯು ಹೀಗೆ ಸಾಗುತ್ತಿತ್ತಾದರೂ ಹುಟ್ಟಿದ ಮಣ್ಣಿನಲ್ಲಿ ಆಸರೆ ಇಲ್ಲವಾಯಿತು. ಆ ಕಾಲದಲ್ಲಿ ತಮಿಳುನಾಡಿನಲ್ಲಿ ಶೈವ ಮತವು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಚೋಳ ದೊರೆಗಳು ಶೈವ ಮತಾವಲಂಬಿಗಳಾಗಿ ಅನ್ಯಧರ್ಮಗಳನ್ನು ಪ್ರೋತ್ಸಾಹಿಸುತ್ತಿರಲಿಲ್ಲ. ಅಂದಿನ ಚೋಳ ರಾಜ ಕುಲೋತ್ತುಂಗನಿಗೆ ಶೈವ ಮತವನ್ನು ತನ್ನ ರಾಜ್ಯದ ಏಕಮಾತ್ರ ಧರ್ಮವಾಗಿ ಮಾಡಬೇಕೆಂಬ ಮಹತ್ವಾಕಾಂಕ್ಷೆ ಇದ್ದಿತು. ರಾಮಾನುಜರನ್ನು ಶೈವಪಂಥಕ್ಕೆ ತಂದುಬಿಟ್ಟರೆ ಇಡೀ ಚೋಳ ರಾಜ್ಯವೇ ಶೈವವಾಗಿಬಿಡುವುದೆಂದು ಕೊಂಡು, ಒಂದು ವೇಳೆ ವೈಷ್ಣವ ಪಂಥವನ್ನು ಬಿಡದೆ ಇದ್ದರೆ ಅವರನ್ನು ಕೊಂದಾದರೂ ಶೈವ ಪಂಥ ಸಾರ್ವಭೌಮತ್ವ ಸ್ಥಾಪಿಸಲು ಯೋಚಿಸಿದ್ದನು[9].

ಅವರನ್ನು ರಾಜಧಾನಿಗೆ ಬರುವಂತೆ ಆಜ್ಞೆ ಮಾಡಿ 'ಶಿವನೊಬ್ಬನೇ ಆರಾಧ್ಯ ದೈವ' ಎಂದು ಘೋಷಿಸುವ ಒಪ್ಪಿಗೆಯ ಪತ್ರಕ್ಕೆ ಸಹಿಮಾಡಿಸಲು ನಿರ್ಧರಿಸಿದನು. ಈ ಅಪಾಯದಿಂದ ಆಚಾರ್ಯರನ್ನು ತಪ್ಪಿಸಲು ಶಿಷ್ಯ ಕೋರೇಷನು ಅವರಂತೆ ವೇಷ ಧರಿಸಿ ಮತ್ತೊಬ್ಬ ಶಿಷ್ಯ ಪೆರಿಯನಂಬಿ ಎನ್ನುವರ ಜೊತೆಯಲ್ಲಿರಾಜಧಾನಿಗೆ ಹೋದರು. ಈ ಗುಟ್ಟು ಬಯಲಾಗಿ ಅವರಿಬ್ಬರ ಕಣ್ಣುಗಳನ್ನು ಕೀಳುವ ಘೋರ ಶಿಕ್ಷೆಯನ್ನು ರಾಜನು ವಿಧಿಸಿದನು. ಈ ಧಾರ್ಮಿಕ ಘರ್ಷಣೆಯಿಂದ ತಪ್ಪಿಸಿಕೊಳ್ಳಲು ರಾಮಾನುಜರು ಅಂದಿನ ಮೈಸೂರು ಪ್ರಾಂತ್ಯವನ್ನು ತಲುಪಿದರು.

ಮೇಲುಕೋಟೆಗೆ ಬರುವ ಮುನ್ನ ರಾಮಾನುಜರು:

ಮೈಸೂರು ಪ್ರಾಂತ್ಯದ ರಾಮನಾಥಪುರ ತಲುಪಿದ ರಾಮಾನುಜರು ಹತ್ತಿರದ ಸಾಲಿಗ್ರಾಮದಲ್ಲಿ ಕೆಲ ಕಾಲ ನೆಲೆಸಿದ್ದರು. ಅಲ್ಲಿ ಆಚಾರ್ಯರಿಗೆಂದು ನಿರ್ಮಿಸಿದ ದೇವಾಲಯದಿಂದ ಇದು ಸ್ಪಷ್ಟವಾಗಿದೆ. ಎತ್ತರ ಪೀಠದ ಮೇಲೆ ಅವರ ಪಾದಗಳನ್ನು ಕೆತ್ತಲಾಗಿದೆ. ಇವರ ಎಂಟು ಮಂದಿ ಶಿಷ್ಯರ ಮೂರ್ತಿಗಳೂ ಅಲ್ಲಿವೆ. ಇಲ್ಲಿರುವ ಕೊಳವನ್ನು ಶ್ರೀಪಾದತೀರ್ಥವೆಂದು, ಆಚಾರ್ಯರು ಇದರಲ್ಲಿ ತಮ್ಮ ಪಾದ ತೊಳೆದರೆಂಬ ದಂತಕಥೆಯಿದೆ [10]. ಇಲ್ಲಿನ ಸನ್ಯಾಸಿಯ ಮೂರ್ತಿಯನ್ನು ಶಿಷ್ಯವಡಗನಂಬಿ ಎಂದು ನಂಬಲಾಗಿದೆ. ಇಲ್ಲಿನ 12ನೇ ಶತಮಾನಕ್ಕೆ ಸೇರಿದ ಶಾಸನದಿಂದ ಸಾಲಿಗ್ರಾಮದ ವೈಷ್ಣವರಿಗೆ ನೀಡಿದ ಹಕ್ಕುಗಳನ್ನು ತಿಳಿಯಬಹುದು. ಇದು ರಾಮಾನುಜರ ಕಾಲದ್ದಲ್ಲದಿದ್ದರೂ ಇಲ್ಲಿ ನೆಲೆಸಿದ್ದರೆಂಬ ದಂತಕಥೆಗೆ ಸಮರ್ಥನೆಯನ್ನು ಈ ಶಾಸನ ಒದಗಿಸಿದೆ[11].

ತೊಂಡನೂರಿನಲ್ಲಿ ರಾಮಾನುಜರು:

ಮುಂದೆ ರಾಮಾನುಜರು ಹೊಯ್ಸಳ ರಾಜ್ಯದ ಉತ್ತರ ಗಡಿಯ ರಾಜಧಾನಿಯಾಗಿದ್ದ ತೊಂಡನೂರು ತಲುಪಿದರು. ಮೂಲತಃ ಯಾದವಪುರ ಎಂಬ ಹೆಸರಿದ್ದ ಇದು ಕ್ರಿ.ಶ 1127ರಲ್ಲಿ ವಿಷ್ಣುವರ್ಧನನ ಉಪರಾಜಧಾನಿಯಾಗಿತ್ತೆಂದು ತಿಳಿಯಬಹುದು [12]. (ತೊಂಡನೂರು ಎಂದರೆ, ತೊಂಡ= ಭಕ್ತ ಅಥವಾ ದಾಸ-ನ ಊರು ಇದು ದ್ರಾವಿಡ ಪದ ತಮಿಳಿನಿಂದ ಪ್ರಭಾವಿತವಾದಂತಿದೆ) ಹೊಯ್ಸಳ ಬಿಟ್ಟಿದೇವನನ್ನು ಯತಿಗಳು ಶ್ರೀ ವೈಷ್ಣವ ಧರ್ಮಕ್ಕೆ ಮತಾಂತರಗೊಳಿಸಿ ಆನಂತರ ವಿಷ್ಣುವರ್ಧನನೆಂಬ ಹೆಸರನ್ನು ಪಡೆದುದು ಇಲ್ಲಿಯೆ. ಇಲ್ಲಿ ರಾಮಾನುಜರು ಬಿಟ್ಟಿದೇವ ಕರೆದ ಜೈನ ವಿದ್ವಾಂಸರ ಸಮಾವೇಶದಲ್ಲಿ ಜೈನ ಪಂಡಿತರನ್ನು ವಾಗ್ವಾದದಲ್ಲಿ ಸೋಲಿಸಿದರೆಂದು ಹೇಳಲಾಗಿದೆ [13]. ಆಚಾರ್ಯರ ಸಾನ್ನಿಧ್ಯವು ತೊಂಡನೂರಿನಲ್ಲಿದ್ದರೆನ್ನಲು ಶ್ರೀರಂಗಪಟ್ಟಣದ 64ನೇ ಶಾಸನವು ಸ್ಪಷ್ಟ ಸಾಕ್ಷಿಯಾಗಿದೆ[14].

ತನ್ನ ಮಗಳಿಗಿಡಿದ ಭೂತವನ್ನು ಹೋಗಲಾಡಿಸಲು ಅರಸನನು ಆಚಾರ್ಯರಿಗೆ ಮನವಿಮಾಡಿದನು. ಮೊದಲು ಹಿಂಜರಿದರು, ನಂತರ ಈ ಉಪದ್ರವವನ್ನು ಹೋಗಲಾಡಿಸಲಾಗಿ ಬಿಟ್ಟಿ ದೇವನು ಅವರ ಶಿಷ್ಯನಾದನು. ಆಗ ಅರಸನು 790 ಬಸದಿಗನ್ನು ಹಾಳುಗೆಡವಿ ಪಂಚನಾರಾಯಣ ದೇವಾಲಯಗಳನ್ನು ಕಟ್ಟಿಸಿ ಬಸದಿಗಳಿಗೆ ನೀಡಿದ ದಾನವನ್ನು ಪುನರ್ದತ್ತಿಯಾಗಿ ನೀಡಿದನು. ನಂತರ ಅಲ್ಲಿ ರಾಮಾನುಜ ಕೂಟವನ್ನು ನಾಲ್ಕು ಕೆರೆಯನ್ನು

ನಿರ್ಮಿಸಿದನೆಂದು ಶ್ರವಣಬೆಳಗೊಳದ ಸ್ಥಳಪುರಾಣದಲ್ಲಿ ಹೇಳಿದೆ. ನಾಮಕ್ಕೆ ಬೇಕಾದ ತಿರುಮಣ್ಣಿನ ಅವಶ್ಯಕತೆ ಉಂಟಾಗಿ ನಾರಾಯಣ ದೇವರು ಸ್ವಪ್ನದಲ್ಲಿ ಬಂದು ಯದುಗಿರಿಗೆ ಹೋಗಬೇಕೆಂದು ಅಲ್ಲಿ ತಿರುಮಣ್ ಇರುವುದೆಂದು ತಿಳಿಸಲಾಗಿ ಅವರು ಮೇಲುಕೋಟೆಗೆ ಬಂದರೆಂದು ನಂಬಲಾಗಿದೆ.

ರಾಮಾನುಜರು ಮೇಲುಕೋಟೆಗೆ ಬರಲು ಪ್ರೇರಣೆ:

'ತಿರುಮಣ್' ದೊರಕುತ್ತಿದ್ದಿತೆಂಬ ಕಾರಣದಿಂದ ಇವರು ತೊಂಡನೂರಿನಿಂದ ಇಲ್ಲಿಗೆ ಬಂದರು. 14ನೇ ಶತಮಾನದ ವೇಳೆಗೆ ಇದು ಸಾಕಷ್ಟು ಪ್ರಚಾರ ಪಡೆದಿತ್ತು. ಮೇಲುಕೋಟೆ ನಾಮದ ಕಟ್ಟೆಯಲ್ಲಿನ ಶಾಸನವು 'ಎಂಬೆರುಮಾನರು ಕಂಡು ತಿರುಮಂಣ್' (ರಾಮಾನುಜ) ಸ್ವಾಮ್ಯವನ್ನು ಮಾದಪ್ಪ ದಣ್ಣಾಯಕನು ತಿರುಮಣ್ಣ ಪೆರುಮಾಳಿಗೆ ಧರ್ಮನೀಡಿದ ವಿಚಾರ ತಿಳಿಸುತ್ತದೆ. ಇದು ರಾಮಾನುಜರು ಮೇಲುಕೋಟೆಯಲ್ಲಿ ತಿರುಮಣ್ಣನ್ನು ಕಂಡರು ಎಂಬ ಸಾಂಪ್ರದಾಯಿಕ ಅಂಶ ಆ ವೇಳೆಗೆ ಬೆಳೆದಿತ್ತು. ಇದು ತಿರುಮಣ್ಣು ಅವರ ಬರುವಿಕೆಗೆ ಕಾರಣ ಎಂಬ ಅಂಶಕ್ಕೆ ಪುಷ್ಟಿನೀಡುತ್ತದೆ[15].

ಆದರೂ ತೊಣ್ಣೂರು ಬಿಡಲು ಇದೊಂದೇ ಪ್ರಬಲ ಕಾರಣವಾಗಿರಲಾರದು. ಸುರಿಗೆಯನಾಗಯ್ಯ ಮತ್ತು ಹೊಯ್ಸಳ ಅರಸು ಸಹ ಇಲ್ಲಿನ ದೇವಾಲಯ ಪ್ರತಿಷ್ಠಾಪನೆಗೆ ಭಾಗಿಯಾಗಲು ಒತ್ತಡ ತಂದರು. ಆಗ ಆಚಾರ್ಯರು ಹೊಯ್ಸಳ ಅರಸನ ಉಚ್ಛ್ರಾಯ ಸ್ಥಿತಿಗೇರುತ್ತಿದ್ದ ಕಾಲವಾಗಿದ್ದು ಅಲ್ಲದೆ ತನ್ನ ಭಕ್ತನಾದ ಬಿಟ್ಟಿದೇವನಿಂದ ತಮ್ಮ ತತ್ವ ಪ್ರಚಾರಕ್ಕೆ ಅನುಕೂಲವಾಗಬಹುದೆಂದು ಭಾವಿಸಿದಂತೆ ತೋರುತ್ತದೆ [16].

ರಾಮಾನುಜರ ಶಿಷ್ಯರಾದ ತೊಂಡನೂರು ನಂಬಿಯು ಯಾದವ ಗಿರಿಯು ವಿಷ್ಣುವರ್ಧನನ ಅಧೀನದಲ್ಲಿರುವುದರಿಂದ ತಮ್ಮ ಜೀರ್ಣೋದ್ಧಾರಕ್ಕೆ ಅನುಕೂಲವಾಗುವುದೆಂಬ ಕಾರಣಕ್ಕೆ ಅರಸನ ಮಗಳ ಉಪದ್ರವ ಬಿಡಿಸಲು ಪ್ರೇರೇಪಿಸಿದರು[17].

ಮೇಲುಕೋಟೆ ಪಾಳಾದುದ್ದು:-

ಮಹಾವಿದ್ವಾಂಸರಾದ ನಾಥಮುನಿಗಳು ದಕ್ಷಿಣ ದೇಶದ ವೀರನಾರಾಯಣಪುರದಲ್ಲಿ (ಕಾಟ್ಟುಮನ್ನಾರ್) ಅವತರಿಸಿ ದೇಶಾದ್ಯಂತ ಸಂಚರಿಸಿ ತಮ್ಮ ಸ್ವಸ್ಥಾನದಲ್ಲಿ ನೆಲೆಸಿದ್ದರು.

ಮೇಲುಕೋಟೆಯಿಂದ ಬಂದ ಶ್ರೀ ವೈಷ್ಣವ ಯಾತ್ರಾರ್ಥಿಗಳಿಂದ ನಮ್ಮಾಳ್ವಾರ್‌ರವರ ಪ್ರಬಂಧ ಪರಿಚಯವಾಯಿತು. ನಂತರ ಅವರು ಅದನ್ನು ಆಚರಿಸುವ ಕ್ರಮವನ್ನು ಪ್ರಚಾರಪಡಿಸಿದರು. ಇವರ ಕಾಲ ಕ್ರಿ.ಶ.584. ಇವರು ದೇಶ ಸಂಚಾರದ ನಂತರ ಇವರಿಗೆ ಸುಮಾರು 60 ವರ್ಷಗಳು ಆಗಿರಬಹುದು. ಆಗ ಮೇಲುಕೋಟೆಯು ಪ್ರವರ್ಧಮಾನವಾಗಿರಬೇಕು. ಕ್ರಿ.ಶ. 1099ರಲ್ಲಿ ರಾಮಾನುಜರು ತೊಂಡನೂರಿಗೆ ಬಂದಾಗ ಮೇಲುಕೋಟೆ ಅರಣ್ಯವಾಗಿತ್ತು. ಊರುನಾಶವಾಗಲು ರಾಜತಾಂತ್ರಿಕ ಅಥವಾ ಕ್ಷಾಮಡಾಮರ ಕಾರಣವಾಗಿರಬಹುದು. ಸುಮಾರು 465 ವರ್ಷಗಳು ಊರು ಸಂಪೂರ್ಣ ನಾಶವಾಗಿದೆ. ಊರು ನಾಶವಾದ ಮೇಲೆ ಸಮೀಪದಲ್ಲಿಯೇ ಊರು ಕಟ್ಟಿ ದೈವಿಕವಾಗಿ ಯಾದವ ನಾರಾಯಣ ಪುರವೆಂದೂ ಹೆಸರು ಬಂದಿರಬಹುದು. ಇದಕ್ಕೆ ಸಾಕ್ಷಿಯಾಗಿ ಹೊಯ್ಸಳ ವಿನಯಾದಿತ್ಯ, ಎರೆಯಂಗರು ತೊಂಡನೂರನ್ನು ವಿಷ್ಣುವರ್ಧನನ ಕಾಲಕ್ಕೂ ಹಿಂದೆಯೇ ರಾಜಧಾನಿಯನ್ನಾಗಿಸಿ ಕೊಂಡಿದ್ದರು [18].

ರಾಮಾನುಜರಿಗೆ ಮೇಲುಕೋಟೆ ಅಳಿದು ಹೋಗಿದ್ದುದು ತಿಳಿದಿತ್ತೆ?

★ ಆಚಾರ್ಯರಿಂದ ರಚಿತವಾದ ಶ್ರೀ ಭಾಷ್ಯ ಗ್ರಂಥದಲ್ಲಿ ಯಾದವ ಗಿರಿ ಮಹಾತ್ಮೆಯು ವರ್ಣಿತವಾಗಿದೆ. ಅವರು ಉದಾಹರಿಸಿರುವ ನಾರದೀಯಪುರಾಣ ಮತ್ತು ಪಾಂಚರಾತ್ರ ಸಂಹಿತೆಗಳಿಂದ ಯಾದವಗಿರಿಯ ವಿಷಯ ಅವರಿಗೆ ತಿಳಿದೇ ಇರಬೇಕು.

★ ನಮ್ಮಾಳ್ವಾರ್‌ರವರು ಹಾಡಿದ 1000 ಪದ್ಯಗಳಲ್ಲಿ 'ಒರುನಾಯಕಂ' ಎಂಬ 10 ಪದ್ಯಗಳು ಸಹ ಆಚಾರ್ಯರಿಗೆ ತಿಳಿದ ವಿಷಯ. ಅವು ಪ್ರಚಾರಕ್ಕೆ ಬರುವ ಮುನ್ನ ಯಾದವಗಿರಿಯು ಅಳಿದಿತ್ತು. ನಂತರ ಆಚಾರ್ಯರು ಕ್ರಿ.ಶ.1099ರಲ್ಲಿ ಜನರ ಶಂಕೆಯನ್ನು ಪರಿಹರಿಸುತ್ತಾರೆ. ಮೇಲುಕೋಟೆಯಲ್ಲಿ ಪ್ರಬಂಧ ಆರಂಭ ಮಾಡುವ ಮೊದಲು ನಮ್ಮಾಳ್ವಾರ್ ವಿಷಯವಿರುವ (ಕಣ್ಣಿನುಣ್ ಶಿರತ್ತಾಂಬು) ಪ್ರಬಂಧ ಹೇಳಿದ ನಂತರವೇ ಮುಂದಣ ಪ್ರಬಂಧ ಹೇಳುವ ಕ್ರಮವಿದೆ [19].

★ ಆಚಾರ್ಯರು ತೊಂಡನೂರಿನಲ್ಲಿದ್ದಾಗ ವಿಷ್ಣು ವರ್ಧನನ ಮಗಳು ಪಿಶಾಚಿ ಕಾಟವಿರುವ ವಿಷಯ ತೊಂಡನೂರುನಂಬಿ ಎಂಬುವರಿಂದ ತಿಳಿದರು. ಅವರು ರಾಜನ ಮಗಳ ದೋಷನಿವಾರಣೆಗಾಗಿ ಆಚಾರ್ಯರಿಗಿತ್ತ ಆಹ್ವಾನ ತಿಳಿಸಿದರು. ಆದರೆ ಆಚಾರ್ಯರು ತಿರಸ್ಕರಿಸಲಾಗಿ ತೊಂಡನೂರು ನಂಬಿಯವರು ತಿರುನಾರಾಯಣ ಪುರವು ಬಿಟ್ಟಿದೇವನ

(ವಿಷ್ಣುವರ್ಧನನ) ಅಧೀನದಲ್ಲಿರುವುದರಿಂದ ಅವರ ಸಹಾಯದಿಂದ ಜೀರ್ಣೋದ್ಧಾರ ಮಾಡಲು ಅನುಕೂಲವಾಗುವುದೆಂದು ಪ್ರೇರಣೆ ಕೊಟ್ಟರು. ಇದು ಗುರುಪಂಪರಾ ಇತಿಹಾಸದಿಂದ ತಿಳಿದುಬರುವುದು.

★ ಆಚಾರ್ಯರು ತೊಂಡನೂರಿಗೆ ಬರಲು ಕಾರಣ. 'ಯಾದವಗಿರಿ ಚತುರ್ವೇದ ಮಂಗಲ'ವೆಂದು ಹೆಸರಿದ್ದ ಇದನ್ನು ಯಾದವಗಿರಿಯು ಆಳಿದ ನಂತರ ನೆನಪಿಗಾಗಿ ನಿರ್ಮಿಸಿದರೆಂದಾಲೋಚಿಸಿ, ಯದುಗಿರಿಯು ಪಕ್ಕದಲ್ಲೆ ಇರಬೇಕೆಂದು ತೊಂಡನೂರಿಗೆ ಬಂದಿರುವುದು ಗುರುಪರಂಪರಾ ಇತಿಹಾಸದಿಂದ ತಿಳಿದು ಬರುತ್ತದೆ [20]. ಈ ಮೇಲಿನ ಕಾರಣಗಳಿಂದ ತಿರುನಾರಾಯಣಪುರದ ಸ್ಥಳ ನಿರ್ದೇಶನವು ತಿಳಿದಿತ್ತೆಂದು ಹೇಳಬಹುದು.

ರಾಮಾನುಜರಿಂದ ಮೇಲುಕೋಟೆ ಜೀರ್ಣೋದ್ಧಾರ:

ಯತಿಶ್ರೇಷ್ಠರು ಅರಸನೊಡಗೂಡಿ ಮೇಲುಕೋಟೆಗೆ ಬಂದರು, ಜೊತೆಯಲ್ಲಿ ಬಂದಿದ್ದ ಜನಸಮೂಹ ಅವರು ತೋರಿಸಿದ ಮಾರ್ಗದಲ್ಲಿದ್ದ ಕಾಡನ್ನು ಸವರಿತು. ಬೆಟ್ಟವನ್ನೇರಿ ವೇದಪುಷ್ಕರಣಿ ಎಂಬ ಹೆಸರಿನ ಕೊಳವನ್ನು ತಲುಪಿದರು. ಅಲ್ಲಿ ಆಚಾರ್ಯರು ಸ್ನಾನಮಾಡಿ ಶ್ರೀರಂಗವನ್ನು ಬಿಡುವ ಮುನ್ನ ಕೋರೇಶರಿಂದ ಪಡೆದಿದ್ದ ಶ್ವೇತವಸ್ತ್ರವನ್ನು ಕಳಚಿ ಮುನಿಗಳಿಗೆ ಉಚಿತವಾದ ಕಾಷಾಯ ವಸ್ತ್ರವನ್ನು ಧರಿಸಿದರು. ಅವರು ಯದುಗಿರಿಯನ್ನು ಪ್ರವೇಶಮಾಡಿದುದು ಬಹುಧಾನ್ಯ ಸಂವತ್ಸರದ ಜೈಮಾಸದಲ್ಲೆಂದೂ ಆಗ ರಾಮಾನುಜರಿಗೆ ಸರಿಯಾಗಿ 82 ವರ್ಷಗಳ ವಯಸ್ಸಾಗಿತ್ತೆಂದು ವೃತ್ತಾಂತಗಳಲ್ಲಿ ಹೇಳಿದೆ. ಅಂದರೆ ಕ್ರಿ.ಶ. 1099ನೇ ವರ್ಷ [21].

ಇಲ್ಲಿಗೆ ಬಂದಾಗ ರಾಮಾನುಜರಿಗೆ ದಿಕ್ಕುತೋಚದಾಯಿತು. ಆಗ ಹರಿಜನರ ಸಹಾಯದಿಂದ ಹುತ್ತದಲ್ಲಿ ಅಡಗಿದ್ದ ತಿರುನಾರಾಯಣಸ್ವಾಮಿಯ ವಿಗ್ರಹವನ್ನು ಮೇಲೆತ್ತಿ, ಪ್ರತಿಷ್ಠಾಪಿಸಿದರು. ಅದರ ನೆನಪಿಗಾಗಿ ಇಂದಿಗೂ ಇಲ್ಲಿ 'ಪುನರ್ವಸು ಉತ್ಸವ' ನಡೆಸುತ್ತಾರೆ. ಯತಿಗಳು ವಿಗ್ರಹವನ್ನು ಪಾಂಚರಾತ್ರ ಆಗಮಗಳಲ್ಲಿ ಸೂಚಿಸಿದ ವಿಧಿಗಳಂತೆ ಸ್ವತಃ ಆರಾಧಿಸಿ ದೇವಾಲಯದಲ್ಲಿ ಪುನಃ ಪ್ರತಿಷ್ಠೆ ಮಾಡಿದರು. ಅವರಿಗೆ ಬಿಳಿ ಮಣ್ಣು ಹೇರಳವಾಗಿ ಲಭಿಸಿತು. ರಾಮಾನುಜರು ಅರಣ್ಯವಾಗಿದ್ದ ಯಾದವಗಿರಿಯನ್ನು ದೇವಸ್ಥಾನ, ಊರು, ಮನೆ, ಕೊಳ ಇತ್ಯಾದಿಗಳಾಗಿ ಜೀರ್ಣೋದ್ಧಾರ ಮಾಡಿದರು. ಊರುಕಟ್ಟಿದಾಗ ದೇವಸ್ಥಾನ,

ಕೈಂಕರ್ಯಗಳು, ರಕ್ಷಣೆ, ಅಧಿಕಾರ, ಆಡಳಿತ ಜನಗಳು ಇತ್ಯಾದಿಯಾಗಿ 530 ಮನೆಗಳಿಂದ ಜೀರ್ಣೋದ್ಧಾರ ಮಾಡಿದರು [22].

ಮೇಲುಕೋಟೆಯಲ್ಲಿರುವ 12ನೇ ಶತಮಾನದ ಪ್ರಾಚೀನ ಶಾಸನವು ಮಹಾಪ್ರಧಾನ. ಸುರಿಗೆಯ ನಾಗಿದೇವನ ಅಣ್ಣನು ದೇವಾಲಯಕ್ಕೆ ಸಲ್ಲಿಸಿದ ಸೇವೆಗಳ ಉಲ್ಲೇಖವನ್ನು ಹೊಂದಿದೆ. ಇದು ತೊಣ್ಣೂರಿನ ಸುರಿಗೆಯನಾಗಯ್ಯನ ಶಾಸನಕ್ಕೆ ಹೋಲಿಸಿದರೆ ಮೇಲುಕೋಟೆಯ ದೇವಾಲಯವು ಈತನ ಕಾಲದಲ್ಲಿ ಜೀರ್ಣೋದ್ಧಾರವಾಗಿದೆ ಎಂಬುದಕ್ಕೆ ಪುಷ್ಠಿ ನೀಡುತ್ತದೆ. ಆದ್ದರಿಂದ ಮೇಲುಕೋಟೆಯ ನಾರಾಯಣದೇವಾಲಯ ಗರ್ಭಗುಡಿಯು ಈತನ ಕಾಲದಲ್ಲಿಯೇ ನಿರ್ಮಾಣವಾಗಿರಬಹುದು [23].

ಯತಿರಾಜರು ಶ್ರೀರಂಗದಿಂದ ಪಾಂಚರಾತ್ರಾಗಮವನ್ನು ಬಲ್ಲ ದೀಕ್ಷಾಬದ್ಧರಾದ ವಾಸುದೇವತಾನುಯಾಯಿಗಳಾದ ಅರ್ಚಕರನ್ನು ಇತರ ಕೆಲಸಗಳಿಗಾಗಿ ಐವತ್ತೆರಡು ಮಂದಿ (ಐಂಬತ್ತಿರುವರ್) ಅಧಿಕಾರಿಗಳನ್ನು ಬರಮಾಡಿ ನೆಲೆಗೊಳಿಸಿದರು. ನಮ್ಮಲ್ಲಿ ಗ್ರಾಮಾಶ್ರಿತ ಆಲಯ ಮತ್ತು ಆಲಯಾಶ್ರಿತ ಗ್ರಾಮ ಎಂದು ಎರಡು ಬಗೆಯುಂಟು. ದೇವಾಲಯಕ್ಕಾಗಿ ಊರು ಎಂಬಂತಾದರೆ ಅದು ಆಲಯಾಶ್ರಿತಗ್ರಾಮ. ಆಚಾರ್ಯರ ತರುವಾಯ ಮೇಲುಕೋಟೆಯು ನೂರಾರು ವರ್ಷಗಳಕಾಲ ಆಲಯಾಶ್ರಿತ ಗ್ರಾಮವಾಗಿ ಮೆರೆಯಿತು [24]. ರಾಮಾನುಜರು ಮೇಲುಕೋಟೆಯಲ್ಲಿ ಯತಿರಾಜ ಮಠವನ್ನು ಸ್ಥಾಪಿಸಿದರು. ಮುಂದೆ ಅಲ್ಲೊಬ್ಬ ಸನ್ಯಾಸಿ ವಾಸಿಸಿ ದೇವಾಲಯದ ಆಡಳಿತವನ್ನು ನೋಡಿಕೊಳ್ಳುವ ಏರ್ಪಾಡು ಮಾಡಲಾಯಿತು. ಈ ಮಠವು ಶ್ರೀವೈಷ್ಣವ ಧರ್ಮ ಜಾಗೃತಿಯನ್ನುಂಟು ಮಾಡಲಾರಂಭಿಸಿತು.

ಉತ್ಸವ ಮೂರ್ತಿ ವಿಚಾರ:

ದೇವಸ್ಥಾನಕ್ಕೆ ಒಂದು ಉತ್ಸವ ವಿಗ್ರಹದ ಅವಶ್ಯಕತೆಯಿತ್ತು. ಮತ್ತೊಮ್ಮೆ ದೇವರು ಯತಿಗಳಿಗೆ ಗೋಚರಿಸಿ 'ರಾಮಪ್ರಿಯ' ಎಂಬ ಹೆಸರಿನ ವಿಗ್ರಹ ದೆಹಲಿಯ ದೊರೆ ಬಾದಷಾಹನ ಬಳಿ ಇರುವುದಾಗಿ ಅದನ್ನು ತರಬೇಕೆಂದು ತಿಳಿಸಿದರು. ತಕ್ಷಣ ಆಚಾರ್ಯರು ಕೆಲವು ಜನರೊಂದಿಗೆ (ಹರಿಜನರು ಮುಖ್ಯ) ದೆಹಲಿಗೆ ಹೋದರು. ಬಾದಷಾಹನ ಮನಸ್ಸನ್ನು ಒಲಿಸಿಕೊಂಡು ವಿಗ್ರಹವನ್ನು ಯಾಚಿಸಿದರು. ಅದು ಇಲ್ಲಿರುವುದಾದರೆ ನೀವು ಕರೆದು ಬರಮಾಡಿಕೊಡು ತೆಗೆದುಕೊಂಡು ಹೋಗಿ ಎಂದನಂತೆ. ಆ ಪ್ರಕಾರ ಯತಿಗಳು ಕರೆದ ತಕ್ಷಣ

ಅದು ಅಂತಃಪುರವನ್ನು ಬಿಟ್ಟು ಓಡಿಬಂದು ರಾಮಾನುಜರ ಸಮೀಪನಿಂತಿತು. ನಂತರ ಮೂರ್ತಿಯೊಂದಿಗೆ ಮರುಪ್ರಯಾಣಮಾಡಿದರು.

ದೊರೆಯ ಮಗಳು ಬೀಬಿನಾಚ್ಚಿಯರ್ (ವರನಂದಿ) ಆ ಮೂರ್ತಿಯನ್ನು ತನ್ನ ಪ್ರಿಯತಮನೆಂದು ಭಾವಿಸಿದ್ದಳು. ಹಾಗಾಗಿ ಅವಳು ಮೂರ್ತಿಯ ಹಿಂದೆಯೇ ಬಂದಳು. ಭಕ್ತಳೆಂದು ಅರಿತ ಆಚಾರ್ಯರು ಅವಳಿಗೆ ದೇವಸ್ಥಾನಕ್ಕೆ ಪ್ರವೇಶನೀಡಿದರು. ಮುಂದೆ ಆಕೆ ಭಗವಂತನ ಸೇವೆಯಲ್ಲಿಯೇ ತನ್ನ ಉಳಿದ ಕಾಲ ಕಳೆದಳು. ಕೊನೆಗೆ ಆಕೆಯ ಪೂರ್ಣ ಆಕೃತಿ ವಿಗ್ರಹದಲ್ಲಿ ಲೀನವಾಯಿತು ಎನ್ನಲಾಗಿದೆ. ಮುಂದೆ ಅದಕ್ಕೆ ಉತ್ಸವಗಳು ನಡೆಯಲು ತಕ್ಕ ಏರ್ಪಾಡು ಮಾಡಲಾಯಿತು.

3.3 ಶ್ರೀ ರಾಮಾನುಜರ ವಿಶಿಷ್ಟಾದ್ವೈತ ತತ್ವ:

ಮಾನವನು ಕೇವಲ ಸಾಮಾಜಿಕ ಜೀವಿ ಮಾತ್ರವಾಗಿರದೆ ಧಾರ್ಮಿಕ ಅಥವಾ ಆಧ್ಯಾತ್ಮಿಕ ಜೀವಿಯೂ ಆಗಿರುವನು. ಮಾನವ ಸಹಜವಾದ ಜೈವಿಕ, ಆರ್ಥಿಕ ಹಾಗೂ ಸಾಮಾಜಿಕ ಅಗತ್ಯಗಳೊಂದಿಗೆ ಧಾರ್ಮಿಕ ಅಗತ್ಯವನ್ನು ಹೊಂದಿದ್ದಾನೆ. 'ಮನುಷ್ಯ ಕೇವಲ ಆಹಾರದಿಂದ ಬದುಕಲಾರ' ಎಂಬ ಉಕ್ತಿಯಂತೆ, ತನ್ನ ಭೌತಿಕವಾದ ಅಗತ್ಯಗಳು ಈಡೇರಿದ ನಂತರವೂ ಅತೃಪ್ತನಂತೆ ಪಾರಮಾರ್ಥಿಕ ವಿಷಯಗಳತ್ತ ವಾಲುವುದು ಮಾನವನ ಧಾರ್ಮಿಕ ಸ್ವಭಾವದ ಕುರುಹು. ಆತನ ಧಾರ್ಮಿಕ ಪ್ರವೃತ್ತಿಯು ಅವನನ್ನು ಪ್ರಾಣಿಗಳಿಂದ ಪ್ರತ್ಯೇಕಿಸಿದೆ. ಜೇಮ್ಸ್ ಜಿ.ಫ್ರೇಜರ್‌ರ ಪ್ರಕಾರ ''ಮಾನವನಿಗಿಂತಲೂ ಶ್ರೇಷ್ಠವಾದ ಶಕ್ತಿಯು ನಿಸರ್ಗದ ಮತ್ತು ಮಾನವ ಜೀವನದ ಆಗುಹೋಗುಗಳನ್ನು ನಿರ್ದೇಶಿಸುತ್ತದೆ ಮತ್ತು ನಿಯಂತ್ರಿಸುತ್ತದೆ ಎಂಬ ನಂಬಿಕೆಯೇ ಧರ್ಮ'' [25].

ರಾಮಾನುಜರ ಜನನವಾಗುವುದಕ್ಕೆ ಮುಂಚೆಯೇ ಸಾಧಕರು ಭಗವತ್ಸಾಕ್ಷಾತ್ಕಾರಕ್ಕೆ ಅನೇಕ ಮಾರ್ಗಗಳನ್ನು ಕಂಡಿದ್ದರು. ಇಂದು ವಿಶಿಷ್ಟಾದ್ವೈತ ಎಂದು ಕರೆಯುವ ಹಾದಿಯೂ ಹಿಂದಿನವರಿಗೆ ಅರಿವಾಗಿತ್ತು. ರಾಮಾನುಜರು ಇದಕ್ಕೊಂದು ದರ್ಶನ ರೂಪವನ್ನಿತ್ತು ಸಿದ್ಧಾಂತದ ಚೌಕಟ್ಟಿನಲ್ಲಿ ಅಳವಡಿಸಿದರು. ವೇದಗಳಲ್ಲೇ ಆರಂಭಗೊಂಡು ಆಳ್ವಾರುಗಳಿಂದ, ನಾಥಮುನಿ, ಯಾಮುನಾಚಾರ್ಯರಿಂದ ಪೋಷಿಸಲ್ಪಟ್ಟ ನಿಲುವೊಂದರ ಪರಾಕಾಷ್ಠೆಯೇ ಈ ಸಿದ್ಧಾಂತ [26]. ಅವರ ಅಸಾಧಾರಣ ಪ್ರತಿಭೆ ಹಾಗೂ ಆತ್ಯಂತಿಕ

ಪ್ರಯತ್ನಗಳಿಂದ ಭಗವಂತನ ಆಧ್ಯಾತ್ಮಿಕ ಅನುಭವವನ್ನು ಎತ್ತಿಹಿಡಿಯುವ ವಿಶಿಷ್ಟಾದ್ವೈತ ನಿಲುವನ್ನು ವೈಚಾರಿಕ ತತ್ವ ದರ್ಶನ ವಿಧಾನಗಳಿಗೆ ಬಾಧಕವಿಲ್ಲದಂತೆ ಕ್ರಮ ಬದ್ಧವಾಗಿ ಮಂಡಿಸಲು ಸಾಧ್ಯವಾಯಿತು. ಅವರ ಸಿದ್ಧಾಂತ ವಿಶ್ವ ಸಿದ್ಧಾಂತ. ಸಕಲ ಜೀವಕೋಟಿಯ ಮಂಗಳವಾದ ಮುಕ್ತಿ. ಅದು ಕೇವಲ ಒಂದು ಗುಂಪಿನವರ ಮಾರ್ಗದರ್ಶನಕ್ಕಲ್ಲ, ಸಮರ್ಥಗುರುವಿನ ಮೂಲಕ ಸಿದ್ಧಾಂತಗಳು ಅರ್ಥವಾದಾಗ ಅವುಗಳ ಮೌಲಿಕ ಅಂತಃಸತ್ವಗಳು, ಮಾನವೀಯ ಮಿಡಿತಗಳು ಅಂತಃಕರಣವನ್ನೆಲ್ಲಾ ಆವರಿಸುವಂತಿದೆ [27].

ವಿಶಿಷ್ಟಾದ್ವೈತ ಶಬ್ದಾರ್ಥ ವಿವರಣೆ:

ವಿಶಿಷ್ಟವೆಂದರೆ ವಿಶೇಷಣಗಳೊಡನೆ ಕೂಡಿರುವ ವಿಶೇಷ್ಯ. ಇದನ್ನು ಸವಿಶೇಷ ಎಂದೂ ಹೇಳಬಹುದು. ವಿಶಿಷ್ಟದ ಅದ್ವೈತವೆಂದರೆ ಅಂತಹ ವಿಶೇಷ್ಯದ ಏಕತ್ವ ಅಂದರೆ ಒಂದೇ ಆಗಿರುವಿಕೆ ಎಂದು ಅರ್ಥ [28]. ಇಲ್ಲಿ ಚಿತ್, ಅಚಿತ್ ಎಂಬ ಪದಾರ್ಥಗಳು ವಿಶೇಷಣಗಳಾಗಿಯೂ, ಇವುಗಳೊಡನೆ ಯಾವಾಗಲೂ ಸೇರಿಕೊಂಡೇ ಇರುವ ಭಗವಂತನು ವಿಶೇಷವಾಗಿಯೂ ಅಂತಹಾ ವಿಶೇಷ್ಯವು ಮತ್ತೊಂದಿಲ್ಲವಾದುದರಿಂದ ವಿಶೇಷ್ಯವು ಏಕವಾಗಿಯೂ ಇರುವುದರಿಂದ ಈ ಸಿದ್ಧಾಂತ ವಿಶಿಷ್ಟಾದ್ವೈತ ಸಿದ್ಧಾಂತವಾಯಿತು.

ಮೂಲಭೂತ ಅಂಶವಾದ ದೇವರು, ಗುಣಲಕ್ಷಣರೂಪವಾದ ಅಂಶಗಳನ್ನು ನಿರ್ದೇಶಿಸುತ್ತಾನೆ. ನಿಯಂತ್ರಕನಾಗಿರುತ್ತಾನೆ. ಪ್ರಕೃತಿ ಮತ್ತು ಜೀವಾತ್ಮಗಳಿಗೆ ತಮ್ಮದೇ ಆದ ನೈಜ ಅಸ್ತಿತ್ವವಿದ್ದರೂ, ಅವು ತಮ್ಮ ಎಲ್ಲಾ ಪರಿಸ್ಥಿತಿಗಳಲ್ಲೂ ಸಂಪೂರ್ಣವಾಗಿ ದೇವರ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ. ಇದು ಆತ್ಮಗಳ ಆತ್ಮನಾದ ಪ್ರಕೃತಿಯ ಆತ್ಮನಾದ ದೇವರು ಒಬ್ಬನೇ ಎಂಬುದನ್ನು ಎತ್ತಿ ತೋರಿಸುತ್ತದೆ. ಅಂದರೆ ವೈಶಿಷ್ಟ್ಯಪೂರ್ಣವಾದ ಅದ್ವೈತವನ್ನು ಇದು ಬೋಧಿಸುತ್ತದೆ. ಪ್ರಕೃತಿ ಹಾಗೂ ಜೀವಾತ್ಮಗಳು ಪರಸ್ಪರ ಭಿನ್ನವಾದವು. ದೇವರಿಂದಲೂ ಅವು ಭಿನ್ನ. ಏನೇನು ಅಸ್ತಿತ್ವದಲ್ಲಿದೆಯೇ ಅವೆಲ್ಲವೂ ದೇವರಲ್ಲಿಯೇ ಇವೆ ಎನ್ನುವುದನ್ನು 'ವಿಶಿಷ್ಟಾದ್ವೈತ' ಎಂಬ ಪದ ಶ್ರುತಪಡಿಸುತ್ತದೆ [30].

ವಿಶಿಷ್ಟಾದ್ವೈತಸಾರ:

ರಾಮಾನುಜರು ಪ್ರಕೃತಿ (ಅಚಿತ್), ಜೀವ (ಚಿತ್) ಮತ್ತು ದೇವರು (ಈಶ್ವರ) - ಈ ಮೂರು ಬಗೆಯ ವಸ್ತುಗಳನ್ನು ಪರಮ ಎಂದು ಸ್ವೀಕರಿಸುತ್ತಾರೆ. ಪ್ರಕೃತಿ ಮತ್ತು

ಜೀವಗಳು ದೇವರನ್ನು ಅವಲಂಬಿಸಿದ್ದು ಅವನ ಶರೀರ ಅಥವಾ ಗುಣಗಳೆನಿಸಿಕೊಳ್ಳುತ್ತವೆ. ಆ ಸಂಬಂಧವು ನಮ್ಮ ದೇಹ - ಆತ್ಮಗಳ ನಡುವಣ ಸಂಬಂಧದಂತೆ ಎಂದು ಕಲ್ಲಿಸಿಕೊಳ್ಳಬೇಕು. ಜೀವಾತ್ಮಗಳು ಮತ್ತು ಪ್ರಕೃತಿ ಭಗವಂತನ ಶರೀರವಾಗುತ್ತವೆ. ಜೀವಾತ್ಮ ಮತ್ತು ಪ್ರಕೃತಿಗಳ ಕೇಂದ್ರಿಸತ್ಯವೇ ದೇವರು. ದೇವರಿಲ್ಲದೆ ಇವೆರಡರಲ್ಲಿ ಯಾವುದೂ ಅಸ್ತಿತ್ವದಲ್ಲಿರಲಾರದು. ಅವನಿಂದ ಎಷ್ಟು ಮಾತ್ರಕ್ಕೂ ಪ್ರತ್ಯೇಕವಾಗಿರಲಾರವು. ಹೀಗೆ ಈ ಮೂರು ಸತ್ಯಗಳೂ ಪರಮ, ಚಿರಂತನ ಮತ್ತು ಪರಸ್ಪರ ವಿಶಿಷ್ಟವಾದವುಗಳು.

ಪ್ರಕೃತಿ, ಜೀವ, ಈಶ್ವರ - ಅರ್ಥವಿವರಣೆ:

ಪ್ರಕೃತಿ:- (ಅಚಿತ್) ಇದು ಸತ್ವ, ರಜಸ್ಸು, ತಮಸ್ಸುಗಳೆಂಬ ಮೂರು ಗುಣವುಳ್ಳದಾಗಿರುವುದರಿಂದ ತ್ರಿಗುಣವೆನಿಸಿರುವುದು. ಪ್ರಕೃತಿಯು ಭಗವಂತನ ಒಂದು ಅಂಶ, ಅವನ ಶರೀರ, ಭಗವಂತನಿಂದ ಸ್ವತಂತ್ರ್ಯವಾಗ ನಿಲ್ಲುವಂಥದಲ್ಲ, ದೇವರ ಇಚ್ಛೆಯಂತೆ ಪ್ರಕೃತಿಯಿಂದ ಇಡೀ ವಿಶ್ವವು ಅರಳುತ್ತದೆಯಲ್ಲದೆ ಸಂಪೂರ್ಣವಾಗಿ ಅವನ ನಿಯಂತ್ರಣದಲ್ಲಿರುತ್ತದೆ. ಪ್ರಕೃತಿಯು ಜೀವನ ಆವಾಸಸ್ಥಾನ. ಆ ಮೂಲಕ ಪರೋಕ್ಷವಾಗಿ ಭಗವಂತನ ಆವಾಸಸ್ಥಾನವೂ ಹೌದು. ಅವುಗಳ ನಡುವಣ ಸಂಬಂಧ ಎಂದರೆ ದ್ರವ್ಯ ಮತ್ತು ಜೀವ ಅಥವಾ ಪ್ರಕೃತಿ ಮತ್ತು ಅದರಿಂದ ಉದ್ಭವವಾದುವುಗಳು. ಇವುಗಳ ನಡುವಣ ಸಂಬಂಧ ಬೇರ್ಪಡಿಸಲಾಗದಂಥದ್ದು. ಪ್ರಕೃತಿ ಜನ್ಯಗಳು ಜೀವಗಳಿಗೆ ಅವುಗಳ ಪೂರ್ವಕರ್ಮಗಳಿಗನು ಗುಣವಾಗಿ ಯೋಗ್ಯವಾದ ಶರೀರಗಳನ್ನು ಕೊಡುತ್ತವೆ[31].

ಜೀವ:- (ಚಿತ್) ಪ್ರಕೃತಿಯ ಹಾಗೆಯೇ ಜೀವವೂ ಸಹ ಭಗವಂತನ ಒಂದು ಅಂಶ. ಭಗವಂತನಿಂದ ಪ್ರತ್ಯೇಕವಾಗಿದ್ದರೂ, ಜೀವವು ಸಂಪೂರ್ಣವಾಗಿ ಆತನನ್ನೇ ಅವಲಂಬಿಸಿದೆ. ಭಗವಂತನು ಜೀವದ ಆತ್ಮವಾಗಿದ್ದು ಒಳಗಿನಿಂದ ನಿಯಂತ್ರಿಸುವವನಾದ್ದರಿಂದ ಜೀವವು ಭಗವಂತನ ಶರೀರವೇ. ಜೀವಗಳು ಅನೇಕವಾದರೂ ಅವುಗಳ ಮೂಲಭೂತ ಸ್ವರೂಪದಲ್ಲಿ ವ್ಯತ್ಯಾಸವಿಲ್ಲ. ಗಾತ್ರದಲ್ಲಿ ಅದು ಪರಮಾಣುವಿನ ಸ್ವರೂಪದ್ದು. ಸಹಜ ಸ್ಥಿತಿಯಲ್ಲಿ ಅದರ ಧರ್ಮಭೂತಜ್ಞಾನವು ವಿಕಾಸಗೊಂಡು ಪ್ರತಿಯೊಂದನ್ನೂ ಅರಿಯ ಬಲ್ಲದ್ದಾಗುತ್ತದೆ. ಆದರೆ ಪೂರ್ವಕರ್ಮಫಲದಿಂದಾಗಿ, ಸಂಸಾರದಲ್ಲಿರುವಾಗ ಈ ಜ್ಞಾನವು ಕುಂಠಿತವಾಗುತ್ತದೆ. ಆದರೆ ಇಲ್ಲವೆಂದಾಗುವುದಿಲ್ಲ. ಭಗವಂತನ ಸಾನಿಧ್ಯದ ಮೂಲಕ ಅವು ವಿಕಾಸವಾಗುವುದೇ ಮೋಕ್ಷ.

ಈಶ್ವರ:- ಭಗವಂತನೆಂದರೆ ಸರ್ವಶಕ್ತ, ಸರ್ವವ್ಯಾಪಿ ಮತ್ತು ಪರಮದಯಾಮಯನಾದ ಆತನು ಸ್ವಭಾವತಃ ಪ್ರಜ್ಞಾಸ್ವರೂಪಿ, ಆನಂದ ಸ್ವರೂಪಿ, ಅಂತರ್ಯಾಮಿಯಾಗಿದ್ದುಕೊಂಡು ಪ್ರಕೃತಿಯನ್ನು ಜೀವರನ್ನೂ ನಿಯಂತ್ರಿಸುವವನು. ಪ್ರಕೃತಿಯನ್ನೂ ಜೀವರನ್ನೂ ತನ್ನ ಶರೀರವಾಗಿ ಉಳ್ಳ ಭಗವಂತನು ಒಬ್ಬನೇ. ಆತನೇ ತನ್ನ ಉದ್ದೇಶಕ್ಕಾಗಿ ಅವುಗಳನ್ನು ಇಟ್ಟುಕೊಂಡು ನಿಯಂತ್ರಿಸುತ್ತಿರುವವನು. ಭಗವಂತನನ್ನು ಅಂಶಗಳಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲವಾದ್ದರಿಂದ ಅವನು ನಿರ್ದೇಶ್ಯನು, ಅನಿರ್ದೇಶ್ಯನಲ್ಲ. ಅದ್ವೈತಿಗಳ ವಾದವನ್ನು ರಾಮಾನುಜರು ಒಪ್ಪದೆ ಈಶ್ವರನು ಸಾಕಾರ, ಆನಂದಮಯ, ಪುರುಷೋತ್ತಮ ಮತ್ತು ಬ್ರಹ್ಮಾಂಡ ಸೃಷ್ಟಿಕರ್ತ ಎಂದರು. ಭಗವಂತನು ನಿರ್ಗುಣನಲ್ಲ ಅವನು ಸುಗುಣ. ಸರ್ವ ಕಲ್ಯಾಣಗುಣಗಳ ಗಣಿ ಎಂದಿದ್ದಾರೆ. ಮುಂದುವರೆದು ರಾಮಾನುಜರ ಜ್ಞಾನಸಿದ್ಧಾಂತವನ್ನು ಸಂಗ್ರಹವಾಗಿ ಪರಿಗಣಿಸಿದ್ದಾರೆ. ಇವರ ಪ್ರಕಾರ ಧರ್ಮ ಭೂತಜ್ಞಾನವು ತಾನೇ ಬೆಳಗುವುದಲ್ಲದೆ ಬೇರೆ ವಸ್ತುಗಳನ್ನೂ ಬೆಳಗಿಸುತ್ತದೆ. ಧರ್ಮಭೂತಜ್ಞಾನದ ರೂಪಾಂತರವೇ ಆದ ಜ್ಞಾನವು ಮನಸ್ಸಿನ ಮೂಲಕ ಕೆಲಸ ಮಾಡುತ್ತದೆ. ಮನಸ್ಸು ವಿಷಯವೊಂದಕ್ಕೆ ಸಂಬಂಧಿಸಿದಂತೆ ಜೀವಾತ್ಮನಿಗೆ ಅದನ್ನು ಅನಾವರಣ ಮಾಡುತ್ತದೆ.

ರಾಮಾನುಜರ ಪ್ರಕಾರ ಭಕ್ತಿಯು ಕೇವಲ ಹೃತ್ಪೂರ್ವಕ ಧ್ಯಾನ ಮಾತ್ರವಲ್ಲ, ಭಗವಂತನ ಪ್ರೇಮ ಪೂರ್ಣ ಪರಿಭಾವನೆ. ಕೊನೆಯಲ್ಲಿ ಗುರಿ ಮುಟ್ಟುವವರೆಗೂ ಸಾಗುವ ನಿರಂತರ ಧ್ಯಾನಕ್ರಿಯೆ. ಭಗವಂತನ ಅನುಗ್ರಹವಾಗಲು ತಿಳಿಯಾದ, ಆಳವಾದ ಭಕ್ತಿಯೇ ದಾರಿ. ಈ ಭಕ್ತಿಗೆ ಜಾತಿ, ಮತ, ಕುಲ ಇವು ಅಡ್ಡಿ ಬರುವುದಿಲ್ಲ. ಭಕ್ತಿಯು ಪರಿಪೂರ್ಣವಾದುದರ ಫಲವಾಗಿ ಪರಮಾತ್ಮನ ಸ್ಪಷ್ಟವಾದ ಗ್ರಹಿಕೆ ಸಾಧ್ಯವಾಗುತ್ತದೆ [32].

ಸ್ವಾರ್ಥಾಂಧತೆ ಹಾಗೂ ಅದರಿಂದ ಉಂಟಾಗುವ ಕೇಡುಗಳಿಂದ ರಕ್ಷಿಸಿಕೊಂಡು ಮೇಲಕ್ಕೇರುವುದಕ್ಕೆ ಸಮೀಪವಾದ ಉಪಾಯವೇ ನಿಷ್ಕಾಮಕರ್ಮಯೋಗ. ತಾವು ಮಾಡುವುದೆಲ್ಲಾ ಪರಮಾತ್ಮನ ಸಂಕಲ್ಪದಿಂದಲೇ, ಫಲವೂ ಅವನದೇ ಎಂಬ ನಿಷ್ಠೆಯೇ ನಿಷ್ಕಾಮಕರ್ಮಯೋಗ. ಇದರ ಅನುಸರಣೆಯಿಂದ ಜೀವಾತ್ಮನಿಗೆ ತಾನು ಪರಮಾತ್ಮನ ಶೇಷ ಎಂಬ ತಿಳಿವಳಿಕೆ ಉಂಟಾಗಿ ದೃಢವಾಗುತ್ತದೆ. ಹೀಗೆ ಅವನು ಜ್ಞಾನ ಯೋಗಿಯಾಗುತ್ತಾನೆ[33]. ತಾನು ಭಗವಂತನಿಂದ ವ್ಯಾಪ್ತನಾಗಿದ್ದೇನೆ ಎಂಬಿ ಅರಿವು ಹಾಗೂ ಅನುಭವವೇ

[illegible]

ಭಕ್ತಿಯೋಗದ ಚರಮಸಿದ್ಧಿ. ಹೀಗೆ ಜ್ಞಾನ, ಭಕ್ತಿ, ಕರ್ಮಗಳ ಸಂಗಮವಾಗುತ್ತದೆ.

ಅತ್ಯಂತ ಮಹತ್ವವಾದುದು ಶರಣಗತಿ ತತ್ವ. ಪರಮಪುರುಷನನ್ನು ಸಾಕ್ಷಾತ್ಕರಿಸಿಕೊಳ್ಳಬೇಕೆಂಬ ಅತ್ಯುತ್ಕಟವಾದ ಇಚ್ಛೆಯಿಂದ ಚೇತನನು ತನ್ನ ಅಹಂಕಾರವನ್ನು ಅಡಗಿಸಿಕೊಂಡು, ತನ್ನ ಹೊರೆಯನ್ನು ಭಗವಂತನಿಗೆ ಒಪ್ಪಿಸಿ, ತನ್ನದೆನ್ನುವುದು ಯಾವುದೂ ಇಲ್ಲ, ಪರಮಾತ್ಮನು ಕುಣಿಸಿದಂತೆ ಕುಣಿಯುವವನು, ಅವನು ನನ್ನನ್ನು ಎಂದೂ ಕೈ ಬಿಡದೆ ಉದ್ಧರಿಸುತ್ತಾನೆ ಎಂಬೀ ಬಂಡೆಯಂತಹ ಅಚಲ ನಂಬಿಕೆಯೇ ಈ ಶರಣಾಗತಿ ತತ್ವದ ತಿರುಳು[34]. ಪರಮಾತ್ಮನಲ್ಲಿ ನಂಬಿಕೆಯಿಟ್ಟು, ಅಹಂಕಾರವನ್ನು ಬಲಿಕೊಟ್ಟಾಗ ಭಕ್ತನನ್ನು ಸ್ವೀಕರಿಸುವುದಕ್ಕೆಂದು ಭಗವಂತನೇ ಮುಂದೆ ಬರುತ್ತಾನೆ. ಧ್ಯಾನ ಪೂರ್ಣ ಭಕ್ತಿಯ ಮಾರ್ಗಕ್ಕೆ ತಾನು ಯೋಗ್ಯನಲ್ಲವೆಂಬ ಭಾವವಿರುವವರಿಗೆ, ಭಕ್ತಿ ಪರಿಪೂರ್ಣವಾಗುವವರೆಗೆ ಕಾಯುವ ವ್ಯವಧಾನವಿಲ್ಲದಿರುವವರಿಗೆ ಪ್ರಪತ್ತಿಯೇ (ಪರಮಾತ್ಮನಲ್ಲಿ ಅನುವರ್ತನೆ) ನೇರವಾದ ಮಾರ್ಗ. ಸರ್ವರಿಗೂ ಮುಕ್ತ ಅವಕಾಶ, ಯಾವ ಭೇದಕ್ಕೂ ಎಡೆಯೇ ಇಲ್ಲ. ಇವನ್ನು ಪಕ್ಷಿಗಳು, ಗೋವು, ಕುದುರೆ ಮತ್ತು ಆನೆ ಮೊದಲಾದ ಪ್ರಾಣಿಗಳಿಗೂ ವಿಸ್ತರಿಸಿರುವುದು ಈ ತತ್ವದ ಅಭೂತಪೂರ್ವವಾದ ವೈಶಿಷ್ಟ್ಯ. ಈ ಮಹತ್ತರವಾದ ಔದಾರ್ಯ, ಇಡೀ ಜೀವರಾಶಿಯ ಉದ್ಧಾರದ ಬಗ್ಗೆ ಇದ್ದ ಕಳಕಳಿ ಅವಿಸ್ಮರಣೀಯವಾದುದು.

ಶ್ರೀರಾಮಾನುಜರ ಕೃತಿಗಳು:

ವೇದಾರ್ಥಸಂಗ್ರಹ: ಪರಸ್ಪರ ವಿರೋಧಿಯಂತೆ ಭಾಸವಾಗುವ ಶ್ರುತಿವಾಕ್ಯಗಳನ್ನೆಲ್ಲ ಏಕರೂಪಕ್ಕೆ ತಂದು, ವಿಶಿಷ್ಟಾದ್ವೈತ ಮತದ ಮುಖ್ಯ ತತ್ವಗಳನ್ನು ಮುಂದಿಡುವ ಗ್ರಂಥ.

ಶ್ರೀಭಾಷ್ಯ: ಬಾದರಾಯಣರ ಬ್ರಹ್ಮಸೂತ್ರಗಳಿಗೆ ಬರೆದಿರುವ ವಿವರವಾದ ವ್ಯಾಖ್ಯಾನ.

ಗೀತಾಭಾಷ್ಯ: ಭಗವದ್ಗೀತೆಗೆ ಬರೆದಿರುವ ವಿವರವಾದ ವ್ಯಾಖ್ಯಾನ.

ವೇದಾಂತದೀಪ: ಬ್ರಹ್ಮಸೂತ್ರಗಳಿಗೆ ಬರೆದಿರುವ ಸಂಗ್ರಹ ವ್ಯಾಖ್ಯಾನ

ವೇದಾಂತಸಾರ: ಪ್ರಾರಂಭಿಕ ವಿದ್ಯಾರ್ಥಿಗಳನ್ನುದ್ದೇಶಿಸಿ ಬರೆದಿರುವ ಬ್ರಹ್ಮಸೂತ್ರಗಳ ಮೇಲಣ ಸಂಗ್ರಹ ವ್ಯಾಖ್ಯಾನ.

ಶರಣಾಗತಿ ಗದ್ಯ ಮತ್ತು ಶ್ರೀರಂಗ ಗದ್ಯ: ಭಗವಂತನಲ್ಲಿ ಶರಣಾಗತಿಯನ್ನು ಪ್ರತಿಪಾದಿಸುವ ಗ್ರಂಥ.

ನಿತ್ಯಗ್ರಂಥ: ಭಕ್ತರ ಮಾರ್ಗದರ್ಶನಕ್ಕಾಗಿ ಬರೆದಿರುವ, ನಿತ್ಯಾನುಷ್ಠಾನಗಳನ್ನು, ಅದರಲ್ಲೂ ಭಗವಂತನ ಉಪಾಸನೆಯನ್ನು ಕುರಿತಾದ ನಿತ್ಯಾನುಷ್ಠಾನಗಳನ್ನು ವಿವರಿಸುವ ಪುಟ್ಟ ಗ್ರಂಥ.

ರಾಮಾನುಜರ ಒಟ್ಟು ಒಂಭತ್ತು ಕೃತಿಗಳು ತತ್ವದರ್ಶನದ ಸಾಮಂಜಸ್ಯದ, ಪರಿಣತ ಪ್ರತಿಪಾದನೆಯ ಕಲ್ಪನೆಯನ್ನು ತಂದು ಕೊಡುತ್ತದೆ. ಬ್ರಹ್ಮಸೂತ್ರಗಳ ಮೇಲಣ ವ್ಯಾಖ್ಯಾನವಾದ ಶ್ರೀಭಾಷ್ಯವು ಅವರ ತಾತ್ವಿಕ ಅಂತದೃಷ್ಟಿಯು ಸಾಮಾನ್ಯವಾದುದಲ್ಲವೆಂಬ ಭಾವನೆಯನ್ನುಂಟುಮಾಡುತ್ತದೆ. ''ಸತ್ವಪೂರ್ಣ ಅರ್ಹತೆ ಹಾಗೂ ಪರಿಪೂರ್ಣತೆಗಳ ಮೂಲಕ ಅವರ ಕೃತಿಯು ಬ್ರಹ್ಮಸೂತ್ರಗಳಲ್ಲಿ ಅದ್ವೈತದ ಆಧಾರವನ್ನು ಕಂಡುಕೊಳ್ಳುವ ಹಿಂದಿನವರ ಎಲ್ಲಾ ಪ್ರಯತ್ನಗಳನ್ನೂ ಮೀರಿಸಿದೆ ಎಂದು ಭಾವಿಸುವುದರಲ್ಲಿ ತಪ್ಪಿಲ್ಲ'' ಎಂದು ಪ್ರೊ. ಎ.ಬಿ.ಕೀತ್ ಅವರು ಹೇಳುತ್ತಾರೆ.

ಶ್ರೀ ರಾಮಾನುಜರ ಮಾನವೀಯತೆ:

ರಾಮಾನುಜರು ಮಹಾನ್ ಮಾನವತಾವಾದಿಯಾಗಿದ್ದರು. ಇವರು ಕೇವಲ ದಾರ್ಶನಿಕರಷ್ಟೇ ಅಲ್ಲದೆ ಸಮಾಜ ಸುಧಾರಕರು ಹೌದು. ಎಲ್ಲರಿಗೂ ಲಭ್ಯವಾಗಬಹುದಾದ ದೇವರ ಕಲ್ಪನೆಯನ್ನು ಭಕ್ತಿಯೆಂಬ ನೆಲಗಟ್ಟಿನಿಂದ ದೊರಕಿಸಿದ್ದಾರೆ. ಭಕ್ತಿಯ ಮೂಲಕ ಯಾವುದೇ ಜಾತಿಯ ಅಡಚಣೆಯಿಲ್ಲದೆಯೇ ಅತ್ಯಂತ ಎತ್ತರದ ಸ್ಥಾನ ಪಡೆಯಲು ಸಾಧ್ಯ ಎಂದ ಇವರು ತಮ್ಮ ಜೀವನದ ರೀತಿಯ ಮೂಲಕ ನಿರೂಪಿಸಿದ್ದಾರೆ. ಇವರ ಕಾಲದ ಜಾತಿಯ ಅಂತಃಕಲಹ ಸಡಿಲಗೊಂಡು ಭಕ್ತಿಮಾರ್ಗ ಹಿಂಬಾಲಕರಾಗಿ ಎಲ್ಲಾ ಜಾತಿಯ ಜನಗಳೂ ಒಗ್ಗೂಡಿದ್ದರು. ಇವರ ಮಾರ್ಗವೇ ಶ್ರೀಬಸವಣ್ಣನವರಿಗೆ ಪ್ರೇರಣೆಯಾಗಿತ್ತೆಂಬುದು ಅತಿಶಯೋಕ್ತಿಯ ಮಾತಾಗದು. ನೆಹರು ಅವರ'' ಭಾರತಕ್ಕೆ ಅಗತ್ಯವಾದುದು ಶಂಕರರ ಬುದ್ಧಿ ಮತ್ತು ರಾಮಾನುಜರ ಹೃದಯವಂತಿಕೆ'' ಎಂಬ ನುಡಿಯು ಅವರ ಔದಾರ್ಯಕ್ಕಿಡಿದ ಕನ್ನಡಿಯೆಂತಿದೆ.

ಇದಕ್ಕೆ ಸಾಕ್ಷಿ ಎಂಬಂತೆ, ರಾಮಾನುಜರು ತಮ್ಮ ಸಂದೇಹಗಳ ಪರಿಹಾರಕ್ಕೆಗೋಷ್ಠಿಪೂರ್ಣರ ಬಳಿಗೆ ಬಂದರು. ಅವರು ರಾಮಾನುಜರ ಸಹನೆ ದೃಢ ನಿರ್ಧಾರ ಹಾಗೂ ಜ್ಞಾನದಾಹವನ್ನು ಪರೀಕ್ಷಿಸಿ ಅವರಿಗೆ ಬಹು ರಹಸ್ಯವಾದ ಅಷ್ಟಾಕ್ಷರೀ ಮಂತ್ರೋಪದೇಶ ಮಾಡಿದರು. ಇದನ್ನು ಗೌಪ್ಯವಾಗಿಡುವಂತೆಯೂ ಎಲ್ಲರಿಗೂ ತಿಳಿಸಿದರೆ ನರಕ ಪ್ರಾಪ್ತಿಯ ಎಚ್ಚರಿಕೆ ನೀಡಿದರು. ಇದರ ಜಪದಿಂದ ಮೋಕ್ಷ ಖಂಡಿತ ಲಭ್ಯ ಎಂದು

ತಿಳಿಸಿದರು. ಜೀವರಾಶಿಯ ಮೇಲೆ ತಮಗಿದ್ದ ಮಮತೆಯ ಕಾರಣ ಆಚಾರ್ಯಯು ಈಮಂತ್ರವನ್ನು ತಾವೊಬ್ಬರೇ ಬಳಸಿ ಉದ್ಧಾರವಾಗುವುದು ಅಸಹ್ಯಕರವಾದ ಮಹಾಸ್ವಾರ್ಥ ಎಂದು ಬಗೆದು, ಒಂದು ಎತ್ತರವಾದ ಗೋಪುರದ ಮೇಲೆ ನಿಂತುಎಲ್ಲರನ್ನು ಕರೆದು ಎಲ್ಲರಿಗೂ ಅರ್ಥವಾಗುವ ರೀತಿಯಲ್ಲಿ ಮಂತ್ರವನ್ನು ಹೇಳಿ ಬಿಟ್ಟರು. ಅದರಿಂದ ಸರ್ವರಿಗೂ ಮಂಗಳವಾಗುವುದಾದರೆ ಅದನ್ನು ಬಹಿರಂಗಪಡಿಸಿದ್ದರಿಂದ ಉಂಟಾಗುವ ಪಾಪದ ಫಲವನ್ನು ತಾವು ಅನುಭವಿಸಲು ಸದಾ ಸಿದ್ಧವೆಂಬುದಾಗ ತಮ್ಮ ಗುರುಗಳಿಗೆ ಸ್ಪಷ್ಟಪಡಿಸಿದರು. ಅಂತಹ ಅಪೂರ್ವ ಉದಾರಿ ಮಾನವೀಯ ಸಹೃದಯರು ಶ್ರೀರಾಮಾನುಜಾಚಾರ್ಯರು.

ರಾಮಾನುಜರು ತಮಗೆ ದೇವಾಲಯ ನಿರ್ಮಾಣದಲ್ಲಿ ಹಾಗೂ ಉತ್ಸವ ಮೂರ್ತಿಯನ್ನು ದೆಹಲಿಸುಲ್ತಾನನಿಂದ ತರುವಾಗ ಸಹಕರಿಸಿದ ಪಂಚಮರ ಬಗ್ಗೆ ಅಪಾರ ಅನುಕಂಪ. ಕೃತಜ್ಞತೆ ಹಾಗೂ ಬಹಳ ವಾತ್ಸಲ್ಯ ತೋರಿಅವರನ್ನು ಮಮತೆಯಿಂದ 'ತಿರುಕುಲತ್ತಾರ್‌ಶ್ರಿ' ಅಂದರೆ ಲಕ್ಷ್ಮೀದೇವಿಯ ಕುಲದವರು, ಪವಿತ್ರರು ಎಂದು ಭಗವಂತನ ದರ್ಶನ ಮಾಡಲು ಅವಕಾಶ ನೀಡಿದರು. (ಭಾರತ ಸಂವಿಧಾನದ 17ನೇ ಪ್ರಕರಣವು ಅಸ್ಪೃಶ್ಯತೆ ಪ್ರತಿಬಂಧಿಸಿದ ಮೇಲೆ ಯಾವುದೇ ಜಾತಿಯಾದರೂ ಹಿಂದೂ ಸಾರ್ವಜನಿಕ ಪೂಜಾಸ್ಥಳಕ್ಕೆಪ್ರವೇಶವಿದೆ ಎಂದಿದೆ. ಒಂಭತ್ತು ಶತಮಾನಗಳ ಹಿಂದೆ ಆಚಾರ್ಯರು ಈ ಹಕ್ಕನ್ನು ಅಸ್ಪೃಶ್ಯರಿಗೆ ನೀಡಿದ್ದು ನಿಜಕ್ಕೂ ಬಹು ಧೈರ್ಯದ ಮತ್ತು ಔದಾರ್ಯದ ಕೆಲಸವೇ ಸರಿ.) ವೈರಮುಡಿ ಜಾತ್ರೆಯಲ್ಲಿ ರಥೋತ್ಸವದ ದಿನ ಮೊದಲು ರಥವನ್ನು ಎಳೆಯುವ ಅವಕಾಶವನ್ನೂ ಸಹ ಹಿಂದುಳಿದ ಜನರಿಗೆ ಕಲ್ಪಿಸಿದರು. ಈಸಂಪ್ರದಾಯವು ಇಂದಿಗೂ ನಡೆದುಕೊಂಡು ಬರುತ್ತಿದೆ. ಸಂಕುಚಿತ ಜಾತಿ ವ್ಯವಸ್ಥೆಯ ಬಿಗಿ ಹಿಡಿತವಿದ್ದ ಅತಿಸಂಪ್ರದಾಯ ಬದ್ಧವಾಗಿದ್ದ ಆ ಕಾಲದ ಸಮಾಜದಲ್ಲಿ ಪಂಚಮರ ಬಗ್ಗೆ ಶ್ರೀರಾಮಾನುಜರು ತೋರಿದ ಮಮತೆ, ಪ್ರೀತಿಯುಕ್ತ ಆದರ ಮತ್ತು ಅವರ ಅಪೂರ್ವ ಹೃದಯ ವೈಶಾಲ್ಯತೆ, ನ್ಯಾಯದೃಷ್ಟಿ, ಬಹುವಾಗಿ ಮೆಚ್ಚಬೇಕಾದುದು ಹಾಗೂ ಅನುಕರಣಾರ್ಹವಾದುದು. ಜಪಾನಿನ ಸಾಹಿತ್ಯದಲ್ಲಿಯೂ ರಾಮಾನುಜರ ತತ್ವದ ವಿಚಾರವಿರುವುದು ಸೋಜಿಗದ ಸಂಗತಿ.

ಹೀಗೆ ರಾಮಾನುಜರು ಆಧ್ಯಾತ್ಮಿಕ ಜ್ಯೋತಿಯಾಗಿ, ನೈತಿಕ ನಂದಾದೀಪವಾಗಿ, ಮಮತೆ ಹಾಗೂ ಕರುಣೆಯ ಸಾಕಾರ ರೂಪವಾಗಿ, ಸರ್ವೋದಯದ ಸಾಧಕರಾಗಿ ಸಂಚರಿಸಿ,

ಆ ಕಾಲದಲ್ಲಿ ಕಂಗೊಳಿಸಿದ ಹಲವಾರು ಶ್ರೀ ವೈಷ್ಣವ ದೇವಸ್ಥಾನಗಳ ನಿರ್ಮಾಣಕ್ಕೆ ಸ್ಫೂರ್ತಿದಾಯಕರಾದರು. ಭಾರತದಲ್ಲಿ ವಿಶೇಷವಾಗಿ ದಕ್ಷಿಣ ಭಾರತದಲ್ಲಿ ಧಾರ್ಮಿಕ ಕ್ಷೋಭೆ ಉಂಟಾಗಿದ್ದ ಕಾಲವದು. ಅದುವರೆವಿಗೂ ಪ್ರಭಾವ ಶಾಲಿಯಾಗಿದ್ದ ಜೈನ ಧರ್ಮ ಮತ್ತು ಅದ್ವೈತ ಪಂಥಗಳಲ್ಲಿ ಗೊಂದಲಗಳು ಸೃಷ್ಟಿಯಾಗಿ ಜನರು ಹೊಸ ದರ್ಶನದತ್ತ ನೋಡುತ್ತಿದ್ದರು. ಮುಂದೆ ಅದೇ ಕಾಲಕ್ಕೆ ಉತ್ತರ ಕರ್ನಾಟಕ ಭಾಗದಲ್ಲಿ ವೀರಶೈವ ಧರ್ಮ ಬಸವಣ್ಣನವರ ನೇತೃತ್ವದಲ್ಲಿ ಪ್ರಗತಿ ಸಾಧಿಸಿದರೆ, ದಕ್ಷಿಣ ಕರ್ನಾಟಕದಲ್ಲಿ ಶ್ರೀ ವೈಷ್ಣವ ಪಂಥ ಪ್ರಚಾರವಾಗಲು ಶ್ರೀರಾಮಾನುಜರು ನಿಮಿತ್ತರಾದರು. ಇಂತಹಾ ಧಾರ್ಮಿಕ ಯುಗ ಪ್ರವರ್ತಕರಾದ ಇವರ ಹೆಸರು ಭಾರತದ ಇತಿಹಾಸದಲ್ಲಿ ಚಿರಸ್ಥಾಯಿಯಾಗಿದೆ.

ಅಡಿಟಿಪ್ಪಣಿಗಳು:-

1. ಶ್ರೀ ವೈಷ್ಣವ ಧರ್ಮ ಸಂಗ್ರಹ. ಹೆಚ್. ಪುಟ್ಟಸ್ವಾಮಿ, ಪು - 9
2. ತಿರುನಾರಾಯಣಪುರದ ಯಾತ್ರೆಯು. ರಾಮಾನುಜಯ್ಯಂಗಾರ್ಯ. ಪು - 1,2
3. ಯದುಗಿರಿಯ ನಾಡು. ಹೆಚ್.ಎಂ.ನಾಗರಾಜು. ಪು - 134
4. ಕರ್ನಾಟಕದಲ್ಲಿ ಶ್ರೀ ರಾಮಾನುಜಾಚಾರ್ಯರು. ಬಾ.ರಾ.ಗೋಪಾಲ್. ಪು - 6,7
5. ಅದೇ. ಪು - 8
6. ಯದುಗಿರಿಯ ನಾಡು. ಹೆಚ್.ಎಂ.ನಾಗರಾಜು. ಪು - 147
7. ಅದೇ. ಪು - 142
8. ಕರ್ನಾಟಕದಲ್ಲಿ ಶ್ರೀ ರಾಮಾನುಜಾಚಾರ್ಯರು. ಬಾ.ರಾ.ಗೋಪಾಲ್. ಪು - 13
9. ಶ್ರೀ ರಾಮಾನುಜರ ಜೀವನ ಚರಿತ್ರೆ. ಸ್ವಾಮಿ ರಾಮಕೃಷ್ಣಾನಂದ. ಪು - 177,178,179
10. ಎಂ.ಎ.ಆರ್. 1913. ಪು - 16
11. ಕರ್ನಾಟಕದಲ್ಲಿ ಶ್ರೀ ರಾಮಾನುಜಾಚಾರ್ಯರು. ಬಾ.ರಾ.ಗೋಪಾಲ್. ಪು - 11
12. ಅದೇ. ಪು - 87, 88
13. ಯದುಗಿರಿಯ ನಾಡು. ಹೆಚ್.ಎಂ.ನಾಗರಾಜು. ಪು - 142
14. ಎಫಿಗ್ರಾಫಿಯ ಕರ್ನಾಟಕ. ಸಂಪುಟ - 6. ಎಸ್.ಆರ್.64
15. ಅದೇ. ಪಿಪಿ. 185.
16. ಕರ್ನಾಟಕದಲ್ಲಿ ಶ್ರೀ ರಾಮಾನುಜಾಚಾರ್ಯರು. ಬಾ.ರಾ.ಗೋಪಾಲ್. ಪು - 35,36
17. ಯಾದವಗಿರಿ ಜೀರ್ಣೋದ್ಧಾರ. ಶ್ರೀನಿವಾಸಯ್ಯಂಗಾರ್ಯರು. ಪು - 6
18. ಅದೇ. ಪು - 4,5
19. ಅದೇ. ಪು - 6
20. ಸುವರ್ಣಮಂಡ್ಯ. ದೇ.ಜ.ಗೌ. ಪು - 128
21. ಕರ್ನಾಟಕದಲ್ಲಿ ಶ್ರೀ ರಾಮಾನುಜಾಚಾರ್ಯರು. ಬಾ.ರಾ.ಗೋಪಾಲ್. ಪು - 14,15

22. ಯಾದವಗಿರಿ ಜೀರ್ಣೋದ್ಧಾರ. ಪು - 8

23. ಕರ್ನಾಟಕದಲ್ಲಿ ಶ್ರೀ ರಾಮಾನುಜಾಚಾರ್ಯರು. ಬಾ.ರಾ.ಗೋಪಾಲ್. ಪು - 34,35

24. ಸಕ್ಕರೆ ಸೀಮೆ. ಕೆ.ಅನಂತರಾಮು. ಪು - 92

25. ಹೊಯ್ಸಳ ಸಂಪದ. 65ನೇ ಕನ್ನಡ ಸಾಹಿತ್ಯ ಸಮ್ಮೇಳನ ಸಂಚಿಕೆ. ಪು - 772

26. ಶ್ರೀ ರಾಮಾನುಜರ ಜೀವನ ಚರಿತ್ರೆ. ಸ್ವಾಮಿ ರಾಮಕೃಷ್ಣಾನಂದ. ಪು - 205

27. ಆದಿಚುಂಚನಗಿರಿ ಒಂದು ಸಾಂಸ್ಕೃತಿಕ ಅಧ್ಯಯನ. ಕೆ.ರಾಜೇಶ್ವರಿಗೌಡ. ಪು - 119

28. ವಿಶಿಷ್ಟಾದ್ವೈತ ದರ್ಪಣ. ಭಾಗ - 1, ಶೆಟ್ಟಲೂರು ಶ್ರೀನಿವಾಸರಂಗಾಚಾರ್ಯ. ಪು - 136

29. ವಿಶಿಷ್ಟಾದ್ವೈತ ದೀಪಿಕೆ. ಜಯರಾಮ ವೆಂಕಟಾಚಾರ್ಯ. ಪು - 115

30. ಶ್ರೀ ರಾಮಾನುಜರ ಜೀವನ ಚರಿತ್ರೆ. ಸ್ವಾಮಿ ರಾಮಕೃಷ್ಣಾನಂದ. ಪು - 210

31. ವಿಶಿಷ್ಟಾದ್ವೈತ ದೀಪಕೆ. ಜಯರಾಮ ವೆಂಕಟಾಚಾರ್ಯ. ಪು - 39,40,41

32. ಕನ್ನಡ ನಾಡಿನ ಧಾರ್ಮಿಕ ಪರಂಪರೆ. ಎಸ್.ಕೆ.ರಾಮಚಂದ್ರರಾವ್. ಪು - 26,27

33. ಸಿರಿಯೊಡಲು. ದೇ.ಜ.ಗೌ. ಪು - 273

34. ರಾಮಾನುಜರ ಜೀವನ ಚರಿತ್ರೆ, ಸ್ವಾಮಿ ರಾಮಕೃಷ್ಣಾನಂದ. ಪು - 214

ಅಧ್ಯಾಯ: 4

ರಾಜಾಶ್ರಯದಲ್ಲಿ ಮೇಲುಕೋಟೆ (ಶಾಸನಾಧಾರಗಳಿಂದ)

[illegible]

[illegible]

[illegible]

[illegible]

[illegible]

ಅಧ್ಯಾಯ: 4

ರಾಜಾಶ್ರಯದಲ್ಲಿ ಮೇಲುಕೋಟೆ (ಶಾಸನಾಧಾರಗಳಿಂದ)

ರಾಮಾನುಜಾಚಾರ್ಯರ ಪಾದಾರ್ಪಣೆಯಿಂದ ಪ್ರಸಿದ್ಧವಾದ ಮೇಲುಕೋಟೆಯು ರಾಜಾಶ್ರಯದಿಂದ ಸಾಂಸ್ಕೃತಿಕವಾಗಿ ಶ್ರೀಮಂತವಾಯಿತು. ರಾಮಾನುಜರಿಗೆ ಆಶ್ರಯ ನೀಡಿ ತಮ್ಮ ತತ್ವ ಬೋಧನೆಗೆ ಸಹಕರಿಸಿದ ಹೊಯ್ಸಳರು ಮೊದಲಿಗೆ ಮೇಲುಕೋಟೆಯ ಆಶ್ರಯದಾತರಾಗಿದ್ದಾರೆ. ಇವರ ಕಾಲದಲ್ಲಿ ವೈಷ್ಣವ ಮತವು ಮೇಲುಕೋಟೆಯಲ್ಲಿ ಅಧಿಕೃತವಾಗಿ ಮಾನ್ಯತೆ ಪಡೆಯಿತು. ಇವರ ಉದಾರ ದಾನದತ್ತಿಗಳಿಂದ ಹಾಗೂ ಪ್ರೋತ್ಸಾಹಗಳಿಂದ ಈ ಕ್ಷೇತ್ರವು ಪ್ರವರ್ಧಮಾನಕ್ಕೆ ಬಂದಿತು. ಹೊಯ್ಸಳರ ನಂತರ ವಿಜಯನಗರ ಸಾಮ್ರಾಜ್ಯದ ಆಳ್ವಿಕೆ ಆರಂಭವಾಯಿತು.ಇವರ ಕಾಲದಲ್ಲಿ ಮೇಲುಕೋಟೆಯು ಧಾರ್ಮಿಕ ಕೇಂದ್ರವಾಗಿ ಹೆಚ್ಚಿನ ಪ್ರಾಮುಖ್ಯತೆ ಪಡೆಯಿತು. ಈ ಕಾಲದಲ್ಲಿ ಹಲವಾರು ಅರಸರು ವಿಷ್ಣು ಭಕ್ತರಾಗಿದ್ದರು. ಅವರಲ್ಲಿ ಕೆಲವರು ವೈಯಕ್ತಿಕವಾಗಿ ವೈಷ್ಣವ ಧರ್ಮಾನುಯಾಯಿಗಳಾಗಿದ್ದು ತಿರುಪತಿ, ಶ್ರೀರಂಗ, ಕಾಂಚಿಪುರಗಳೊಂದಿಗೆ ಮೇಲುಕೋಟೆಯು ರಾಜಾಶ್ರಯವನ್ನು ಪಡೆಯಿತು. 16ನೇ ಶತಮಾನದಲ್ಲಿ ಆರಂಭವಾದ ಒಡೆಯರ ಆಳ್ವಿಕೆಯಲ್ಲಿ ಮೇಲುಕೋಟೆಯ ವೈಭವವು ಇಮ್ಮಡಿಯಾಯಿತು. ರಾಜ ಒಡೆಯರು ಮೇಲುಕೋಟೆಯ ನಾರಾಯಣನ ಭಕ್ತರಾಗಿದ್ದು ಉದಾರ ಪ್ರೋತ್ಸಾಹ ನೀಡಿ ಇಲ್ಲಿನ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದರು. ಹೀಗೆ ಮೇಲುಕೋಟೆಯು ಹೊಯ್ಸಳರು, ವಿಜಯನಗರ ಮತ್ತು ಒಡೆಯರ ಕಾಲದಲ್ಲಿ ರಾಜಾಶ್ರಯ ಪಡೆದು ಆಧ್ಯಾತ್ಮ ಮತ್ತು ಸಾಂಸ್ಕೃತಿಕ ಕೇಂದ್ರವೆನಿಸಿತು.

ಶಾಸನಗಳು:

ಇತಿಹಾಸದ ಪ್ರಮಾಣ ಭೂತವಾದ ಪುನರ್‌ನಿರ್ಮಾಣಕ್ಕೆ ಇರುವ ಅತಿ ಪ್ರಮುಖವಾದ ಆಧಾರಗಳೆಂದರೆ ಶಾಸನಗಳು. ಇತರ ಆಧಾರಗಳು ತುಂಬಿಕೊಡಲಾರದ ಕೆಲವು ಅಂಶಗಳನ್ನು ಶಾಸನ ಸಂಪತ್ತು ಒದಗಿಸುತ್ತದೆ. ಅಶೋಕ ಚಕ್ರವರ್ತಿಯ ಕಾಲದಿಂದಲೇ ಪ್ರಾರಂಭವಾಗುವ ಶಾಸನಗಳು ಧರ್ಮಪ್ರಸಾರವನ್ನೇ

ಧ್ಯೇಯವಾಗಿಟ್ಟುಕೊಂಡಿವೆ. ಅಶೋಕನ ಶಾಸನಗಳು ಧರ್ಮ ಬೋಧನೆಯ ಶಿಲ್ಪಕಾವ್ಯವಾಗಿವೆ[1].

ಯಾವುದೇ ಪ್ರದೇಶದ ಭಾಷೆ, ಸಾಹಿತ್ಯ, ಸಂಸ್ಕೃತಿ, ಇತಿಹಾಸಗಳ ಅಧ್ಯಯನಕ್ಕೆ ಶಾಸನಗಳು ಅಮೂಲ್ಯ ಆಕರಗಳು. 'ಶಾಸ್' ಎಂಬ ಧಾತುವಿನಿಂದ ನಿಷ್ಪನ್ನ ಹೊಂದಿದ 'ಶಾಸನ' ಶಬ್ದಕ್ಕೆ 'ಅಪ್ಪಣೆಮಾಡು, ಘೋಷಣೆಯನ್ನು ಹೊರಡಿಸು' ಎಂಬ ಅರ್ಥಗಳಿವೆ. ಇವುಗಳ ಅಂತರಾರ್ಥದಲ್ಲಿ ಪೌರುಷ, ಪರಾಕ್ರಮ, ಅರ್ಪಣೆ, ತ್ಯಾಗ, ಸತ್ಯವೆಂಬ ಧರ್ಮಕಾಯುವ ವಿಶೇಷಗುಣಗಳು ಅಡಕವಾಗಿರುತ್ತವೆ. ಇವು ಅಂದಿನ ಜೀವನ ಮತ್ತು ಸಂಸ್ಕೃತಿಗೆ ಕನ್ನಡಿಯಂತಿರುತ್ತವೆ. ಆದುದರಿಂದ ಶಾಸನಗಳನ್ನು ಇತಿಹಾಸದ 'ಕಣಜ' ಎನ್ನುತ್ತಾರೆ[2].

ಅಶೋಕನ ಆಳ್ವಿಕೆಯ ಅವಧಿಯಲ್ಲೇ ಶಾಸನಗಳು ದಾನ ಪತ್ರಗಳ ರೂಪವನ್ನು ಪಡೆಯಿತು. ಧರ್ಮಬೋಧನೆಯ ಕಲಿಕೆಯ ಮಾಧ್ಯಮವೂ ಆಯಿತು. ಆದ್ದರಿಂದ ಶಾಸನಗಳ ಹುಟ್ಟಿಗೆ ಧರ್ಮವೇ ಮುಖ್ಯ ಪ್ರೇರಣೆ. ಈ ನಿಟ್ಟಿನಿಂದ ''ಶಾಸನಗಳ ಉಗಮವಾಗಿರುವುದೇ ದಾನ ಧರ್ಮಗಳಲ್ಲಿ'' ಎಂಬ ಮಾತು ಸೂಕ್ತವಾದುದು. ಶಾಸನಗಳು ಚರಿತ್ರೆ ಮತ್ತು ರಾಜಕೀಯ ವಿಷಯವನ್ನು ಹೊಂದಿದ ದಾಖಲೆಗಳು ಮಾತ್ರವಾಗಿರದೆ ಹೆಚ್ಚಿನ ಸಾಂಸ್ಕೃತಿಕ ಮಹತ್ವವನ್ನು ಹೊಂದಿದೆ.

''ಕನ್ನಡದಲ್ಲಿ ದೊರೆತ ಶಾಸನಗಳಲ್ಲಿ ನೂರಕ್ಕೆ ತೊಂಬತ್ತೈದು ಭಾಗ ದಾನ ಶಾಸನಗಳೇ ಆಗಿವೆ'' ಎಂಬ ಮಾತಿನಿಂದ ಮಾನವ ಬದುಕಿನಲ್ಲಿ ಧರ್ಮದ ಪ್ರಭಾವವನ್ನು, ದಾನದ ಮಹತ್ವವನ್ನು ಗುರುತಿಸಬಹುದು.

ಮಠ ಅಥವಾ ದೇವಾಲಯಗಳಿಗೆ ಸಂಪತ್ತನ್ನು ಯಾವ ರೂಪದಲ್ಲೇ ಕೊಡುಗೆ ನೀಡಿದ್ದು ದಾನವೆನಿಸಿ ಅದರ ದಾಖಲೆಯೇ ''ದಾನಶಾಸನ'ವಾಗಿದೆ[3].

ಮೇಲುಕೋಟೆಯು ರಾಜಾಶ್ರಯದಲ್ಲಿ ಹೊಂದಿದ್ದ ಜೀರ್ಣೋದ್ಧಾರವನ್ನು ತಿಳಿಯಲು ನಮಗೆ ಶಾಸನಗಳೇ ಪ್ರಮುಖ ಆಧಾರವಾಗಿವೆ. ರಾಜಾಶ್ರಯವನ್ನು ನಿರೂಪಿಸುವ ಇಲ್ಲಿನ ಬಹುಪಾಲು ಶಾಸನಗಳು ದಾನ ಶಾಸನಗಳಾಗಿವೆ. ಆದುದರಿಂದ ಶಾಸನಾಧಾರದ ಮೂಲಕ ಮೇಲುಕೋಟೆಗೆ ರಾಜರ ಸಾಂಸ್ಕೃತಿಕ ಕೊಡುಗೆಗಳನ್ನು

ಅಧ್ಯಯನಮಾಡಬಹುದಾಗಿದೆ.

4.1 ಹೊಯ್ಸಳರ ಕಾಲದಲ್ಲಿ ಮೇಲುಕೋಟೆ:

ಕ್ರಿ.ಶ. 12ನೇ ಶತಮಾನದಲ್ಲಿ ಪ್ರಾಬಲ್ಯಕ್ಕೆ ಬಂದ ಹೊಯ್ಸಳರು ಕರ್ನಾಟಕದ ಸಂಸ್ಕೃತಿಗೆ ಮೆರುಗು ನೀಡಿದರು. ಎರಡೂವರೆ ಶತಮಾನಗಳ ಕಾಲ ಅಸ್ತಿತ್ವದಲ್ಲಿದ್ದ ಇವರ ಕಾಲದಲ್ಲಿ ಹೊಯ್ಸಳ ಶೈಲಿಯ ದೇವಾಲಯುಗಳು ನಿರ್ಮಾಣವಾವು. ಬೇಲೂರು, ಹಳೇಬೀಡು, ಸೋಮನಾಥಪುರದ ದೇವಾಲಯಗಳು ಇವರ ಕಲಾ ನೈಪುಣ್ಯತೆಗೆ ನಿದರ್ಶನಗಳಾಗಿವೆ. ಇವರ ಕಾಲದಲ್ಲಿ ಕನ್ನಡ ಸಾಹಿತ್ಯವು ಸಹ ಪೋಷಿಸಲ್ಪಟ್ಟಿತು. ಹೊಯ್ಸಳ ಅರಸರು ಪರಮತ ಸಹಿಷ್ಣುರಾಗಿದ್ದು ಎಲ್ಲಾ ಪಂಥಗಳನ್ನು ಸಮನಾಗಿ ಪೋಷಿಸಿದರು. ಇವರ ಕಾಲದಲ್ಲಿ ಜೈನ, ಶೈವ, ವೈಷ್ಣವ ಮತ್ತು ಬೌದ್ಧ ಪಂಥಗಳು ಪ್ರಚಲಿತದಲ್ಲಿದ್ದವು. ಧಾರ್ಮಿಕ ಸಾಮರಸ್ಯ ಅಂದಿನ ಮುಖ್ಯ ಅಂಶವಾಗಿತ್ತು. ಗಂಗರ ಆಶ್ರಯದಲ್ಲಿ ಅತ್ಯಂತ ಪ್ರಬಲವಾಗಿದ್ದ ಜೈನಧರ್ಮದ ಪ್ರಭಾವ ಸ್ವಲ್ಪ ಮಟ್ಟಿಗೆ ಈ ಕಾಲದಲ್ಲಿ ಕುಗ್ಗಿತೆಂಬುದು ನಿಜ. ರಾಮಾನುಜರ ಪ್ರಭಾವದಿಂದ ಬಿಟ್ಟಿದೇವ ವಿಷ್ಣುವರ್ಧನನಾದ ಮೇಲೂ ಅವನು ಧಾರ್ಮಿಕ ಅಸಹನೆಯಿಂದ ನಡೆದುಕೊಳ್ಳಲಿಲ್ಲ. ಜೈನರಿಗೂ, ವೈಷ್ಣವರಿಗೂ ಹೊಯ್ಸಳ ರಾಜ್ಯದಲ್ಲಿ ಘರ್ಷಣೆಗಳು ಸಂಭವಿಸುತ್ತಿದ್ದವು. ಆದರೆ ರಾಜನು ಅವುಗಳನ್ನು ತಡೆದು ಸಹನೆಯನ್ನು ಸೌಹಾರ್ದವನ್ನೂ ಸಾಧಿಸಲು ಪ್ರಯತ್ನಿಸುತ್ತಿದ್ದನು. ಹೊಯ್ಸಳ ರಾಜರ ಇಂತಹಾ ಧಾರ್ಮಿಕ ಭಾವನೆಗಳು ಮೇಲುಕೋಟೆಯ ವಿಷಯದಲ್ಲೂ ಹೊರತಾಗಿರಲಿಲ್ಲ. ಇದರ ಫಲವಾಗಿ ಒಂದು ಸಮನ್ವಯ ಸಂಸ್ಕೃತಿಯ ಪೂರ್ಣ ದೃಷ್ಟಿರೂಪುಗೊಳ್ಳಲು ಸಹಾಯಕವಾಯಿತು. ಇದನ್ನು ಶಾಸನಗಳ ಅಧ್ಯಯನ ಸ್ಪಷ್ಟವಾಗಿ ನಮಗೆ ತೋರಿಸಿಕೊಡುತ್ತದೆ.

ಮೇಲುಕೋಟೆಗೆ ಹೊಯ್ಸಳರ ಕೊಡುಗೆಗಳ ಶಾಸನಗಳು:

ಮೇಲುಕೋಟೆಯಲ್ಲಿ ಪೆರುಮಾಳುದೇವ ದಂಡನಾಯಕನ ಮಗ ಮಹಾಪ್ರಧಾನ ಮಾದಪ್ಪದಣ್ಣಾಯಕನ ಆರಂಭದ 14ನೇ ಶತಮಾನದ ಮೂರು ಶಾಸನಗಳಿವೆ. ಈ ತಂದೆ ಮಕ್ಕಳೀರ್ವರೂ ಹೊಯ್ಸಳ ಮುಮ್ಮಡಿಬಲ್ಲಾಳನ ಸೇವೆಯಲ್ಲಿದ್ದವರು. ಮಾಧನ (ಮಾದಪ್ಪ) ಮೈಸೂರು ಜಿಲ್ಲೆಯ ಚಾಮರಾಜನಗರ ತಾಲ್ಲೂಕಿನ ಹರದನಹಳ್ಳಿಯ ಗ್ರಾಮದಲ್ಲಿ ಜನಿಸಿದ ವೈಷ್ಣವನೆಂಬುದು ಆ ಗ್ರಾಮದ ಶಾಸನವೊಂದರಿಂದ ತಿಳಿದಿದೆ. ಆತ

ತೆರಕಣಾಂಬಿಯಲ್ಲಿ ವರದರಾಜ ದೇವರಿಗೆ ಆಲಯವೊಂದನ್ನು ಕಟ್ಟಿಸಿ ಅದಕ್ಕೆ ಭೂಮಿದಾನವನ್ನು ನೀಡಿದನು. ಇಂತಹಾ ಭಕ್ತನು ಮೇಲುಕೋಟೆಯ ದೇವಸ್ಥಾನದಲ್ಲಿ ಆಸಕ್ತಿವಹಿಸಿದುದು ಆಶ್ಚರ್ಯವೇನಲ್ಲ. ನಾರಾಯಣಸ್ವಾಮಿ ದೇವಾಲಯದಲ್ಲಿರುವ ಶಾಸನದಲ್ಲಿ ಈತನು ತನ್ನ ಸೋದರನೂ ದಂಡನಾಯಕನೂ ಆಗಿದ್ದ ಕೇತಪ್ಪನೊಡಗೂಡಿ ಲಕ್ಷ್ಮಣದಾಸನಿಗೆ ಗದ್ದೆಯೊಂದನ್ನು ದಾನವಾಗಿ ನೀಡಿ 15 ಗುಳ ಏಲಕ್ಕಿಯನ್ನು ತಿರುನಾರಾಯಣದೇವರಿಗೆ ಏರ್ಪಾಡು ಮಾಡಿದನೆಂದು ಹೇಳಿದೆ[4].

ಕ್ರಿ.ಶ 1205ರಿಂದ 1311ರವರೆಗೆ ದೇಶದಾದ್ಯಂತ ತುರುಕರ ಹಾವಳಿಯ ಅವಾಂತರದಿಂದ ದೇಶಕೋಷಗಳು ನಾಶಮಾಡಲ್ಪಟ್ಟವು. ಈ ಕಾರಣದಿಂದ ದೇವಸ್ಥಾನದ ಕೆಲವು ಭಾಗಗಳು ವ್ಯತ್ಯಾಸವಾಗಿ ಕ್ರಿ.ಶ. 1312ರಲ್ಲಿ ಮಹಾಪ್ರಧಾನ ಮಾಧವದಣ್ಣನಾಯಕರು 1015 ವರಹಗಳಿಂದ ಮತ್ತು ಸ್ಥಳದ ಅಲ್ಲಾಳ ಸೆಟ್ಟಿಯ ಮಗ ಕೇತಿಸೆಟ್ಟಿಯು ಕೊಟ್ಟ ಸುಮಾರು 250 ವರಹಗಳಿಂದ ರಾಮಾನುಜರ ಸನ್ನಿಧಿಯಿಂದ ಪಾಕಶಾಲೆವರೆಗಿರುವ ಪಾತಾಳಾಂಕಣವು ಜೀರ್ಣೋದ್ಧಾರವಾಗಿರುವ ವಿಷಯತಿಳಿದು ಬರುತ್ತದೆ[5].

ಹೊಯ್ಸಳರಿಂದ ದೊರೆತ ದಾನಗಳಿಂದ ಮೇಲುಕೋಟೆಯ ಜೀರ್ಣೋದ್ಧಾರ ಕಾರ್ಯವು ಯಶಸ್ವಿಯಾಗಿ ಮುಂದುವರೆಯಿತು. ಚೋಳ ಕಾಲದಲ್ಲಿ ಪ್ರಬಲವಾದ ತಮಿಳು ಸಂಸ್ಕೃತಿ ವಿಷ್ಣುವರ್ಧನನ ಕಾಲದಲ್ಲಿ ಮತ್ತೆ ಕನ್ನಡದತ್ತವಾಲಿತು. ಆದರೂ ತಮಿಳುರು ಇಲ್ಲಿಂದ ಸಂಪೂರ್ಣವಾಗಿ ಉಚ್ಚಾಟಿತವಾಗದೆ ಸಂತೋಷದಿಂದಿದ್ದರು. ಹೊಯ್ಸಳ ವಂಶದ ರಾಜರೆಲ್ಲರೂ ಈ ಉದಾತ್ತವಾದ ಆದರ್ಶದಲ್ಲಿಯೇ ನಡೆದವರು. ಇವರ ಕಾಲದಲ್ಲಿ ಧಾರ್ಮಿಕ ಸಹನೆ ಮತ್ತು ಸಮನ್ವಯ ಪರಿಣಾಮಕಾರಿಯಾಗಿ ಮುಂದುವರೆಯಿತು. ಕೆಲವು ಶಾಸನಗಳನ್ನು ತಮಿಳಿನಲ್ಲಿಯೂ ಹೊರಡಿಸಿದರು.

4.2 ವಿಜಯನಗರದ ಅರಸರ ಕಾಲದಲ್ಲಿ ಮೇಲುಕೋಟೆ:

14ನೇ ಶತಮಾನದ ಮಧ್ಯಂತರದಿಂದ ವಿಜಯನಗರದ ಅರಸರ ಕಾಲದಲ್ಲಿ ಮೇಲುಕೋಟೆಯು ಮುಖ್ಯ ಧಾರ್ಮಿಕ ಕೇಂದ್ರವಾಯಿತು. ಈ ಕಾಲದ ಅರಸರು ವಿಷ್ಣುಭಕ್ತರಾಗಿದ್ದುದು ಇದಕ್ಕೆ ಪೂರಕವಾಯಿತು. ಇವರ ಕಾಲದಲ್ಲಿ ಮೇಲುಕೋಟೆಯು ದಾನ ದತ್ತಿಗಳಿಂದ ಸಂತೃಪ್ತವಾಯಿತು. ವೈಷ್ಣವ ಧರ್ಮ ಸಂಸ್ಕೃತಿಯು ವೈಭವಪೂರ್ಣತೆಯನ್ನು ಹೊಂದಿತು. ಮೇಲುಕೋಟೆಯು ವಿಜಯನಗರದ

ರಾಜಪ್ರಮುಖರ ಆಳ್ವಿಕೆಗೆ ಒಳಪಟ್ಟಿತ್ತು. ತಿಮ್ಮಣ್ಣದಣ್ಣಾಯಕ ಎಂಬುವವನು ಮೇಲುಕೋಟೆಯ ದೇವಸ್ಥಾನಗಳನ್ನು ಜೀರ್ಣೋದ್ಧಾರ ಮಾಡಿದನು. ಹಿಂದು ಸಂಸ್ಕೃತಿಯು ಇವರ ಕಾಲದಲ್ಲಿ ಪ್ರವರ್ಧಮಾನಕ್ಕೆ ಬಂದಿತು. ಇವರ ಕಾಲದಲ್ಲಿ ಎಲ್ಲಾ ಕ್ಷೇತ್ರಗಳೂ ಪ್ರೋತ್ಸಾಹಿತವಾದುವು. ಇವರ ಕಾಲದ ಪ್ರಮುಖ ಬದಲಾವಣೆಯೆಂದರೆ, ದೇವಾಲಯ ಶೈಲಿ. ದೇವಾಲಯದ ವಿಸ್ತೀರ್ಣ, ಸ್ತಂಭಗಳು ಹಾಗೂ ಮಂಟಪಗಳ ನಿರ್ಮಾಣದಲ್ಲಿ ಬದಲಾವಣೆಯಾಯಿತು. ಹಾಗೆಯೇ ವಿತ್ತೀಯ ಸೌಕರ್ಯಗಳು ವಿಪುಲವಾಗಿ ಈ ಕ್ಷೇತ್ರಕ್ಕೆ ದೊರಕಿದವು.

ಈ ಕ್ಷೇತ್ರಕ್ಕೆ ವಿಜಯನಗರದ ಅರಸರ ಕಾಣಿಕೆಗಳು:

ಶಾಸನ 1:- ವಿಜಯನಗರದ ಕಾಲಕ್ಕೆ ಸೇರಿದ ಮೇಲುಕೋಟೆಯ ಪ್ರಾಚೀನ ಶಾಸನವು ಮೊದಲನೆಯ ಬುಕ್ಕರಾಯನದು. ಇದರ ಕಾಲ ಕ್ರಿ.ಶ.1369ನೆಯ ವರ್ಷದ ಸೆಪ್ಟೆಂಬರ್ 22. ಇದು ದಾನಶಾಸನವಾಗಿದೆ.

ಈ ಶಾಸನವು ನಮ್ಮಾಳ್ವಾರ್ ಗುಡಿಯ ಪಶ್ಚಿಮಕ್ಕಿರುವ ಮಂಟಪದಲ್ಲಿನ ಕಲ್ಲಿನ ಮೇಲೆ ಈ ಶಾಸನವಿದೆ. ಮಯಿಲನ ಹಳ್ಳಿಯ ಕೆರೆಯ ಕೆಳಗೆ ಕುಂಬಾರಕಟ್ಟೆಯ ಕಾಡಿನ ಭೂಮಿಯನ್ನು ನಮ್ಮಾಳ್ವಾರರ ಗುಡಿಯಲ್ಲಿ ಉತ್ಸವಗಳನ್ನು ಕೊಂಡಾಡಲು ಹಾಗೂ ಪೂಜೆ, ನೈವೇದ್ಯಗಳಿಗೆಂದು ತಿರುನಾರಯಣಪುರದ ಶ್ರೀ ವೈಷ್ಣವರು ದಾನಮಾಡಿದರೆನ್ನುವುದು ಶಾಸನದ ಆಶಯ. ಶಾಸನ ಹಲವಾರು ಶ್ರೀ ವೈಷ್ಣವರನ್ನು ಹೆಸರಿಸಿದೆ. ದಾನ ಮಾಡಿದ ಭೂಮಿಯನ್ನು ಈಗಾಗಲೇ ಉಳುಮೆ ಮಾಡುತ್ತಿದ್ದ ಜನರಿಂದ ಬಿಡಿಸದೆ, ಆ ಭೂಮಿಯನ್ನು ವಿಷ್ಣುದೇವಾಲಯಕ್ಕೆ ತೆರಿಗೆ ರಹಿತವಾದ ದಾನ ಎಂದು ಪರಿವರ್ತಿಸಲಾಯಿತು. ಈ ಭೂಮಿಯಿಂದ ಬರಬೇಕಾದ ಗುತ್ತಿಗೆಯನ್ನು ನಮ್ಮಾಳ್ವಾರ್‌ರವರ ಗುಡಿಯಲ್ಲಿನ ಸೇವೆಗಳಿಗೆ ದಾನಮಾಡಲಾಯಿತು[6].

ಈ ಶಾಸನದಿಂದ ಕ್ರಿ.ಶ.1369ರ ವೇಳೆಗೆ ನಮ್ಮಾಳ್ವಾರರ ಗುಡಿ ಅಸ್ತಿತ್ವಕ್ಕೆ ಬಂದಿತ್ತು ಎಂಬುದು ಖಚಿತವಾಗುತ್ತದೆ. ಅಲ್ಲಿ ತಿರುವಧ್ಯಯನ ಎಂಬುದು ಪ್ರತಿವರ್ಷ ಡಿಸೆಂಬರ್, ಜನವರಿ ತಿಂಗಳಲ್ಲಿ 20 ದಿನಗಳ ಕಾಲ ಆಚರಿಸುವ ಒಂದು ಮುಖ್ಯ ಉತ್ಸವ. ಆಗ ಆಳ್ವಾರರ ಪ್ರಬಂಧಗಳನ್ನು ಪಠಿಸಲಾಗುತ್ತದೆ. ಇಂತಹ ಉತ್ಸವವನ್ನು ನಮ್ಮಾಳ್ವಾರ್‌ರರ ಗುಡಿಯಲ್ಲಿಯೇ ಆಚರಿಸಲು ಏರ್ಪಡಿಸಿದುದು ಗಮನಾರ್ಹ.

ಶಾಸನ 2:- ಇಮ್ಮಡಿ ಪ್ರೌಢದೇವರಾಯನೆಂದು ಕರೆಯಲಾದ ಮಲ್ಲಿಕಾರ್ಜುನನ ಕಾಲದ ಮಹಾಪ್ರಧಾನನು ಮಹಾದಂಡನಾಯಕನೂ ಆದ ತಿಮ್ಮಣ್ಣ ಮತ್ತು ಆತನ ಪತ್ನಿ ರಂಗನಾಯಕಿ ಈ ಕಾಲದ ಪ್ರಮುಖದಾನಿಗಳು. ತಿಮ್ಮಣ್ಣ ನಾಗಮಂಗಲದ ಮಹಾಪ್ರಭುವಾಗಿದ್ದ. ಯಾದವಗಿರಿ ಜೀರ್ಣೋದ್ಧಾರಕನೆಂದು ಇವನನ್ನು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಯದುಗಿರಿ ಅಮ್ಮನವರ ಸನ್ನಿಧಿಯ ಕೈಸಾಲೆಯ ಮಂಟಪದ 6ನೇ ಕಂಬದಲ್ಲಿ ಈ ಶಾಸನವಿದೆ. ಇದರ ಹೇಳಿಕೆಯನ್ನು ಆಧರಿಸಿ ಆರ್.ನರಸಿಂಹಚಾರ್‌ರವರು 1458ರಲ್ಲಿ ಆಗಿದೆ ಎಂದಿದ್ದಾರೆ [7].

ರಂಗನಾಯಕಿಯು ದೇವಾಲಯಕ್ಕೆ ಕೆಲವು ಹೊಸ ಕಟ್ಟಡಗಳನ್ನು ಜೋಡಿಸಿದಳು. ಯದುಗಿರಿಯ ಅಮ್ಮನವರ ಗುಡಿಯ ಮುಂದೆ ರಂಗಮಂಟಪವೊಂದನ್ನು ಕಟ್ಟಿಸಿದಳೆಂದು ಈ ಶಾಸನ ಹೇಳುತ್ತದೆ. ದಾನಿಯನ್ನು ತಿಮ್ಮಣ್ಣ ದಂಡನಾಯಕ ಮಹಿಷಿ ಎಂದು ವರ್ಣಿಸಲಾಗಿದೆ. ಸಮಕಾಲೀನವಾದ ಮತ್ತೊಂದು ಶಾಸನದಲ್ಲಿ ಈಕೆ ಬಾಳೇನಹಳ್ಳಿ ಮತ್ತು ಯಲವದಹಳ್ಳಿಗಳಿಗೆ ಸೇರಿದ ಎಲ್ಲ ಹೊಲ,ಗದ್ದೆ, ತೋಟಗಳನ್ನು ಸುಂಕಗಳಿಂದ ಬರುವ ಆದಾಯ, ದ್ರವ್ಯ ರೂಪದಲ್ಲಿ ಬರುವ ಆದಾಯ ಮುಂತಾದವುಗಳನ್ನು 24 ಜನ ಶ್ರೀವೈಷ್ಣವರಿಗೆ ಭೋಜನಕ್ಕಾಗಿ ಸ್ಥಾಪಿಸಲಾದ ರಾಮಾನುಜಕೂಟಕ್ಕೆ ದಾನ ಮಾಡಿದಳು [8].

ಈ ಶಾಸನದಿಂದ ವಿಜಯನಗರದ ಅರಸರು ವೈಷ್ಣವರಿಗೆ ನೀಡಿದ್ದ ಸ್ಥಾನ ಹಾಗೂ ಧಾರ್ಮಿಕ ದಾನ ಕಾರ್ಯಗಳಲ್ಲಿ ಸ್ತ್ರೀಯರು ಹೊಂದಿದ್ದ ಆಸಕ್ತಿಯ ಅರಿವಾಗುತ್ತದೆ.

ಶಾಸನ 3:- ಸಂಗಮ ವಂಶದ ಕೊನೆಯ ಅರಸನಾದ ವಿರೂಪಾಕ್ಷನ ಆಳ್ವಿಕೆಯ ಕಾಲದ ಒಂದು ಶಾಸನ ನಮ್ಮಾಳ್ವಾರ್ ಗುಡಿಯ ಮುಂದಿನ ರಂಗಮಂಟಪದಲ್ಲಿ ಹಾಸಲಾದ ಕಲ್ಲಿನ ಮೇಲೆ ಕೆತ್ತಲಾದ ಶಾಸನ 9. ಇದರ ಕಾಲ ಕ್ರಿ.ಶ.1469.

ಕುಳಿಯಕೆರೆ ಗ್ರಾಮಕ್ಕೆ ಸೇರಿದ ನಳನಹಳ್ಳಿ ಎಂಬ ಕಾಲುವಳ್ಳಿಯಲ್ಲಿನ ಮನೆಗಳು ಮತ್ತು ನಿವೇಶನಗಳು, ಪರಾಂಕುಶ ಸಮುದ್ರವೆಂಬ ಕೆರೆಯ ಕೆಳಗೂ ಭೂಮಿಗಳು ಮತ್ತು ಕುರುಕುಳಂಪಾಡಿ ಗ್ರಾಮದ ಮನೆಗಳು ಮತ್ತು ನಿವೇಶನಗಳನ್ನು ಶ್ರೀ ವೈಷ್ಣವರಲ್ಲಿ ದಾನ ಮಾಡಿ ಹಂಚಿದುದನ್ನು ಈ ಶಾಸನ ದಾಖಲಿಸಿದೆ. ಪ್ರತಿಗ್ರಹಿಗಳ ಗೋತ್ರ ಮತ್ತು ಸೂತ್ರಗಳನ್ನು ಈ ಶಾಸನದಲ್ಲಿ ವಿವರಿಸಲಾಗಿದೆ. ಈ ಪ್ರತಿಗ್ರಹಿಗಳು ಕುರುಕುಲವಂಪಾಜಿಯ ಆಳ್ವಾರರ ದೇವಸ್ಥಾನದಲ್ಲಿ ಸೇವೆಯನ್ನು ಮಾಡಿಕೊಂಡಿದ್ದವರೆನ್ನಲಾಗಿದೆ. ದಾನಿಯು ಯಾದವಗಿರಿ

ಎನಿಸಿದ ತಿರುನಾರಾಯಣಪುರದ ನಾರಾಯಣದೇವರ, ಲಕ್ಷ್ಮೀದೇವಿಯ ಮಂಗ ಶರಗೋಪಮುನಿಗಳ ಕೈಂಕರ್ಯ ಧುರಂದರಳಾದ ನಾಚಿಯಾರಮ್ಮ. ಈಕೆ ಈ ಮೊದಲು ಆಳುತ್ತಿದ್ದ ಇಮ್ಮಡಿ ಪ್ರೌಢದೇವರಾಯನಿಂದ ಸಣಬಿ ಮುಖುಳಿಯನಾಡನ್ನು ದಾನವಾಗಿ ಪಡೆದಿದ್ದಳು. ಈ ಮಹಾ ಪ್ರಧಾನ ತಿಮ್ಮಣ್ಣ ದಂಡನಾಯಕನ ಹಾಗೂ ನಾರಾಯಣ ದೇವಾಲಯದ ಐವತ್ತಿಬ್ಬರು. ಶ್ರೀ ವೈಷ್ಣವರ ಇಚ್ಛೆಯಂತೆ ಈ ದಾನವನ್ನು ಮಾಡಿದಳು.

ಶಾಸನ 4:- ತುಳುವ ವಂಶದ ಕೃಷ್ಣದೇವರಾಯನ ಕ್ರಿ.ಶ. 1529ನೇ ವರ್ಷದ ಶಾಸನದಲ್ಲಿ ವೈಷ್ಣವ ಮತ್ತು ಶೈವ ದೇವಾಲಯಗಳೇ ನಡೆಸುತ್ತಿದ್ದ ದಾನಿಗಳ ಹೆಸರಿನ ಪೂಜೆಯ ಪದ್ಧತಿಯ ಅಂಶವಿದೆ. ಇವುಗಳ್ಗೆ 'ಸಂಧಿ' ಎಂಬ ಹೆಸರಿದೆ.

ಒಡೆಯರ ತಿಬ್ಬಶೆಟ್ಟಿಯ ಮಗನಾದ ಲಕ್ಷ್ಮೀಶ ಶೆಟ್ಟಿಯು ದೇವಾಸ್ಥಾನಕ್ಕೆ ಸೇರಿದ ಪುರ ಎಂಬ ಗ್ರಾಮದಲ್ಲಿನ ಹೊಸಕೆರೆಯು ಒಡೆದು ಹೋದಾಗ ಅದನ್ನು ಪುನಃ ಕಟ್ಟಿಸಿ, ತೂಬನ್ನು ನಿಲ್ಲಿಸಿ ಕೋಡಿಯ ಕಡುವನ್ನು ತೆಗೆಸಿ ಅದನ್ನು ಜೀರ್ಣೋದ್ಧಾರ ಮಾಡಿಸಿದನು. ಇದಕ್ಕಾಗಿ 300 ವರಹಗಳನ್ನು ವೆಚ್ಚಮಾಡಬೇಕಾಯಿತು. ಇದಕ್ಕೆ ಪ್ರತಿಯಾಗಿ ದೇವಾಲಯದ ಐವತ್ತಿಬ್ಬರು ಒಡೆಯರ ತಿಬ್ಬಶೆಟ್ಟಿಯ ಹೆಸರಿನಲ್ಲಿ ಒಂದು ಸಂಧಿಯನ್ನು (ವಿಶೇಷ ಪೂಜೆ) ಸ್ಥಾಪಿಸಿದರು.

ಈ ಶಾಸನದಿಂದ ವಿಜಯನಗರದ ಅರಸರ ಕಾಲದಲ್ಲಿ ಜನೋಪಯೋಗಿ ಕಾರ್ಯಗಳಿಗಿದ್ದ ಕಾಳಜಿ ಹಾಗೂ ಅದಕ್ಕೆ ಪ್ರತಿಯಾಗಿ ಜನತೆಯು ಸಲ್ಲಿಸಿದ ಕೃತಜ್ಞತೆಯ ಪೂಜೆಗಳಿಂದ ಸಹಕಾರ ಮನೋಭಾವವು ರಾಜ ಮತ್ತು ಪ್ರಜೆಗಳ ನಡುವೆ ಇದ್ದುದು ತಿಳಿದು ಬರುತ್ತದೆ.

ಶಾಸನ 5:- ಮೇಲುಕೋಟೆಯಲ್ಲಿ ಅಚ್ಯುತದೇವರಾಯನ ಕಾಲದ 3 ಶಾಸನಗಳಿವೆ. ಇವು ಕ್ರಿ.ಶ.1534 ಫೆಬ್ರವರಿ 8, ಜೂನ್ 14 ಮತ್ತು 1535 ವರ್ಷದ ಜೂನ್ 11ನೆಯ ತಾರೀಕುಗಳವು [10].

ಮೊದಲ ಶಾಸನದಲ್ಲಿ ಪೆರಿಯರಾಜ ಮತ್ತು ತಿರುಮಲ ರಾಜರೂ ದೇವಾಲಯಕ್ಕೆ ನೀಡಿದ ಹಲವು ದಾನದ ಪ್ರಸ್ತಾಪವಿದೆ. ದೇವಸ್ಥಾನದ ಭಂಡಾರಕ್ಕೆ ಸೇರಿದ್ದ ಸೀಮೆಯೊಳಗೆ ಕದಲಿಗೆರೆ ಗ್ರಾಮದ ಹೊಸಕೆರೆ ಮತ್ತು ಕೃಷ್ಣದೇವವೊಡೆಯರ ಕೆರೆಗಳು ಒಡೆದು ಹೋದವು.

ಪೆರಿರಾಜ ಅದನ್ನು 150 ಗದ್ಯಾಣಗಳ ವೆಚ್ಚದಿಂದ ಸರಿಪಡಿಸಿದನು. ದೇವಾಲಯದ ಐವತ್ತಿಬ್ಬರು ದಾನಿಯ ಹೆಸರಲ್ಲಿ ನೈವೇದ್ಯ ಮಾಡಿ ಎರಡು ಕೊಳಗ ಪ್ರಸಾದವನ್ನು ತಪ್ಪದೆ ದಾನಿಗೆ ನೀಡುತ್ತಿದ್ದರು.

ಎರಡನೆಯ ಶಾಸನದಲ್ಲಿ ತಿರುಮಲ ರಾಜನು ಐವತ್ತಿಬ್ಬರಿಗೆ ಗ್ರಾಮವೊಂದನ್ನು ದಾನವಾಗಿ ನೀಡಿದುದರ ಪ್ರಸ್ತಾಪವಿದೆ. ಆದರೆ ಶಾಸನದ ಕಲ್ಲುತುಂಡಾಗಿದ್ದು ವಿವರಗಳು ಹಾಳಾಗಿವೆ.

ಮೂರನೆಯ ಶಾಸನದಲ್ಲಿ ತಿರುಮಲರಾಜನು, ಸೆಟಿಪುರ, ಮೈಲನಹಳ್ಳಿ ಅವುಗಳ ಉಪಗ್ರಾಮಗಳಾದ ನಿಲೆಮಂಗಲ, ಹೊಲವಳ್ಳಿ ಮತ್ತು ಕರನಾರಣಹಳ್ಳಿಗಳನ್ನು ತನ್ನ ಧರ್ಮವಾಗಿ ತಿರುನಾರಾಯಣಪುರದ ದೇವರಿಗೆ, ನಿತ್ಯದ ನೈವೇದ್ಯಕ್ಕೆ, ತೆಪ್ಪೋತ್ಸವ ನಡೆಸಲು ಮತ್ತು ಒಂದು ಹೂದೋಟಕ್ಕಾಗಿ ದಾನಮಾಡಿದನೆಂದು ತಿಳಿಸುತ್ತದೆ.

ಶಾಸನ 6:- ಸದಾಶಿವರಾಯನ ಆಳ್ವಿಕೆಯ ಕಾಲದ ಆರಕ್ಕೂ ಮಿಕ್ಕಿದ ಶಾಸನಗಳಿವೆ. ಇವುಗಳಲ್ಲಿ ನಂದ್ಯಾಲಯ ನರಸಿಂಗಯದೇವನ ಮಗನಾದ ಮಹಾಮಂಡಲೇಶ್ವರ ನಾರಾಯಾಣ ದೇವನು ಹೊರಡಿಸಿದ ಕ್ರಿ.ಶ.1545 ಅಕ್ಟೋಬರ್ 15ರ ಶಾಸನ ಪ್ರಮುಖವಾದುದು.

ಈ ಶಾಸನದಲ್ಲಿ ನಾರಾಯಣದೇವನು ಶ್ರೀರಂಗಪಟ್ಟಣ ಸೀಮೆಯ ಬಲ್ಲಾಳಪುರ ಮತ್ತು ಕಣಂಬಾಡಿ ಸೀಮೆಯ ಮೊಳನಾಡು ಸ್ಥಳಕ್ಕೆ ಸೇರಿದ ವರಾಹನ ಕಲಹಳ್ಳಿ ಎಂಬ ಗ್ರಾಮಗಳನ್ನು ಕ್ರಿ.ಶ.1545ರಲ್ಲಿ ದೇವಾಲಯದ ಹಲವಾರು ಸೇವೆಗಳಿಗೆಂದು ದಾನ ಮಾಡಿದನು. ಈ ಗ್ರಾಮಗಳಿಂದ ಬರಬೇಕಿದ್ದ ಒಟ್ಟು ಆದಾಯ 2000 ವರಹಗಳು. ಆದರೆ ಕ್ಷಾಮದ ಪರಿಸ್ಥಿತಿಯಿಂದ ಈ ಆದಾಯವನ್ನು 1200 ವರಹಗಳೆಂದು ನಿಗದಿಗೊಳಿಸಲಾಯಿತು. ಇದನ್ನು ದತ್ತಿಯಾಗಿಟ್ಟುಕೊಂಡು ಕೈಂಕರ್ಯ ನಡೆಸಬೇಕೆಂದು ಹೇಳಿದೆ[11].

ಶಾಸನ 7:- ಅರವೀಡು ಮನೆತನದ ಮೊದಲನೆಯ ಶ್ರೀರಂಗನಿಗೆ ಸೇರಿದ 3 ಶಾಸನಗಳಿವೆ. 'ಯತಿರಾಜಸಪ್ತತಿ'ಯ ಪಠನಕ್ಕೆ ಸಂಬಂಧಿಸಿದಂತೆ ಅರಸನು ಮತ್ತು ಆತನ ಮಗ ರಾಮರಾಜಮಹಾ ಅರಸನು, ಪರಾಂಕುಶಜೀಯರ್, ತಾತಾಚಾರ್ಯ ವೆಂಕಟೇಶಭಟ್ಟ ಮತ್ತು ಇತರ ಆಚಾರ್ಯ ಪುರುಷರು ಮಾಡಿದ ಕೆಲವು ಏರ್ಪಾಡುಗಳಿಗೆ ಸಂಬಂಧಿಸಿದಂತೆ

ಶಾಸನವನ್ನು ಹಾಕಿಸಬೇಕೆಂಬ ಆಜ್ಞೆಯನ್ನು ಕ್ರಿ.ಶ. 1574ನೆಯ ವರ್ಷ 30ನೇ ಏಪ್ರಿಲ್ ದಿನಾಂಕದ ಶಾಸನ ಒಳಗೊಂಡಿದೆ. ಇದನ್ನು ಮೇಲುಕೋಟೆಯ ದೇವಸ್ಥಾನದ ಭಾಷ್ಯಕಾರರ ಸನ್ನಿಧಿಯಲ್ಲಿ ಐವತ್ತಿಬ್ಬರು ಅನುಷ್ಠಾನಕ್ಕೆ ತಂದರು. ಅದರಂತೆ 'ಯತಿರಾಜ ಸಪ್ತತಿ'ಯನ್ನು ಪ್ರತಿದಿನವೂ ಹಾಗೂ ವಿಶೇಷವಾಗಿ ತಿರುನಕ್ಷತ್ರಗಳನ್ನು ಆಚರಿಸುವ ದಿನಗಳಂದು ಅಕ್ಷರ ವೃತ್ತಿಯ ಬಳಿಕ ಅಂದರೆ ದಿವ್ಯ ಪ್ರಬಂಧಗಳನ್ನು ಪಠಿಸಿದ ಬಳಿಕ ಪಠಿಸುವ ಏರ್ಪಾಡು ಮಾಡಲಾಯಿತು. 'ಯತಿರಾಜಸಪ್ತತಿ' ಎಂಬುದು ರಾಮಾನುಜಾಚಾರ್ಯರನ್ನು ಸ್ತುತಿಸುತ್ತಾ ಶ್ರೀ ವೇದಾಂತದೇಶಿಕರು ರಚಿಸಿದ ಶ್ಲೋಕಮಾಲೆ.

ಈ ಶಾಸನದಿಂದ ಉದಿತವಾಗುವ ಅಂಶವೆಂದರೆ ವಿಜಯನಗರದ ಅರಸರು ವೈಷ್ಣವ ಧರ್ಮದ ಏಳಿಗೆಗೆ ಬೇಕಾದಂತಹ ವಿತ್ತೀಯ ಸೌಕರ್ಯಗಳನ್ನು ಮಾತ್ರ ಒದಗಿಸದೆ, ಅದರ ಆಚರಣೆಗೂ ಹೆಚ್ಚಿನ ಮಾನ್ಯತೆ ನೀಡಿದ್ದುದು ಕಂಡು ಬರುತ್ತದೆ. ರಾಮಾನುಜಾಚಾರ್ಯರಿಗೆ ಅರಸರು ನೀಡುತ್ತಿದ್ದ ಗೌರವವೂ ಇದರಿಂದ ವ್ಯಕ್ತವಾಗುತ್ತದೆ.

ಶಾಸನ 8:- ಅರವೀಡು ಮನೆತನದ ಶ್ರೀರಂಗರಾಯನ ಕಾಲದ ಮತ್ತೊಂದು ಶಾಸನ ಕ್ರಿ.ಶ.1585 ಅಕ್ಟೋಬರ್ 17ರಂದು ಕೆತ್ತಲಾಗಿದೆ. ಶಾಸನವು ಸಂಸ್ಕೃತ ಭಾಷೆಯಲ್ಲಿದೆ. ಭಿನ್ನವಾದ ಈ ಶಾಸನದಲ್ಲಿ ಏಟ್ಟೂರು ವಾಸಿಯಾದ ಕುಮಾರ ತಾತಾಚಾರ್ಯರಿಗೆ ನೀಡಲಾದ ಕೆಲವು ಮರ್ಯ್ಯಾದೆಗಳ ಪ್ರಸ್ತಾಪವಿದೆ. ಈ ಸಂದರ್ಭದಲ್ಲಿ ದೇವಾಲಯದ ಶ್ರೀ ಭಾಷ್ಯ, ಮುದ್ರಿಕಾ, ಕೈಶಿಕ ಪುರಾಣ, ಶಠಾರಿಶತಕ ಮುಂತಾದುವುಗಳ ಪಠನಕ್ಕಾಗಿ ಮಾಡಲಾದ ಏರ್ಪಾಡುಗಳನ್ನು ಪ್ರಸ್ತಾಪಿಸಲಾಗಿದೆ. ಆದರೆ ಶಾಸನದ ಉದ್ದೇಶ ದೇವರ ಸಮ್ಮುಖದಲ್ಲಿ ಅರಸನು ಕುಮಾರತಾತಾಚಾರ್ಯ್ಯರಿಗೆ ಮುದ್ರೆಯೊಂದನ್ನು ನೀಡಿದ ವಿಷಯವನ್ನು ತಿಳಿಸುವುದು. ಅರಳುಪಾಡು, ತೀರ್ಥಪ್ರಸಾದಗಳನ್ನು, ಇದು ಶ್ರೀ ವೈಷ್ಣವರಿಗೆ ನೀಡಿದ ಬಳಿಕ ಇವರಿಗೆ ನೀಡಬೇಕೆಂದೂ, ಈ ಮುದ್ರೆಯನ್ನು ಹೊಂದಿದ್ದಾತನಿಗೆ ದೇವರ ಪ್ರಸಾದ ನೈವೇದ್ಯಗಳಲ್ಲಿ ಒಂದು ಭಾಗ ಕೊಡಬೇಕೆಂದೂ, ಕೈಶಿಕ ಪುರಾಣ ಮತ್ತು ಮೊಲಕ ಮುಂಡಪೆರುಮಾಯನಗಳನ್ನು ಪಠಿಸಿದ ಸಂದರ್ಭಗಳಲ್ಲಿ ಇಂತಹಾ ಪ್ರಸಾದ ವಿನಿಯೋಗವಾಗಬೇಕೆಂದೂ ಕಟ್ಟಳೆ ಮಾಡಲಾಯಿತು.

ಈ ಶಾಸನದಿಂದ ಉದಿತವಾಗುವ ಪ್ರಮುಖ ಅಂಶವೆಂದರೆ ಅರಸರು ಗುರುಗಳ ವಿಚಾರದಲ್ಲಿ ಹೊಂದಿದ್ದಂತಹಾ ಗೌರವ ಅವರಿಗೆ ಒದಗಿಸಿದ ಸೌಕರ್ಯಗಳು

[illegible]

ಶ್ರೀರಾಮಾನುಜರು ರಚಿಸಿದ ಕೃತಿಗಳ ಸ್ಮರಣೆ. ಇವುಗಳಿಂದ ಮೇಲುಕೋಟೆಯ ಮೇಲೆ ಹೊಂದಿದ್ದ ಅಭಿಮಾನವನ್ನು ಹೊರಹಾಕುತ್ತದೆ.

ಈ ಮೇಲಿನ ಶಾಸನಗಳ ಸಮೀಕ್ಷೆಯಿಂದ ವಿಜಯನಗರದ ಅರಸರ ಕಾಲದಲ್ಲಿ ಮೇಲುಕೋಟೆಯು ದಕ್ಷಿಣ ಭಾರತದಲ್ಲಿಯೇ ಒಂದು ಪ್ರಸಿದ್ಧವಾದ ವೈಷ್ಣವ ಧರ್ಮಕ್ಷೇತ್ರವಾಗಿದ್ದುದು ತಿಳಿದು ಬರುತ್ತದೆ. ಮೊದಲನೇ ಬುಕ್ಕರಾಯ, ಪ್ರೌಢದೇವರಾಯ, ವಿರೂಪಾಕ್ಷ, ಕೃಷ್ಣದೇವರಾಯ, ಅಚ್ಯುತದೇವರಾಯ, ಶ್ರೀರಂಗರಾಯರಂತಹಾ ಅರಸರುಗಳಿಂದ ಮೇಲುಕೋಟೆಯು ಒಂದು ವಿಶಿಷ್ಟ ಸಾಂಸ್ಕೃತಿಕ ಕ್ಷೇತ್ರವಾಗಿ ಮಾರ್ಪಟ್ಟಿತು. ಈ ರಾಜರುಗಳು ನೀಡಿದ ದಾನ, ದತ್ತಿಗಳು ಮೇಲುಕೋಟೆಯ ಸುತ್ತಮುತ್ತಲಿನ ಪ್ರದೇಶಗಳು ಸಂಪದ್ಭರಿತವಾದವು. ವೈಷ್ಣವ ಮತ್ತು ಜೈನ ಪಂಥಗಳ ಗೊಂದಲದ ನಡುವೆಯೂ ತಾವು ಬಹುಮುಕ್ತ ಸಮಾಜದ ಪ್ರತಿನಿಧಿಗಳೆಂಬುದನ್ನು ಮರೆಯದೆ ಮೇಲುಕೋಟೆಗೆ ಉದಾರ ಪ್ರೋತ್ಸಾಹ ನೀಡಿದರು.

ಶ್ರೀರಾಮಾನುಜರು ಕರ್ನಾಟಕದಲ್ಲಿ ಹಾಗೂ ದೇಶದ ಇತರ ಕಡೆಗಳಲ್ಲಿ ವಾಸಿಸಿದುದರ ಸ್ಥಳಗಳಲ್ಲಿ ಮೇಲುಕೋಟೆ ಪ್ರಮುಖವಾದುದ್ದು. ಇವರ ಕಾಲದಲ್ಲಿ ರಾಮಾನುಜರನ್ನು ದೈವತ್ವಕ್ಕೇರಿಸಲಾಯಿತು. ಶ್ರೀಭಾಷ್ಯವಂತೂ ರಾಮಾನುಜರೇ ರಚಿಸಿದ ಗ್ರಂಥ. ಇದನ್ನು ಪಠಿಸುವ ಸಂಪ್ರದಾಯ ಆರಂಭವಾಯಿತು. ದೇವಾಲಯದ ಆವರಣದೊಳಗೆ ರಾಮಾನುಜರಿಗೆ ನಮ್ಮಾಳ್ವಾರರಿಗೂ ಹಾಗೂ ಅನಂತರದ ಕಾಲದಲ್ಲಿ ಪಿಳ್ಳೈಲೋಕಾಚಾರ್ಯರಿಗೂ ಪ್ರತ್ಯೇಕವಾದ ಗುಡಿಗಳನ್ನು ಕಟ್ಟಿಸಲಾಯಿತು. ಈ ರೀತಿ ವಿಜಯ ನಗರದ ಕಾಲದಲ್ಲಿ ಶ್ರೀ ವೈಷ್ಣವ ಧರ್ಮ - ವಿಶಿಷ್ಟಾದ್ವೈತವನ್ನು ಹೆಚ್ಚು ಜನಪ್ರಿಯಗೊಳಿಸಲಾಯಿತು.

4.3 ಮೈಸೂರು ಒಡೆಯರ ಕಾಲದಲ್ಲಿ ಮೇಲುಕೋಟೆ:

ವಿಜಯನಗರ ಸಾಮ್ರಾಜ್ಯದ ಅವನತಿಯ ತರುವಾಯ ತಲೆ ಎತ್ತಿದ ರಾಜ್ಯಗಳಲ್ಲಿ ಮೈಸೂರು ಒಡೆಯರ ವಂಶವು ಪ್ರಮುಖವಾದುದು. ಈ ವಂಶವು 5 ಶತಮಾನಗಳಷ್ಟು ದೀರ್ಘಕಾಲ ಮೈಸೂರು ಸಂಸ್ಥಾನವನ್ನು ಆಳ್ವಿಕೆ ನಡೆಸಿದರು. ವಿಜಯನಗರದ ಸಂಪ್ರದಾಯವನ್ನು ಮುಂದುವರೆಸಿದ ಒಡೆಯರು ಕಲೆ, ಸಾಹಿತ್ಯ, ಧರ್ಮ, ಸಂಗೀತ ಮತ್ತು ಚಿತ್ರಕಲೆಗಳಲ್ಲಿ ಉನ್ನತಿ ಸಾಧಿಸಿ ಹಿಂದೂ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದರು. ಮೂಲತಃ

ನಾರಾಯಣನ ಭಕ್ತರಾದ ಒಡೆಯರ ವಂಶಸ್ಥಾಪಕರಾದ ಯದುರಾಯ ಮತ್ತು ಕೃಷ್ಣರಾಯರು ಮೇಲುಕೋಟೆಯಲ್ಲಿ ಉಳಿದು ಇಲ್ಲಿಂದಲೇ ತಮ್ಮ ಸಾಮ್ರಾಜ್ಯ ಸ್ಥಾಪನೆಯ ಕಾರ್ಯವನ್ನು ಆರಂಭಿಸಿದರು [12]. ಮೇಲುಕೋಟೆಯ ವೈಭವವು ಇವರ ಕಾಲದಲ್ಲಿ ಇಮ್ಮಡಿಯಾಯಿತು. ಈ ವೈಭವವು ಮೈಸೂರಿನ ಒಡೆಯರ ಔದಾರ್ಯದಿಂದಲೇ ಬಂದಿರುವುದರಲ್ಲಿ ಸಂಶಯವಿಲ್ಲ. ಮೈಸೂರು ಒಡೆಯರ ಆಳ್ವಿಕೆಯ ಕಾಲದ ಹಲವಾರು ಶಾಸನಗಳು ಮೇಲಿನ ಅಂಶಗಳನ್ನು ನಿರೂಪಿಸುತ್ತವೆ. ಅರಸರು ಹೇರಳವಾದ ದಾನಗಳನ್ನು ಮಾಡುವುದರ ಮೂಲಕ ದೇವಾಲಯಕ್ಕೆ ರಾಜಾಶ್ರಯವನ್ನು ಮುಂದುವರೆಸಿದರು. ಬಹುಪಾಲು ಅರಸರು ವೈಷ್ಣವ ಧರ್ಮಾನುಯಾಯಿಗಳಾಗಿದ್ದು ತಿರುನಾರಾಯಣನನ್ನು ಭಕ್ತಿಯಿಂದ ಆರಾಧಿಸುತ್ತಿದ್ದರು.

ಮೈಸೂರು ಒಡೆಯರ ಕಾಲದ ಶಾಸನಗಳು:

ಶಾಸನ 1:- ಮೈಸೂರು ರಾಜ ಒಡೆಯರ ಕಾಲದ ಮೊದಲ ಶಾಸನವೆಂದು ಗುರುತಿಸಲ್ಪಟ್ಟಿರುವ ಕ್ರಿ.ಶ.1614. ದಿನಾಂಕ 1 ಏಪ್ರಿಲ್ ತಿಂಗಳಿನಲ್ಲಿ ರಾಜಒಡೆಯರಿಂದ ಹೊರಡಿಸಲ್ಪಟ್ಟ ತಾಮ್ರ ಶಾಸನವು ಮೇಲುಕೋಟೆಯ ಉಲ್ಲೇಖಹೊಂದಿದೆ. ಇದು ಒಂದು ದಾನಶಾಸನವಾಗಿದೆ. ಕನ್ನಡಲಿಪಿಯಲ್ಲಿದೆ [13].

ಮೇಲುಕೋಟೆಯ ಸ್ವಾಮಿಯ ಸನ್ನಿಧಿಯಲ್ಲಿ ರಾಜ ಒಡೆಯರು 14 ಜನ ಬ್ರಾಹ್ಮಣರಿಗೆ ಸೀಳನೆರೆ ಗ್ರಾಮವನ್ನು ಸ್ವಃ ಧಾರೆಯೆರೆದುಕೊಟ್ಟಿದ್ದಾರೆ. ಹದಿನಾಲ್ಕು ಜನರ ಕುಟುಂಬದ ಹೆಸರುಗಳು ಈಗಲೂ ಹಾಗೆಯೇ ಮುಂದುವರೆದು ಕೊಂಡು ಬಂದಿದೆ. ಹಾಗೂ ಶಾಸನೋಕ್ತ ಸೀಳನೆರೆಗ್ರಾಮ ಮತ್ತು ಗಡಿಯಾದ ಗಡುಗನಹಳ್ಳಿ, ಚಿಕ್ಕನಹಳ್ಳಿ, ಚಟ್ಟನಹಳ್ಳಿ, ಕೊಂಗನಹಳ್ಳಿ ಇವು ಈಗಲೂ ಅದೇ ಹೆಸರಿನಲ್ಲಿ ಮುಂದುವರೆದಿವೆ.

ಶಾಸನ 2:- ದೇವಸ್ಥಾನದ ಸಕಲವಾದ ಅಧಿಕಾರವೂ ಅರಮನೆಗೆ ಸೇರಿದ್ದರಿಂದ ಇನ್ನು ದೇವಸ್ಥಾನದ ಸ್ವತ್ತುಗಳಿಗೆ ಲೋಪವಿಲ್ಲವೆಂದು ತಿಳಿದು ಚೆಲುವರಾಯಸ್ವಾಮಿಯವರಿಗೆ ಅಮೂಲ್ಯ ರತ್ನಗಳಿಂದ ನೂತನವಾಗಿ ಮಾಡಿಸಿದ ರಾಜಮುಡಿ ಎಂಬ ಕಿರೀಟವನ್ನು ತಮ್ಮ ಹೆಸರಿನಿಂದ ಸಮರ್ಪಿಸಿದರು.

ಮೇಲಿನ ಅಂಶವನ್ನು ರಾಜ ಒಡೆಯರು ಕ್ರಿ.ಶ.1614 ದಿನಾಂಕ 1 ಜುಲೈ ತಿಂಗಳಿನಲ್ಲಿ

ಶಾಸನ ಹೊರಡಿಸಿದರು. ವೈರಮುಡಿಯನ್ನು ಧರಿಸಿ ತೆಗೆದ ನಂತರ ತಾವು ಸಮರ್ಪಿಸಿದ ಈ ರಾಜಮುಡಿಯನ್ನು ಧರಿಸುವಂತೆ ಹೇಳಿದೆ [14]. ರಾಜ ಒಡೆಯರು ಶ್ರೀನಾರಾಯಣ ಸ್ವಾಮಿಯವರಿಗೆ ಅಮೂಲ್ಯ ರತ್ನಕವಚವನ್ನು ಒಪ್ಪಿಸಿದರು.

ಶಾಸನ3:- ರಾಜಒಡೆಯರು ಕ್ರಿ.ಶ.1614ರಲ್ಲಿ ಶ್ರೀರಂಗಪಟ್ಟಣಕ್ಕೆ ಸೇರಿದ ಕುರುವಂಕ ನಾಡು ಹೋಬಳಿಗೆ ಸೇರಿದ ಮುತ್ತಿಗೆರೆ ಗ್ರಾಮವನ್ನು ಅದಕ್ಕೆ ಸೇರಿದ 10 ಉಪಗ್ರಾಮಗಳನ್ನು ತಮಗೆ ಉದಾರವಾಗಿ ವಿಜಯನಗರದ 'ವೆಂಕಟಪತಿರಾಜರು' ಕೊಟ್ಟಿದ್ದರು. ಮುತ್ತಿಗೆರೆ ಗ್ರಾಮಕ್ಕೆ ನರಸಿಂಹಪುರವೆಂದು ನಾಮಕರಣಮಾಡಿ ಅದಕ್ಕೆ ಸೇರಿದ 10 ಗ್ರಾಮಗಳನ್ನು 50 ವೃತ್ತಿಗಳಾಗಿ ವಿಭಾಗಿಸಿ 49 ವೃತ್ತಿಗಳನ್ನು ಮೇಲುಕೋಟೆಯ 28 ಶ್ರೀವೈಷ್ಣವ ಬ್ರಾಹ್ಮಣರುಗಳಿಗೆ ಮತ್ತು 1 ವೃತ್ತಿಯನ್ನು ಶೆಲ್ವಪಿಳ್ಳೆ ದೇವರ ಗರುಡವಾಹನಕ್ಕಾಗಿ ದಾನವಾಗಿ ಕೊಟ್ಟರು [15]. ಇದರ ಜ್ಞಾಪಕಾರ್ಥವಾಗಿ ನಾರಾಯಣಸ್ವಾಮಿಯ ರಂಗಮಂಟಪದ ಕಂಬದಲ್ಲಿ ರಾಜ ಒಡೆಯರ ವಿಗ್ರವನ್ನು ಉಂಟುಮಾಡಿ ಮಹಾಮಂಗಳಾರತಿ ಸಮಯದಲ್ಲಿ ಮಾರ್ಯಾದೆ ಮಾಡುವ ಕಾರ್ಯ ಇಂದಿಗೂ ನಡೆದುಬರುತ್ತಿದೆ.

ಶಾಸನ 4:- ಕ್ರಿ.ಶ. 1647 ಏಪ್ರಿಲ್ 27ರಂದು ಹೊರಡಿಸಿದ ಕಠೀರವ ನರಸರಾಜ ಒಡೆಯರ ತಾಮ್ರಾಶಾಸನವು ರಾಜನ ವಂಶಾವಳಿ ಮತ್ತು ಕೆಲವು ದಾನದ ವಿಚಾರವನ್ನು ಹೊಂದಿವೆ. ಈ ವಂಶದ ಮೂಲಪುರುಷರು ಮೇಲುಕೋಟೆಗೆ ಬಂದು ಇಲ್ಲಿನ ಸರ್ವಾನುಕೂಲಗಳಿಂದ ಕೂಡಿದ ಪ್ರದೇಶವನ್ನು ನೋಡಿ ನೆಲೆಸಿದರೆಂದು ಹೇಳಿದೆ [16].

ಪ್ರಸ್ತುತ ಶಾಸನದಲ್ಲಿ ಮೇಲುಕೋಟೆಗೆ ಸಂಬಂಧಿಸಿದಂತೆ ಸ್ವಾರಸ್ಯಕರವಾದ ಅಂಶವೆಂದರೆ ಭೂಮಿಯನ್ನು ವೃತ್ತಿಗಳಾಗಿ ಪಡೆದ ಹಲವಾರು ಪ್ರತಿಗ್ರಹಿಗಳು ಹಲವಾರು ಶಾಸ್ತ್ರಗಳಲ್ಲಿ ಪರಿಣಿತಿ ಪಡೆದವರೆಂಬುದು ಕೌಶಿಕ ಗೋತ್ರದ ವೇದಾಂತರ್ಯನು ಋಗ್ವೇದವೆಂಬ ಸಾಗರವನ್ನು ದಾಟಿದ್ದ, ರಾಮಾನುಜಾಚಾರ್ಯರ ಗ್ರಹಗಳ ಸ್ಥಿತಿಗಳನ್ನರಿತು ಜ್ಯೋತಿಶಾಸ್ತ್ರದ ತತ್ವವನ್ನು ಗ್ರಹಸಿದ್ಧಾಂತ. ಕೃಷ್ಣ ಸೂರಿಯೂ 'ಮೈಣಿಕ ಶ್ರೇಣಿ ಚೂಡಾರತ್ನ' ಎಂಬ ಬಿರುದನ್ನು ಪಡೆದಿದ್ದ. ಇಂತಹಾ ವಿದ್ವಾಂಸರಿಗಾಗಿ ಎಲ್ಲಾ ವಿಧದಲ್ಲೂ ಅಣಿಗೊಳಿಸಲಾದ ಮನೆಗಳನ್ನು ಕಟ್ಟಿಸಿ ಅವುಗಳಲ್ಲಿ ಒಂದು ವರ್ಷಕ್ಕೆ ಬೇಕಾದ ಎಲ್ಲಾ ಸಾಮಾಗ್ರಿಗಳನ್ನೂ ಶೇಖರಿಸಿಟ್ಟು ವೈಷ್ಣವರನ್ನು ಯದುಗಿರಿಗೆ ಬಂದು ನೆಲೆಸಲು ಆಹ್ವಾನಿಸಲಾಯಿತು ಎಂದು ಶಾಸನವು ತಿಳಿಸುತ್ತದೆ.

ಈ ಶಾಸನದಿಂದ ಉದಿತವಾಗುವ ಅಂಶಗಳೆಂದರೆ ರಾಜ ಒಡೆಯರು ವಿದ್ವಾಂಸರಿಗೆ ನೀಡುತ್ತಿದ್ದ ಸಹಕಾರಗಳು ಮತ್ತು ಸವಲತ್ತುಗಳು. ಅರಿವನ್ನುಂಟುಮಾಡುತ್ತದೆ. ಅವ್ಯಕ್ತ ಕಾರಣಗಳಿಂದ ಯದುಗಿರಿಯ ಜನಸಂಖ್ಯೆಯು ಕಡಿಮೆಯಾಗಿತ್ತೆಂಬುದನ್ನು ಸೂಚಿಸುತ್ತದೆ.

ಶಾಸನ 5:- ಮೇಲುಕೋಟೆಯಲ್ಲಿರುವ ಕ್ರಿ.ಶ.1678ನೆಯ ವರ್ಷದ ಶಾಸನ ಚಿಕ್ಕದೇವರಾಜನದು. ಹಿಂದೆ ದೇವರಾಜ ಒಡೆಯರು ಶಿಂಗರಯ್ಯಂಗಾರ್ಯರ ಮೊಮ್ಮಗ, ತಿರುಮಲಯ್ಯಂಗಾರ್ಯರ ಮಗನಾದ ಶ್ರೀರಂಗಪಟ್ಟಣದ ಅಳಶಿಂಗರೈಯ್ಯಾಂಗಾರ್ಯನು ಮಹಾಭಾರತವನ್ನು ಪಠಿಸುವಾಗ ಯುಧಿಷ್ಠಿರ ಪಟ್ಟಾಭಿಷೇಕದ ಘಟ್ಟವನ್ನು ಕೇಳಿ, ಆ ಸಂದರ್ಭದಲ್ಲಿ ತಮ್ಮ ಕಾಣಿಕೆಯೆಂದು ಎರಡು ಗ್ರಾಮಗಳನ್ನು ದಾನವಾಗಿ ನೀಡಿದರು. ಅವುಗಳಲ್ಲಿ ಒಂದನ್ನು ಪ್ರತಿಗ್ರಹಿಯಾದ ಅಳಶಿಂಗರೈಯ್ಯಂಗಾರ್ಯನು ದೇವಸ್ಥಾನಕ್ಕೆ ನೀಡಿ ಅದಕ್ಕೆ ಪ್ರತಿಯಾಗಿ ಮತ್ತೊಂದು ಗ್ರಾಮವನ್ನು ಪಡೆದುಕೊಂಡನೆಂದು ಈ ಶಾಸನ ತಿಳಿಸುತ್ತದೆ[17].

ಮೈಸೂರು ಒಡೆಯರ ಇತರ ಕೊಡುಗೆಗಳು:

ಮೈಸೂರ ಅರಸರು ಮೇಲುಕೋಟೆಯ ಮೇಲೆ ಹೊಂದಿದ್ದ ಅತೀವ ಅಭಿಮಾನ ಅದರ ಹಿರಿಮೆಯನ್ನು ಮತ್ತಷ್ಟು ಹೆಚ್ಚಿಸಿತು. ರಾಜರು ಮೇಲುಕೋಟೆಗೆ ದಾನ ದತ್ತಿಗಳನ್ನು ನೀಡುತ್ತಿದ್ದು ಮಾತ್ರವಲ್ಲದೆ ಇಲ್ಲಿ ಧಾರ್ಮಿಕ ಉತ್ಸವಗಳಲ್ಲಿ ಸ್ವತಃ ಪಾಲ್ಗೊಳ್ಳುತ್ತಿದ್ದರು. ಅವರು ನೀಡಿರುವ ಬಂಗಾರದ ಆಭರಣಗಳು ಇಂದಿಗೂ ಬಳಸಲ್ಪಡುತ್ತಿವೆ.

ಕೃಷ್ಣರಾಜ ಒಡೆಯರು ಕೃಷ್ಣರಾಜಮುಡಿಯೊಂದಿಗೆ ಕೊಟ್ಟ ಕೀರ್ತಿ ಮುಖ ಮತ್ತು ಗಂಡುಬೇರುಂಡಗಳಿರುವ ಅರಳೆಲೆ ಪದಕ ಎಂಬ ಆಭರಣವು ಆಕರ್ಷಕವಾಗಿದೆ. ರಾಜ ಒಡೆಯರು ರಾಜಮುಡಿಯೊಂದಿಗೆ ಚೆಲುವನಾರಾಯಣಸ್ವಾಮಿಯ ಪಾದಗಳನ್ನು ಅಲಂಕರಿಸಿರುವ ನವರತ್ನ ಖಚಿತ 'ಪದ್ಮ ಪೀಠ'ವನ್ನು ಕೊಡುಗೆಯಾಗಿ ನೀಡಿದ್ದಾರೆ. ಈ ಆಭರಣದಲ್ಲಿ......... ಕೈ ಮುಗಿದು ನಮಸ್ಕರಿಸುತ್ತಿರುವ 12 ಆಳ್ವಾರುಗಳ ಬಿಂಬಗಳಿವೆ. ಇವುಗಳಲ್ಲದೆ ಸುಂದರ ಕರ್ಣಕುಂಡಲಗಳು ಮುತ್ತಿನ ಮಣಿಕಟ್ಟು, ಮುತ್ತಿನ ತುದಿಯಿರುವ ಪಚ್ಚೆಕಲ್ಲುನ್ನು ಹೊಂದಿರುವ ಕೊರಂಬ ಎಂಬ ಆಭರಣಗಳು ಮೈಸೂರರಸರು ಕೊಟ್ಟಕೊಡುಗೆಗಳಾಗಿವೆ.

ಚಾಮರಾಜ ಒಡೆಯರ ಧರ್ಮಪತ್ನಿ ಮುದ್ದಾಜಮ್ಮಣ್ಣಿಯವರು ತಮ್ಮ ಕೈಂಕರ್ಯವಾಗಿರಬೇಕೆಂದು ಶಿಥಿಲವಾದ ಕಲ್ಯಾಣಿ ಪುಷ್ಕರಣಿಗೆ ಮೆಟ್ಟಿಲುಗಳನ್ನು ಕ್ರಿ.ಶ.1633ರಲ್ಲಿ ಕಟ್ಟಿಸಿದರು. ಚಿಕ್ಕದೇವರಾಜ ಒಡೆಯರು ಈ ಕಲ್ಯಾಣಿಯ ದಕ್ಷಿಣಕ್ಕೆ ಬಂದು ಮಾಧವ ದೇವಾಲಯವನ್ನೂ, ದೊಡ್ಡ ಕೃಷ್ಣರಾಜ ಒಡೆಯರು ಈ ಜಲಕ್ಷೇತ್ರದ ಸುತ್ತಿನ ಮಂಟಪಗಳನ್ನೂ, ಮುಮ್ಮಡಿ ಕೃಷ್ಣರಾಜ ಒಡೆಯರು ಕಟ್ಟೆಯ ಮೇಲಿನ ಭುವನೇಶ್ವರಿ ಮಂಟಪವನ್ನು ಕಟ್ಟಿಸಿದ ಉಲ್ಲೇಖಗಳಿವೆ[18].

ಮೇಲುಕೋಟೆಗೆ ಟಿಪ್ಪು ಸುಲ್ತಾನನ ಕೊಡುಗೆ:

ಟಿಪ್ಪು ಸುಲ್ತಾನನು ಹಿಂದೂ ದೇವಾಲಯದ ವಿಚಾರದಲ್ಲಿ ಮೃದುಧೋರಣೆಯನ್ನು ಹೊಂದಿದ್ದನು. ಇದಕ್ಕೆ ಮೇಲುಕೋಟೆಯೂ ಹೊರತಾಗಿರಲಿಲ್ಲ. ಟಿಪ್ಪು ಸುಲ್ತಾನನ ಕ್ರಿ.ಶ. 1785ನೇ ವರ್ಷದ ಶಾಸನ ಇದನ್ನು ಸ್ಪಷ್ಟಪಡಿಸುತ್ತದೆ. ಈ ಶಾಸನದಂತೆ ಟಿಪ್ಪು ತಿರುನಾರಾಯಣ ಮತ್ತು ನರಸಿಂಹ ದೇವಸ್ಥಾನಗಳಿಗೆ ಕೆಲವು ಗಂಡಾನೆಗಳನ್ನೂ, ಹೆಣ್ಣಾನೆಗಳನ್ನು ದಾನವಾಗಿ ನೀಡಿದುದರ ಪ್ರಸ್ತಾಪವಿದೆ. ಈ ಶಾಸನದಿಂದ ಮೇಲುಕೋಟೆಯಲ್ಲಿ ಒಬ್ಬ ಹಿಂದೂ ಹಾಗೂ ಒಬ್ಬ ಮಹಮ್ಮದೀಯ ಅಧಿಕಾರಿ ಪಾರುಪತ್ಯೆಗಾರರುಗಳನ್ನು ನೇಮಿಸಿದ್ದರೆಂದು ತಿಳಿದು ಬರುತ್ತದೆ. ದೇವಾಲಯದ ಪರವಾಗಿ ಇವರೇ ಆನೆಗಳನ್ನು ಸ್ವೀಕರಿಸಿದ್ದಾರೆ[19]. ಟಿಪ್ಪು ನರಸಿಂಹಸ್ವಾಮಿ ದೇವಾಲಯಕ್ಕೆ ಬಹೃತ್ ನಗಾರಿಯನ್ನು ಹಾಗೂ ಬೆಳ್ಳಿಯ ಬಟ್ಟಲುಗಳನ್ನು ನೀಡಿದ್ದಾನೆ. ಈ ನಗಾರಿಯ ಶಬ್ದವು ಮೇಲುಕೋಟೆಯ ಸುತ್ತಲಿನ ಹಳ್ಳಿಗಳಿಗೂ ಕೇಳಿಸುತ್ತದೆ. ಹೀಗೆ ಟಿಪ್ಪು ತನ್ನ ಆಳ್ವಿಕೆಯಲ್ಲಿ ಮೇಲುಕೋಟೆಗೆ ಉದಾರ ದಾನಗಳನ್ನು ನೀಡಿದ್ದಾನೆ.

ಟಿಪ್ಪುವಿನ ನಂತರ ಒಡೆಯರು ಆಳ್ವಿಕೆಯನ್ನು ಮುಂದುವರೆಸಿ ಕ್ರಿ.ಶ.1956ರವರೆಗೂ ಮೇಲುಕೋಟೆಯು ಪ್ರೋತ್ಸಾಹಿಸಲ್ಪಟ್ಟಿತು. ಮುಮ್ಮಡಿಕೃಷ್ಣರಾಜ ಒಡೆಯರು ಕಲಾಪೋಷಕರಾಗಿದ್ದು ಮೇಲುಕೋಟೆಗೆ ಉದಾರ ದಾನಗಳನ್ನು ನೀಡುತ್ತಿದ್ದರು. ಬ್ರಿಟೀಷರು ಹಿಂದೂ ಧಾರ್ಮಿಕ ಕೇಂದ್ರಗಳಿಗೆ ನೀಡುತ್ತಿದ್ದ ದಾನದ ವಿಷಯದಲ್ಲಿ ಯಾವುದೇ ನಿರ್ಭಂಧವಿಧಿಸಿರಲಿಲ್ಲ.

ಕರ್ನಾಟಕದ ಕೆಲವೇ ಮಹತ್ವದ ಧಾರ್ಮಿಕ ಸ್ಥಳಗಳಲ್ಲಿ ಮೇಲುಕೋಟೆಯೂ ಒಂದು. ಹೊಯ್ಸಳರಿಂದ ಆಶ್ರಯ ಪಡೆದು ರಾಮಾನುಜರಿಂದ ಆರಂಭಗೊಂಡ

ಮೇಲುಕೋಟೆಯ ವೈಭವವು ವಿಜಯನಗರದ ಅರಸರಿಂದ ಮುಂದುವರೆಯಿತು. ಮುಂದೆ ಮೈಸೂರು ಒಡೆಯರಿಂದ ಇದರ ವೈಭವವು ಪರಾಕಾಷ್ಠೆ ತಲುಪಿತು. ಹೀಗೆ ರಾಜಾಶ್ರಯದಲ್ಲಿ ಮೇಲುಕೋಟೆಯು ಆಧ್ಯಾತ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಕಂಗೊಳಿಸಿತು. ಸಾಂಸ್ಕೃತಿಕ ಪರಂಪರೆಯ ದೃಷ್ಟಿಯಿಂದ ಇದನ್ನು ಸಂರಕ್ಷಿಸುವುದು ನಮ್ಮೆಲ್ಲರ ಹೊಣೆಯಾಗಿದೆ.

ಅಡಿಟಿಪ್ಪಣಿಗಳು:

1. ಕರ್ನಾಟಕ ಸಂಸ್ಕೃತಿ ಸಮೀಕ್ಷೆ. ತಿಪ್ಪೇರುದ್ರಸ್ವಾಮಿ ಹೆಚ್. ಪು - 329,330

2. ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ. ತೈಲೂರು ವೆಂಕಟಕೃಷ್ಣ. ಪು - 1,2

3. ಕರ್ನಾಟಕ ಸಂಸ್ಕೃತಿ ಸಮೀಕ್ಷೆ. ಪು - 248

4. ಇ.ಸಿ - ಸಂಪುಟ - 5. ಪು - 161

5. ಅದೇ. ಪು - 154,155

6. ಅದೇ. ಪು - 164

7. ಅದೇ. ಪು - 144

8. ಅದೇ. ಪು - 144

9. ಅದೇ. ಪು - 163

10. ಅದೇ. ಪು - 138, 125,127

11. ಅದೇ. ಪು - 129

12. ಯಾದವಗಿರಿ ಜೀರ್ಣೋದ್ಧಾರ. ಪು - 27

13. ಇತಿಹಾಸ ದರ್ಶನ. ಸಂಪುಟ - 20. ಕರ್ನಾಟಕ ಇತಿಹಾಸ ಅಕಾಡೆಮಿ. ಪು - 163, 164

14. ಅದೇ. ಪು - 163

15. ಯಾದವಗಿರಿ ಜೀರ್ಣೋದ್ಧಾರ. ಪು - 80

16. ಇ.ಸಿ, ಸಂಪುಟ - 6. ಪು - 214

17. ಅದೇ. ಪು - 149

18. ಸುಧಾ ಮಾಸ ಪತ್ರಿಕೆ. ಮಾರ್ಚ್ 20, 2008. ಪು - 22

19. ಕರ್ನಾಟಕದಲ್ಲಿ ರಾಮಾನುಜಾಚಾರ್ಯರು. ಬಾ.ರಾ.ಗೋಪಾಲ್. ಪು - 54

ಅಧ್ಯಾಯ: 5

ಮೇಲುಕೋಟೆ ದೇವಾಲಯಗಳ ಸಂಸ್ಕೃತಿ

ಅಧ್ಯಾಯ: 5

ಮೇಲುಕೋಟೆ ದೇವಾಲಯಗಳ ಸಂಸ್ಕೃತಿ

ದೇವಾಲಯವು ಪರಬ್ರಹ್ಮಸ್ವರೂಪವಾದ ಭಗವಂತನ ಸ್ವರೂಪವೆಂದು ತಿಳಿದು ಆತನ ಪತ್ರಿನಿಧಿ ವಿಗ್ರಹವನ್ನು ಪ್ರತಿಷ್ಠಿಸಿ ಪೂಜಿಸಬೇಕೆನ್ನುವುದು ದೇವಾಲಯದ ಬಗ್ಗೆ ಇರುವ ವೇದಾಂತ ತತ್ವ. ದೇವಾಲಯದ ಇತರ ಭಾಗಗಳೆಲ್ಲ ಭಗವಂತನ ಅವಯವಗಳೆಂದೂ ಅದೇ ರೀತಿಯಲ್ಲಿ ದೇವಾಲಯದ ಅರ್ಧಮಂಟಪ, ನೃತ್ಯ ಮಂಟಪ, ಪ್ರಾಕಾರ, ಶಿಖರ, ಗೋಪುರಗಳು ಭಗವಂತನ ಅಂಗಾಂಗಳೆಂದು ಭಾವಿಸಬೇಕು ಎನ್ನುತ್ತದೆ ವೇದಾಂತ. ಕಲಿಯುಗದಲ್ಲಿ ದೇವತೆಗಳು ಮನುಷ್ಯರ ಕಣ್ಣಿಗೆ ಅಗೋಚರವಾಗಿರುವುದರಿಂದ ದೇವತೆಗಳ ದರ್ಶನ, ಪೂಜೆ, ಎಲ್ಲವೂ ದೇವತಾ ಪ್ರಾತಿನಿಧ್ಯವನ್ನು ಹೊಂದಿದ ವಿಗ್ರಹವನ್ನೇ ಅವಲಂಬಿಸಿರುತ್ತದೆ. ಈ ಪೂಜೆ ಪ್ರಕೃತಿಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡವು ಎನ್ನುವಂತೆ ಭಗವಂತನು ಉದ್ಯಾನವನ ನದಿತೀರ, ಪರ್ವತಪ್ರದೇಶ, ನಿರ್ಜನ ತಾಣ ಇತ್ಯಾದಿ ಪ್ರಕೃತಿ ಸಂಪತ್ತಿನಿಂದ ಕೂಡಿದ ಪ್ರದೇಶದಲ್ಲಿ ತನ್ನ ಸಾನಿಧ್ಯವನ್ನು ಹೊಂದಿರುವನು. ಹಾಗೂ ಲೋಕಕಲ್ಯಾಣಕ್ಕಾಗಿ ಗ್ರಾಮ ನಗರಗಳಲ್ಲಿ ಆಲಯುಗಳನ್ನು ನಿರ್ಮಿಸಿ ಭಗವಂತನ ವಿಗ್ರಹವನ್ನು ಪ್ರತಿಷ್ಠಿಸಿ ಪೂಜಿಸಬೇಕು ಎನ್ನುವುದು ವೇದಾಂತ. ಮನುಷ್ಯನಿಗೆ ನಿರ್ಮಲವಾದ ಮನುಸ್ಸನ್ನು ಪ್ರೇರೇಪಿಸಿ ಪವಿತ್ರ ವಾತಾವರಣವನ್ನು ಸೃಷ್ಟಿಸುವುದು ಇದರ ಮುಖ್ಯ ಉದ್ದೇಶ [1].

ಜನರ ಧಾರ್ಮಿಕ ಚಟುವಟಿಕೆಗಳನ್ನು ಅತ್ಯಂತ ಪ್ರಬಲವಾಗಿ ನಿರೂಪಿಸುವಂತಹ ಮಾಧ್ಯಮವೆಂದರೆ ದೇವಾಲಯಗಲು. ಹೀಗೆ ಹುಟ್ಟಿಕೊಂಡ ದೇವಾಲಯದ ಕಲ್ಪನೆ, ರಚನೆ, ವಿವಿಧ ಹಂತದಲ್ಲಿ ಬೆಳೆದು ಅವು ನಾಡಿನ ಧಾರ್ಮಿಕ ಕೇಂದ್ರಗಳಾದವು. ಆ ಪ್ರದೇಶದ ಸಂಸ್ಕೃತಿ, ಧರ್ಮ, ನಾಗರೀಕತೆ, ತತ್ವ ಶಾಸ್ತ್ರಕ್ಕೆ ಕೈಗನ್ನಡಿಯಾದವು. ವಿದ್ಯಾರ್ಜನೆಯ ಸೇವಾಕ್ಷೇತ್ರದ ಕೇಂದ್ರಗಳಾದವು.

ಈ ದೇವಾಲಯಗಳು ಚರಿತ್ರೆಯ ವಿವಿಧ ಯುಗಗಳಲ್ಲಿ, ಕಾಲಗಳಲ್ಲಿ, ಬೇರೆ ಬೇರೆ ಭಾಗಗಳಲ್ಲಿ ಪ್ರಚಲಿತದಲ್ಲಿದ್ದ ಧರ್ಮದ ವಿವಿಧ ಛಾಯೆಗಳನ್ನು, ಪ್ರಾಧಾನ್ಯತೆಯನ್ನು ಪ್ರತಿಬಿಂಬಿಸುವುದಲ್ಲದೆ, ಜನಗ ಅಭಿರುಚಿ, ಸಾಮಾಜಿಕ ಸಂಪ್ರಾದಾಯ,ನಂಬಿಕೆ ಇತ್ಯಾದಿ

ಸಮಕಾಲೀನ ವಿಷಯಗಳನ್ನು ತಿಳಿಸುವ ದಾಖಲೆಗಳ ಆಗರ ಎನ್ನಬಹುದು [2].

ಈ ಹಿನ್ನೆಲೆಯಲ್ಲಿ ಮೇಲುಕೋಟೆಯು ಒಂದು ವಿಶಿಷ್ಟ ಪೂರ್ಣವಾದ ದೇವಾಲಯ ಸಂಸ್ಕೃತಿಯಿರುವ ಕ್ಷೇತ್ರಗಳಲ್ಲಿ ಒಂದು. ಹೊಯ್ಸಳರ ಕಾಲದಲ್ಲಿ ಆರಂಭವಾದ ದೇವಾಲಯ ನಿರ್ಮಾಣ ಅಡ್ಡಿ ಆತಂಕಗಳಿಲ್ಲದೆ ಸಾಗಿ ಬಂದುದರ ಹಿರಿಮೆಯುನ್ನು ಇಂದಿಗೂ ಉಳಿಸಿಕೊಂಡಿದೆ. ಮೇಲುಕೋಟೆಯು ಹಲವಾರು ದೇವಾಲಯಗಳ ಗ್ರಾಮವಾಗಿದ್ದು ನಾರಾಯಣ ಸ್ವಾಮಿ ದೇವಾಲಯವು ಅತ್ಯಂತ ಪವಿತ್ರ ಮತ್ತು ಪ್ರಮುಖ ಕಟ್ಟಡವಾಗಿದೆ.

5.1 ನಾರಾಯಣಸ್ವಾಮಿ ದೇವಾಲಯ:

ಆಲಯುದ ಶಾಬ್ದಿಕವರ್ಣನೆ:- ಮೇಲುಕೋಟೆಯ ನಾರಾಯಣಸ್ವಾಮಿ ದೇವಾಲಯವು ಅತಿ ಪವಿತ್ರ ಕಟ್ಟಡವಾಗಿದೆ. ಊರಿನ ದಕ್ಷಿಣ ತುದಿಯಲ್ಲಿರುವ ದೇವಾಲಯವು ಊರಿನ ಒಂದೇ ಅಗಲವಾದ ಮತ್ತು ಉದ್ದವಾದ ರಸ್ತೆಯಂಚಿನಲ್ಲಿದೆ ಇದನ್ನು ರಾಜಬೀದಿ ಎನ್ನುತ್ತಾರೆ. ಈ ರಸ್ತೆಯು ಊರಿನ ಉತ್ತರ ಮತ್ತು ದಕ್ಷಿಣದ ಹೆಬ್ಬಾಗಿಲನ್ನು ಸಂಪರ್ಕಿಸುತ್ತದೆ. ಈ ರಸ್ತೆಯು ದೇವಾಲಯದ ಉತ್ಸವಗಳಿಗೆ ಬಳಸಲ್ಪಡುತ್ತದೆ.

ದೇವಾಲಯದ ಪ್ರಾಮುಖ್ಯತೆ:- ದೇವಾಲಯವು ಚತುಷ್ಕೋನಾಕಾರದಲ್ಲಿದ್ದು, **241' 99" X 189' 6 "** ಅಳತೆಯಲ್ಲಿದೆ. ಮುಖ್ಯ ಘಟಕವಾಗಿ ಗರ್ಭಗೃಹವಿದೆ. ಗರ್ಭಗೃಹ ಮತ್ತು ಅರ್ಧಮಂಟಪಗಳ ನಡುವೆ ಕಂಬಗಳಿರುವ ಕಿರಿದಾದ ಒಳಾಂಗಣವಿದೆ. 3 ಕಡೆಯೂ ಪ್ರವೇಶದ್ವಾರಗಳಿವೆ. ಇದು ಮಹಾಮಂಟಪ ಮತ್ತು ಚಿಕ್ಕ ಮುಖಮಂಟಪದ ಹಿಂದಿದೆ. ಮುಖಮಂಟಪದ ಎದುರಿನಲ್ಲಿ ಧ್ವಜಸ್ತಂಭ ಮತ್ತು ಬಲಿಪೀಠಗಳಿವೆ. ಇದು ವಿಶಾಲವಾದ ಅಂಗಳದಲ್ಲಿದ್ದು ಉತ್ತರ, ದಕ್ಷಿಣ ಮತ್ತು ಪಶ್ಚಿಮ ಭಾಗವು ತೆರೆದ ಭಾಗವಾಗಿದ್ದು, ಅಪೂರ್ವ ಭಾಗವು ಆವೃತವಾಗಿದ್ದು, ದೇವಾಲಯವು ಪ್ರಕಾರದಿಂದ ಆವೃತವಾಗಿದ್ದು ವಿಶಾಲ ಕಂಬಗಳಿಂದ ಕೂಡಿದ ವಿಹಾರವಾಗಿದೆ. ದೇವಾಲಯದ ಒಳ ಭಾಗ ಮತ್ತು ಹೊರಭಾಗ ಕಂಬಗಳಿಂದ ನಿಲ್ಲಿಸಿರುವ ಮೊಗಸಾಲೆ ಇದೆ. ಆಗ ಮೋಕ್ತ ಕ್ರಮಗಳನ್ನೇರ್ಪಡಿಸಿ ಧರ್ಮವನ್ನು ಮಾಡಿದ ಮೇಲೆ ಶಿಲಾಶಾಸನ ಬರೆಯುವುದು ಪದ್ಧತಿ. ಆದ್ದರಿಂದ ದೇವಾಲಯದ ಕ್ರಿ.ಶ.1099 ರಿಂದ 1103ರ ಅಂತರದಲ್ಲಿ ಕಟ್ಟಿರುವುದು ಸ್ಪಷ್ಟಪಡುತ್ತದೆ [3].

ಮುಖ್ಯ ಘಟಕ ಗರ್ಭಗೃಹ ಮತ್ತು ಅರ್ಧ ಮಂಟಪ:

ಚತುಷ್ಕೋನಾಕಾರದ ಗರ್ಭಗೃಹದ ಅಳತೆ **7^{1} 10^{11} X 8^{1} 2^{11}** ಅರ್ಧಮಂಟಪದ ಹೊರಗೋಡೆಗಳು ಗರ್ಭಗೃಹದ ಹೊರಗೋಡೆಗಳಿಂದ ಜೋಡಿಸಲ್ಪಟ್ಟಿದೆ. ಇದು **13^{1} X 6^{1} 9^{11}** ಅಳತೆಹೊಂದಿದೆ. ಗರ್ಭಗೃಹದ ದೇವಮೂರ್ತಿಯು ಮಧ್ಯಭಾಗದಲ್ಲಿದ್ದು ದೇವಾಲಯದ ಮುಖ್ಯದ್ವಾರಕ್ಕೆ ಎದುರಾಗಿ ನಿಂತಿದೆ. ಗರ್ಭಗೃಹ ಮತ್ತು ಅರ್ಧಮಂಪಗಳು **10^{1}** ಎತ್ತರವಾಗಿದ್ದು ಚಪ್ಪಟೆಯಾದ ಒಳಮಾಳಿಗೆಯಿಂದ ಕೂಡಿದೆ. ಗರ್ಭಗೃಹದಲ್ಲಿ ಚೌಕಾಕಾರದ ಹಲಗೆಯಿದ್ದು ಮಧ್ಯ ಬಿಂದುವಿನಿಂದ ಕೂಡಿದ ಪದ್ಮ ವೃತ್ತವಿದೆ. ಗರ್ಭಗುಡಿಯ ಬಾಗಿಲು ಹಿತ್ತಾಳೆ ತಗಡಿನಿಂದ ಅಲಂಕರಿಸಲ್ಪಟ್ಟಿದೆ. ಬಾಗಿಲಿನ ಎರಡೂ ಬದಿಯಲ್ಲಿ ದ್ವಾರಪಾಲಕ ಪ್ರತಿಮೆಗಳಿವೆ. ಇದು ವೇಸರ ಮಾದರಿಯ ವಿಮಾನವನ್ನು ಹೊಂದಿದೆ [4].

ಗರ್ಭಗೃಹ ಮತ್ತು ಅರ್ಧಮಂಟಪದ ಬಾಹ್ಯ ವೈಭವವು ಅಧಿಷ್ಠಾನ ಸಹಾಯದ ಭಿತ್ತಿ ಮತ್ತು ಗರ್ಭಗೃಹವು ಗೋಪುರದಿಂದಾವೃತವಾಗಿದೆ. ಅಧಿಷ್ಠಾನವು ರಚನಾತ್ಮಕ ಮೂರ್ತಿ ಸರಣಿಯಿಂದಕೂಡಿದೆ. ಉಪಾನವು ಅತ್ಯಂತ ಕೆಳಗಿನ ಮೂರ್ತಿ ಸರಣಿಯಾಗಿದೆ. ಇದರ ಮೇಲೆ ಕುಂಬವಿದೆ. ನಂತರದ್ದು ಕಂಠ, ಮೇಲೇರುವ ದೀರ್ಘ ಚತುರಸ್ರವಾಗಿದೆ. ಇದು ಇತರ ಮಾದರಿಗಳಿಗೆ ಸಂಪರ್ಕ ಕಲ್ಪಿಸುತ್ತದೆ.

ಕತ್ತಲೆ ಪ್ರದಕ್ಷಿಣೆ:

ಗರ್ಭಗುಡಿಗೂ ಹಾಗೂ ಅರ್ಧಮಂಟಪಕ್ಕೂ ಸೇರಿದ ಹಾಗೆ ಇರುವ ಒಂದು ಪ್ರಕಾರವೇ ಕತ್ತಲೆ ಪ್ರದಕ್ಷಿಣೆ. ಇದು ಮೂರು ಕಡೆಗಳಲ್ಲಿ ಮಾತ್ರವಿದೆ. ಛಾವಣಿಯ ಮಟ್ಟದಲ್ಲಿ ಗರ್ಭಗೃಹವಿದ್ದು ಅಂತರಾಳಕ್ಕೂ ಹಾಗೂ ಕತ್ತಲೆ ಪ್ರದಕ್ಷಿಣೆಗೂ ಅಂತರವಿದ್ದು, ಈ ಎರಡೂ ಕಟ್ಟಡಗಳ ಅಧಿಷ್ಠಾನದಲ್ಲಿ ಒಂದು ಆಳವಾದ ನಾಳವಿದೆ. ಮಳೆನೀರನ್ನು ಹೊರಹಾಕಲು ಛಾವಣಿಯ ಮೇಲ್ಭಾಗದಲ್ಲಿ ಮೂರು ಕಡೆಗೂ ಅಡ್ಡಲಾಗಿ ಕಲ್ಲುಹಾಸುಗಳಿವೆ.

ಮಹಾಮಂಟಪ:

ಅರ್ಧಮಂಟಪದ ಉತ್ತರ ಹಾಗೂ ದಕ್ಷಿಣ **(49' 10" X 51' 33")** ಭಾಗಗಳಿಗೆ ಮಂಟಪವಿದ್ದು ಇದು ಮಹಾಮಂಟಪವಾಗಿರುತ್ತದೆ. ಎರಡು ಸ್ತಂಭ ನಡುವೆ ರಚಿಸಿರುವ

[illegible]

[illegible]

[illegible]

[illegible]

[illegible]

ದ್ವಾರವು ಈ ಮಂಟಪಕ್ಕೆ ಪ್ರವೇಶದ್ವಾರವಾಗಿದೆ. ಈ ಮಂಟಪದ ದಕ್ಷಿಣ ಭಾಗಕ್ಕೆ ನಾಲ್ಕು ಸ್ತಂಭಗಳ ಮಧ್ಯಭಾಗದಲ್ಲಿ ಒಂದು ಗುಡಿಯಿದೆ. ಇದು ಚೆಲುವನಾರಾಯಣಸ್ವಾಮಿಯ ಉತ್ಸವ ಮೂರ್ತಿ ಗುಡಿಯಾಗಿದೆ. ಇದು 16 ಸ್ತಂಭಗಳ ಮಂಟಪವಾಗಿರುತ್ತದೆ.

ಮುಖಮಂಟಪ:

ಮಹಾಮಂಟಪದ ಮುಂಭಾಗದಲ್ಲಿರುವ ಕಟ್ಟಡವು ಮುಖ ಮಂಟಪವಾಗಿದೆ. ಇದು 2 ಕಂಬಗಳಿಂದ ನಿಂತಿದೆ. ಎರಡೂ ಕಡೆಗಳಿಂದಲೂ ಇದಕ್ಕೆ ಸೋಪಾನವಿದ್ದು ಮಹಾಮಂಟಪಕ್ಕೆ ಹೋಗಲು ಸಹಾಯಕವಾಗಿರುತ್ತದೆ. ಮಹಾಮಂಟಪ ಹಾಗೂ ಮುಖ ಮಂಟಪವು ಆಯತಾಕಾರಾರ ಕಂಬಗಳನ್ನು ಹೊಂದಿದೆ. ಕಂಬಗಳು ಪದ್ಮದಳಗಳಿಂದ ಅಲಂಕರಿಸಲ್ಪಟ್ಟಿದೆ.

ಮುಖ್ಯ ಘಟಕದ ಹೊರ ರೂಪ:

ಮಹಾಮಂಟಪ ಹಾಗೂ ಕತ್ತಲೆ ಪ್ರದಕ್ಷಿಣೆಗೆ ಸೇರಿದ ಹಾಗೆ ಎಲ್ಲಾ ಕಡೆಗಳಲ್ಲೂ ಗೋಡೆಗಳಿವೆ. ಅಧಿಷ್ಠಾನದ ಮೇಲಿರುವ ಗೋಡೆಗಳಲ್ಲಿ ಪ್ರಸ್ತರ, ಕಪೋತ ಹಾಗೂ ಹೊರಗೂಡುಗಳಿರುತ್ತವೆ. ಅಧಿಷ್ಠಾನವು ಉಪಾನ, ಪದ್ಮ, ಕಂಪ, ಊರ್ದ್ವ್‌ಪಟ್ಟಿಕ, ಕಂಪ, ಪದ್ಮ ಮತ್ತು ಪಟ್ಟಿಕ ಇವುಗಳಿಂದ ಕೂಡಿದೆ. ಉತ್ಸವಮೂರ್ತಿ ಗುಡಿಯ ಮೇಲ್ಭಾಗದಲ್ಲಿ ಒಂದು ಗೋಪುರವಿದೆ.

ಧ್ವಜಸ್ತಂಭ ಮತ್ತು ಬಲಿಪೀಠ:

ಮುಖಮಂಟಪದ ಎದುರಿಗಿರುವ ವೇದಿಕೆಯು ಈ ಮಂಟಪದ ಎತ್ತರದಲ್ಲಿಯೇ ಇದ್ದು ಈ ಭಾಗದಲ್ಲಿ ಧ್ವಜಸ್ತಂಭ ಹಾಗೂ ಬಲಿಪೀಠವಿದೆ. ಧ್ವಜಸ್ತಂಭವು ಎತ್ತರವಾದ ಸ್ತಂಭವಾಗಿದ್ದು ಇದು ಹಿತ್ತಾಳೆಯ ತಗಡಿನಿಂದ ಅಲಂಕರಿಸಲ್ಪಟ್ಟಿದೆ. ಮೇಲಿನ ತುದಿಯಲ್ಲಿ ಲೋಹದ ಧ್ವಜವಿದೆ. ಇದು ಚಿನ್ನದ ನೀರಿನಿಂದ ಕುಡಿಸಲ್ಪಟ್ಟಿದೆ (ಲೇಪಿಸಿದೆ). ಬಲಿಪೀಠವು ಮೂರು ಭಾಗಗಳಿಂದ ಕೂಡಿದೆ. ಇದರ ಕೆಳಗಿನ ಭಾಗವು ಚೌಕಾಕಾರದಲ್ಲಿದ್ದು, ಮೇಲ್ಭಾಗವು ವರ್ತುಲಾಕಾರದಲ್ಲಿದೆ.

ಪಾತಾಳಾಂಕಣ:

ಬಲಿಪೀಠಕ್ಕೆ ಸೇರಿದ ಹಾಗೆ ಮುಂಭಾಗದಲ್ಲಿ ವಿಶಾಲವಾದ ಪ್ರಾಂಗಣವಿದ್ದು, ಇದನ್ನು ಮೊಗಸಾಲೆಯೆಂದು ಹೇಳುತ್ತಾರೆ. ಇದು ಮಹಾದ್ವಾರದವರೆಗೂ ವಿಸ್ತರಿಸಿದೆ. ಈ ಮೊಗಸಾಲೆಯು ಅತಿ ಎತ್ತರವಾದ ಕಂಬಗಳಿಂದ ಕೂಡಿದೆ. ಪಾತಾಳಾಂಕಣದ ಕಂಬಗಳು ಯಾವುದೇ ಅಲಂಕಾರದಿಂದ ಕೂಡಿಲ್ಲ.

ಒಳಗಿನ ಇತರ ಪ್ರಾಕಾರಗಳು ಹಾಗೂ ಉಪಗುಡಿಗಳು:

ದೇವಸ್ಥಾನದ ಮುಖ್ಯ ಭಾಗದ ಸುತ್ತಲೂ ಪ್ರಾಕಾರವಿದ್ದು, ಈ ಪ್ರಾಕಾರವು ಎತ್ತರದ ಭಾಗದಲ್ಲಿ ನಿರ್ಮಿತವಾಗಿದೆ. ನಾಲ್ಕು ಸಾಲಿನ ಕಂಬಗಳಿಂದ ಕೂಡಿದ ವಿಹಾರವಿದೆ. ನೈರುತ್ಯ ಭಾಗದಲ್ಲಿ ಪರಮ ಪದನಾಥರ ಗುಡಿಯಿದ್ದು ಹಾಗೂ ಸುದರ್ಶನ ಆಳ್ವಾರ್ ಗುಡಿಗಳಿವೆ. ಇದರ ಮುಂಭಾಗದಲ್ಲಿ ಚಿಕ್ಕಕೋಣೆಯಲ್ಲಿ ತಿರುಕಚ್ಚಿನಂಬಿ ಗುಡಿಯಿದೆ. ಪ್ರಾಕಾರದ ಅಧಿಷ್ಠಾನವು ಸಾಮಾನ್ಯವಾಗಿದ್ದು ಇದು ಉಪಾನ, ಕಂಪ, ಕಂಠ, ಕಂಪ ಹಾಗೂ ಪಟ್ಟಿಕೆಗಳಿಂದ ಕೂಡಿದೆ.

ಅಮ್ಮನವರ ಗುಡಿ (ತಾಯಾರ್ ಗುಡಿ):

ಈ ಗುಡಿಯು ವಿಶಾಲವಾದ ಗರ್ಭಗುಡಿಯನ್ನು ಹೊಂದಿದ್ದು ಅದರೊಟ್ಟಿಗೆ ಅರ್ಧಮಂಟಪವಿದೆ. ಒಳಭಾಗದಲ್ಲಿ ಯಾವುದೇ ಕಂಬಗಳಿಲ್ಲ. ಈ ಗುಡಿಯ ಮುಖ್ಯ ಧ್ವಾರವು ಹಿತ್ತಾಳೆಯ ಪಟ್ಟಿಯಿಂದ ಅಲಂಕೃತಗೊಂಡು ಆಕರ್ಷಕವಾಗಿದೆ. ಈ ಬಾಗಿಲಿನ ನಿಲುವುಗಳು ಕೆಲವು ನೇರ ಶಾಖೆಗಳನ್ನು ಹೊಂದಿದ್ದು ಮೇಲಿನ ಹಾಸುಗಲ್ಲಿನಿಂದ ತೂಗು ಬಿಟ್ಟಿರುವ ಹಾಗೆ ಕಂಡು ಬರುತ್ತದೆ. ಈ ಬಾಗಿಲುವಾಡದ ಮಧ್ಯದಲ್ಲಿ ಗಜಲಕ್ಷ್ಮಿಯ ಕೆತ್ತನೆಯಿದೆ. ಈ ದ್ವಾರದ ಎರಡೂ ಬದಿಗೂ ಸ್ತ್ರೀದ್ವಾರ ಪಾಲಿಕೆಯರಿದ್ದಾರೆ.

ರಂಗಮಂಟಪ:

ಈ ಮಂಟಪವು ಉತ್ತರ ಪ್ರಕಾರದಲ್ಲಿದ್ದು, ದೇವಾಲಯದ ಬಹಳ ಸುಂದರವಾಗಿ ಕೆತ್ತಲ್ಪಟ್ಟ ಭಾಗವಾಗಿದೆ. ಈ ಪ್ರಕಾರದಲ್ಲಿ 44 ಕಂಬಗಳಿದ್ದು ಪ್ರತಿಯೊಂದು ಕಂಬವು ಅನುಪಮ ಕಲಾತ್ಮಕತೆಯನ್ನು ಹೊರಸೂಸುತ್ತಿದೆ. ಇಲ್ಲಿನ ಕೆತ್ತನೆಗಳು ಪೌರಾಣಿಕ ಕಥಾಂಶಗಳನ್ನು ಹಿನ್ನಲೆಯಾಗಿ ಹೊಂದಿದೆ. ಇವು ಬಹುಮುಖ ಕೆತ್ತನೆಗಳಿಂದ

ವಿಭಾಗಿಸಲ್ಪಟ್ಟಿವೆ. ಕಂಬಗಳ ಕೆತ್ತನೆಯಲ್ಲಿ ತಾಂತ್ರಿಕ ನೈಪುಣ್ಯತೆಯನ್ನು ಕಾಣಬಹುದು.

ಕೆಲವು ಚಿಕ್ಕಗುಡಿಗಳು:

ರಾಮಾನುಜ, ಕೂರತ್ತಾಳ್ವಾರ್, ಗಜೇಂದ್ರವರ್ಧನ ಗುಡಿಗಳು ಆಧುನಿಕ ಇಟ್ಟಿಗೆಗಳಿಂದ ನಿರ್ಮಾಣವಾಗಿವೆ. ಪಿಳ್ಳೈ ಲೋಕಾಚಾರ್ ಗುಡಿಯು ಪಾತಾಳಾಂಕಣಕ್ಕೆ ಪಕ್ಕದಲ್ಲಿದ್ದು ಇದರ ಪ್ರವೇಶದ್ವಾರವು ಹಿತ್ತಾಳೆ ಪಟ್ಟಿಗಳಿಂದ ಅಲಂಕೃತವಾಗಿದೆ. ಈ ಗುಡಿಗಳ ಗೋಪುರಗಳು ಒಂದೇ ರೀತಿಯಿದ್ದು ಇವು ಗಾರೆ ಮತ್ತು ಇಟ್ಟಿಗೆಗಳಿಂದ ರಚಿತವಾಗಿವೆ.

ಮಹಾದ್ವಾರ ಮತ್ತು ಗೋಪುರ:

ಮುಖ್ಯ ದ್ವಾರದಲ್ಲಿರುವ ಗೋಪುರವು ಸುತ್ತಲಿನ ಕಟ್ಟಡಗಳಲ್ಲಿಯೇ ಅತಿ ಎತ್ತರವಾಗಿದ್ದು ಇದನ್ನು 'ಚತುರಾನನ' ಎಂದು ಕರೆಯುವರು. ಇದರ ಅಧಿಷ್ಠಾನವು ಉಪಪೀಟ, ಉಪಾನ, ಜಗತಿ, ಪದ್ಮ, ಕಂಪ, ಪಟ್ಟಿಕ, ತ್ರಿಪಟ್ಟ, ಕುಮುದ, ಕಂಠ, ಪಟ್ಟಿ, ಕಂಠ, ಪದ್ಮ ಹಾಗೂ ಊರ್ದ್ವಪಟ್ಟಿಗಳನ್ನು ಕ್ರಮವಾಗಿ ಹೊಂದಿದೆ. ಹೊರಗಿನ ಮುಖ್ಯ ದ್ವಾರವು ತನ್ನ ಎರಡೂ ಬದಿಗೂ ಆನೆಯ ಕೆತ್ತನೆಯನ್ನು ಹೊಂದಿದೆ. ಹಾಗೆಯೇ ಎರಡೂ ಬದಿಯಲ್ಲಿ ದ್ವಾರಪಾಲಕರ ವಿಗ್ರಹವೂ ಇದೆ.

ಕೈಸಾಲೆ:

ದೇವಸ್ಥಾನದದ ಹೊರಗಿನ ಪ್ರಾಕಾರವು ಕೈಸಾಲೆಯೆಂಬ ಹೆಸರನ್ನು ಹೊಂದಿದೆ. ಇದು ಕಂಬಗಳಿಂದ ಕೂಡಿದ್ದು ದೇವಸ್ಥಾನದ ಸುತ್ತಲೂ ಹರಡಿದೆ. ಈ ಕಂಬಗಳ ಮೇಲೆಯೇ ಮೇಲ್ಚಾವಣಿಯನ್ನು ಕಾಣಬಹುದು. ಕೈಸಾಲೆಯು ಅಧಿಷ್ಠಾನದಿಂದ ಕೂಡಿದ್ದು ಉಪಾನ, ತ್ರಿಪಟ್ಟ, ಕಂಠ ಹಾಗೂ ಜಗತಿಯ ರೂಪಗಳನ್ನು ಹೊಂದಿದೆ. ಸಮತಟ್ಟಾದ ಕಲ್ಲುಹಾಸು ಛಾವಣಿಯಲ್ಲಿದ್ದು ಇವು ಇಳಿಜಾರಾಗಿದ್ದು ಇದಕ್ಕೆ ಕಪೋತ ಎನ್ನುವರು. ಕಪೋತದ ಮೇಲೆ ಇಟ್ಟಿಗೆ ಹಾಗೂ ಗಾರೆಯಿಂದ ಮಾಡಿದ ಹಾರಗಳಿವೆ. ಇವು ಚಿಕ್ಕ ಗೂಡುಗಳಂತಿದ್ದು ಈ ಗೂಡುಗಳಲ್ಲಿ ಅನೇಕ ದೇವ ದೇವಿಯರ ಮೂರ್ತಿಗಳಿವೆ.

ದೀಪಸ್ತಂಭ:

ದೇವಸ್ಥಾನದ ಮುಂಭಾಗದಲ್ಲಿ ರಸ್ತೆಯ ಆಚೆಗೆ ಒಂದು ಸ್ತಂಭವಿದ್ದು ಇದನ್ನು

ದೀಪಸ್ತಂಭ ಎನ್ನುವರು. ಇದು 45 ಅಡಿ ಎತ್ತರವಿದ್ದು ಕೆಳಗಿನ ಭಾಗವು ಚತುರ್ಮುಖವಾಗಿದ್ದು ಅದರ ಮೇಲಕ್ಕೆ 16 ಮುಖಗಳಿವೆ. ಕೆಳಗಿನ ಚತುರ್ಮುಖವು ಪೂರ್ವಕ್ಕೆ ಸಿಂಹವನ್ನು, ದಕ್ಷಿಣಕ್ಕೆ ಹನುಮಂತನನ್ನು ಪಶ್ಚಿಮಕ್ಕೆ ಗರುಡನನ್ನು ಹಾಗೂ ಉತ್ತರಕ್ಕೆ ಹಂಸವನ್ನು ಹೊಂದಿದೆ.

ವಾಸ್ತುಶಿಲ್ಪಶೈಲಿ, ಕಾಲಗಣನೆ ಮತ್ತು ಬೆಳವಣಿಗೆ:

ವಾಸ್ತುಶಿಲ್ಪ, ಕಲಾ ಮತ್ತು ಬೆಳವಣಿಗೆಯನ್ನು ತಿಳಿಯಲು ಸಾಕಷ್ಟು ಸಾಕ್ಷ್ಯಾಧಾರಗಳು ಇಲ್ಲದಿರುವುದರಿಂದ ಶೈಲಿಯನ್ನು ನೋಡಿಯೇ ಮೇಲ್ಕಂಡ ಅಂಶಗಳನ್ನು ತಿಳಿಯಲು ಯತ್ನಿಸಬಹುದು.

ಚೋಳರ ಕಾಲ:

ಗರ್ಭಗೃಹ, ಅರ್ಧಮಂಟಪ, ಅಧಿಷ್ಠಾನ, ಪ್ರಸ್ಥರ, ಭಿತ್ತಿ, ಉಪಾನ, ಪ್ರತಿ ಈ ಭಾಗಗಳು ಚೋಳರ ಶೈಲಿಯ ಕುರುಹುಗಳು. ಇಂಥವೇ ಶೈಲಿಯನ್ನು ಸುತ್ತಲಿನ ಚೋಳ ಕಟ್ಟಡಗಳಲ್ಲಿ ನೋಡಬಹುದು. ಅದಿಷ್ಠಾನ ಶೈಲಿಯು ಪೂರ್ವಚೋಳರ ಶೈಲಿಯಾಗಿದೆ. (11ನೇ ಶತಮಾನ). ಗಂಗವಾಡಿಯನ್ನು ಚೋಳರು ಜಯಿಸಿದ ನಂತರ ಚೋಳವಾಸ್ತು ಪರಂಪರೆ ಆರಂಭವಾಯಿತು. ಸಾಂಪ್ರಾದಾಯಿಕ ನಂಬುಗೆಯ ಪ್ರಕಾರ ರಾಮಾನುಜರು ಇಲ್ಲಿಗೆ ಬಂದು, ಮುಂಚಿನ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದರು. ಆಲಯದ ಮುಖ್ಯ ಭಾಗವು 11ನೇ ಶತಮಾನದ ಮಧ್ಯಭಾಗ ಅಥವಾ ಪೂರ್ವದಲ್ಲಿಯೇ ಆಗಿರಬಹುದೆಂದು ಅಧ್ಯಯನ ತಿಳಿಸುತ್ತದೆ[5].

ಹೊಯ್ಸಳರ ಕಾಲ:

ಗರ್ಭಗೃಹ ಮತ್ತು ಅರ್ಧಮಂಟಪ ಸೇರಿದ ಹಾಗೆ ಇರುವ ಕತ್ತಲೆ ಪ್ರದಕ್ಷಿಣವು ಕೆಳಭಾಗದಿಂದ ಮೇಲ್ಛಾವಣಿಯವರೆಗೂ ಅಂತರ ಹೊಂದಿದ್ದು ಇದನ್ನು ಹೊಯ್ಸಳರ ಕಾಲದಲ್ಲಿ ಸೇರಿಸಲಾಗಿದೆ. ಇಲ್ಲಿರುವ ವಾಸ್ತುಶಿಲ್ಪ ಶೈಲಿಯು ಸುಮಾರು 12ನೇ ಶತಮಾನದಲ್ಲಿ ಹೊಯ್ಸಳರ ಕಾಲದ ಕೆಲವು ದೇವಾಲಯದಲ್ಲಿ ಕಂಡು ಬರುತ್ತದೆ. ಈ ಶೈಲಿಯಲ್ಲಿ ಕಂಬದ ತಳಭಾಗವು ಆಯತಾಕಾರದಲ್ಲಿದ್ದು, ಮೇಲ್ಭಾಗಕ್ಕೆ ಅಷ್ಟಮುಖಗಳನ್ನು ಹೊಂದಿರುವುದನ್ನು ನೋಡಬಹುದು. ಶಾಸನದ ಪ್ರಕಾರ ಸುರಿಗೆಯ ನಾಗಯ್ಯನ ಕಾಲದಲ್ಲಿ ಈ ಭಾಗವು

ಕಟ್ಟಲ್ಪಟ್ಟಿದೆ [6]. ವಿಷ್ಣುವರ್ಧನನಿಂದ ಪಡೆದ ದತ್ತಿಯಿಂದಲೇ ರಾಮಾನುಜರು ಜೀರ್ಣೋದ್ಧಾರ ಕೈಗೊಂಡರೆಂಬುದಕ್ಕೆ ಪಿ.ಪಿ. 124 ಶಾಸನ ಆಧಾರವಾಗಿದೆ. ಚಕ್ರತ್ತಾಳ್ವಾರ್, ಯಾಗಶಾಲೆ, ತಾಯಾರ್‌ಗುಡಿ, ಅಡಿಗೆಮನೆ, ಯಾಗಶಾಲೆ ಇವು ಕತ್ತಲೆ ಪ್ರದಕ್ಷಿಣೆಯ ಕಂಬಗಳ ಶೈಲಿಯಲ್ಲಿರುವುದರಿಂದ ಇವು ಹೊಯ್ಸಳರ ಕಾಲದ ನಿರ್ಮಾಣಗಳಾಗಿವೆ [7].

ವಿಜಯನಗರದ ಕಾಲದಲ್ಲಿನ ಸೇರ್ಪಡೆಗಳು:

ತಾಯಾರ್ ಸನ್ನಿಧಿಯ ಮುಂದಿನ ರಂಗಮಂಟಪವು ಕ್ರಿ.ಶ.1458ರಲ್ಲಿ ನಿರ್ಮಾಣವಾಯಿತು. ಅದೇ ರೀತಿ ಮಹಾಮಂಟಪ ಹಾಗೂ ಕತ್ತಲೆ ಪ್ರದಕ್ಷಿಣೆಗಳ ಸಂಕೀರ್ಣದ ಹೊರಗೋಡೆಯೂ ಇವರ ಕಾಲದ ನಿರ್ಮಾಣವಾಗಿದೆ. ತಿಮ್ಮಣ್ಣ ದಂಡನಾಯಕನು ಮಹಮ್ಮದೀಯರ ದಾಳಿಯ ತರುವಾಯ ಸಮಗ್ರ ಮೇಲುಕೋಟೆಯನ್ನು ಜೀರ್ಣೋದ್ಧಾರಮಾಡಿ ಮರುಜೀವ ತುಂಬಿ 'ಜೀರ್ಣೋದ್ಧಾರಕ' ಎಂಬ ಬಿರುದು ಪಡೆದನು. ಮಹಾದ್ವಾರದ ಗೋಪುರವು ಹಂಪಿಯ ವಿರೂಪಾಕ್ಷ ದೇವಾಲಯದ ಉತ್ತರ ಪರಿಧಿಯ ಗೋಪುರ ಸೇರಿದಂತೆ ಹಲವು ದೇವಾಲಯಗಳ ಗೋಪುರಗಳೊಂದಿಗೆ ಸಾದೃಶ್ಯ ಹೊಂದಿರುವುದರಿಂದ ಇದು 15ನೇ ಶತಮಾನದಲ್ಲಿ ನಿರ್ಮಾಣವಾಯಿತೆಂದು ಹೇಳಬಹುದು[8].

ಮೈಸೂರು ಒಡೆಯರ ಕೊಡುಗೆ:

ಹೊರಗಿನ ಕೈಸಾಲೆ ಆದರ ಮೇಲಿರುವ ದೇವದೇವಿಯರ ಮೂರ್ತಿಗಳು. ಒಳಗಿನ ಹಲವು ಮೂರ್ತಿಗಳು ಒಡೆಯರ ಕಾಲದಲ್ಲಿ ನಿರ್ಮಾಣವಾದವು. ಮುಮ್ಮಡಿ ಕೃಷ್ಣರಾಜ ಒಡೆಯರು ಆಲಯದ ಮಹಾಪೋಷಕರಾಗಿದ್ದು ತಮ್ಮ ಹಾಗೂ ತಮ್ಮ ರಾಣಿಯರ ವಿಗ್ರಹಗಳನ್ನು ಇಲ್ಲಿ ಪ್ರತಿಷ್ಠಾಪಿಸಿದರು. ಪಿಳ್ಳೈ ಲೋಕಾಚಾರ್ಯರ ಗುಡಿಯು ಇವರ ಕಾಲದಲ್ಲಿಯೇ ನಿರ್ಮಾಣವಾಯಿತು.

ಮೂರ್ತಿಶಿಲ್ಪ ಮತ್ತು ಶಿಲ್ಪಕಲೆ:

ಇಲ್ಲಿರುವ ಮೂಲಮೂರ್ತಿ ತಿರುನಾರಾಯಣನ ರೂಪವು ಕರ್ನಾಟಕದಲ್ಲಿ ಇರುವ ಕೆಲವೇ ಕೆಲವು ಮೋಹಕ ಮೂರ್ತಿಗಳಲ್ಲಿ ಒಂದು. ಭಕ್ತರನ್ನು ಆಕರ್ಷಿಸುವಲ್ಲಿ ಅವರ ಮನೋಭಿಷ್ಠಗಳನ್ನು ಪೂರೈಸುವಲ್ಲಿ ತಿರುನಾರಾಯಣರ ಸಾಸ್ನದ್ಧನಾಗಿದ್ದಾನೆ ಎನ್ನುವಂತಿದೆ. ಇದು 6 ಅಡಿ ಎತ್ತರವಿದ್ದು, ಸಮಭಂಗ ಭಂಗಿಯಲ್ಲಿ ನಿಂತಿದೆ. ನಾಲ್ಕು ಭುಜಗಳನ್ನು

ಹೊಂದಿದ್ದು, ಮೇಲ್ಭಾಗದ ಬಲಹಸ್ತ ಹಾಗೂ ಎಡಹಸ್ತಗಳಲ್ಲಿ ಕ್ರಮವಾಗಿ ಚಕ್ರ ಹಾಗೂ ಶಂಕವನ್ನು ಧರಿಸಿ ಕೆಳಭಾಗದಲ್ಲಿರುವ ಬಲ ಹಾಗೂ ಎಡಹಸ್ತಗಳಲ್ಲಿ ಅಭಯಮುದ್ರೆಯನ್ನು ಹಾಗೂ ಗದೆಯನ್ನು ಹೊಂದಿದೆ. ಈ ಮೂರ್ತಿಯ ಲಕ್ಷಣಗಳನ್ನು ಗಮನಿಸಿದಾಗ ಇದು ಪೂರ್ವ ಚೋಳರ ಅಥವಾ ಚೋಳರ ಕಾಲಕ್ಕೆ ಸೇರಿದ ಮೂರ್ತಿ ಎಂಬುದು ತಿಳಿಯುತ್ತದೆ.

ಸ್ತಂಭಗಳಲ್ಲಿರುವ ಶಿಲ್ಪಕಲೆ:

ಉತ್ತರ ರಂಗಮಂಟಪದಲ್ಲಿ, ಪಶ್ಚಿಮಕ್ಕಿರುವ ತಿರುಕ್ಕಚ್ಚಿನಂಬಿ ಮಂಟಪದಲ್ಲಿ ಹಾಗೂ ದಕ್ಷಿಣದ ವಾಹನ ಮಂಟಪದಲ್ಲಿ ಅನೇಕ ಸುಂದರ ಶಿಲ್ಪಗಳಿರುವುದನ್ನು ನೋಡಬಹುದು. ಈ ಶಿಲ್ಪಕ್ಕೆ ವಿಷಯವಾಗಿರುವ ರಾಮಾಯಣ, ಮಹಾಭಾರತ, ಭಾಗವತ, ಪುರಾಣ, ದಶಾವತಾರದಲ್ಲಿರುವ ಶಿಲ್ಪಗಳನ್ನೂ ಹಾಗೂ ವಿಷ್ಣುವಿನ 24 ಮೂರ್ತಿಗಳನ್ನು ನೋಡಬಹುದು.

ರಾಮಾಯಣದಲ್ಲಿ ಬರುವ ಹನುಮಂತನ ಸಾಹಸಗಳು, ಹನುಮಂತನು ಸಂಜೀವಿನಿ ಪರ್ವತ ಹೊತ್ತಿರುವಂತಹ ಶಿಲ್ಪ, ಹನುಮಂತನ ಸೀತಾನ್ವೇಷಣೆ, ಹನುಮಂತ ಹಾಗೂ ರಾಕ್ಷಸನ ಕಾಳಗ, ರಾಮನಿಗೆ ವಂದಿಸುತ್ತಿರುವ ಹನುಮಂತನ ಶಿಲ್ಪಗಳು ಮನಮೋಹಕವಾಗಿವೆ.

ಮಹಾಭಾರತ ಕಥೆಗಳು:

ದ್ರೌಪದಿಯಸ್ವಯಂವರ, ಅರ್ಜುನ ಮೀನಿನ ಕಣ್ಣಿಗೆ ಬಾಣ ಹೊಡೆದಿರುವ ಸಂದರ್ಭ, ಪಾಂಡವರಿಗೆ ಹಾರ ಹಾಕುತ್ತಿರುವ ದ್ರೌಪದಿತಿ, ವಿಷ್ಣುವಿನ ಅವತಾರಗಳಾದ ವರಾಹ ನರಸಿಂಹ, ಕೃಷ್ಣನ ಅವತಾರಗಳ ಮೂರ್ತಿಗಳಿವೆ.

ಇವುಗಳೇ ಅಲ್ಲದೆ ಭಾಗವತದಲ್ಲಿ ಬರುವ ಕೃಷ್ಣನ ಎಲ್ಲಾ ರೀತಿಯ ಲೀಲೆಗಳು ಕೆತ್ತಲ್ಪಟ್ಟಿವೆ. ವಿಷ್ಣುವಿನ ಅವತಾರಗಳಾದ ಕೇಶವ, ಮಾಧವ, ನಾರಾಯಣ, ಜನಾರ್ಧನ, ಪಾಂಡುರಂಗ, ಶ್ರೀನಿವಾಸನ ಮೂರ್ತಿಗಳೇ ಅಲ್ಲದೆ ಗಣಪತಿ ಹಾಗೂ ನಟರಾಜನ ಮೂರ್ತಿಗಳೂ ಇವೆ.

5.2 ನರಸಿಂಹಸ್ವಾಮಿ ದೇವಾಲಯ:

ನಾರಾಯಣಸ್ವಾಮಿ ದೇವಾಲಯದಷ್ಟೇ ಪವಿತ್ರವೂ ಹಾಗೂ ಮಹತ್ವಉಳ್ಳದ್ದು ನರಸಿಂಹಸ್ವಾಮಿದೇವಾಲಯ. ಮೇಲುಕೋಟೆಯ ಪೂರ್ವಭಾಗಕ್ಕೆ ಬೆಟ್ಟದ ಮೇಲಿರುವ ಆಲಯವು ಪಶ್ಚಿಮಾಭಾನುಖವಾಗಿ ನಿಂತಿದೆ. 360 ಮೆಟ್ಟಿಲುಗಳನ್ನು ಹೊಂದಿರುವ ಆಲಯದ ಮುಖ್ಯದ್ವಾರದ ಗೋಪುರವು 80 ಅಡಿಗಳಷ್ಟು ಎತ್ತರವಾಗಿದೆ. ಇದರ ಅಧಿಷ್ಠಾನವು ಕಲ್ಲಿನಿಂದ ನಿರ್ಮಿಸಿದ್ದು ಇದರಲ್ಲಿ ಜಗತಿ, ಪಟ್ಟ, ಊರ್ಧ್ವಪದ್ಮ, ಕಂಠ, ಕಂಪ ತ್ರಿಪಟ್ಟ ಕುಮುದಗಳಿಂದ ಕೂಡಿದೆ. ಈ ಎಲ್ಲಾ ಶೈಲಿಗಳನ್ನು ಗಮನಿಸಿದಾಗ ಇದು ಚೋಳ ಹಾಗೂ ಹೊಯ್ಸಳರ ಕಾಲದ ಶೈಲಿಯನ್ನು ಸೂಚಿಸುತ್ತದೆ[9]. ಐದು ಅಂತಸ್ತಿನ ಈ ಗೋಪುರ ದ್ರಾವಿಡ ಶೈಲಿಗೆ ಸ್ಪಷ್ಟ ಉದಾಹರಣೆಯಾಗಿದೆ. ದ್ವಾರದ ಒಂದು ಕಂಬದಲ್ಲಿ ಶ್ರೀವಮಾನ್ ನಾರಾಯಣನ ಮೂರ್ತಿಯಿದ್ದು, ಅದರ ಎದುರಾದ ಕಂಬದಲ್ಲಿ ದೈನ್ಯ ಭಾವದಿಂದ ಕೈಜೋಡಿಸಿ ನಿಂತಿರುವ ಒಬ್ಬ ದೊರೆಯ ಶಿಲ್ಪವನ್ನು ಕಡೆಯಲಾಗಿದೆ. ಇದು ತಿರುಪತಿಯಲ್ಲಿರುವ ಶ್ರೀ ಕೃಷ್ಣದೇವರಾಯನ ಕಂಚಿನ ಪ್ರತಿಮೆಯನ್ನು ಖಚಿತವಾಗಿ ಹೋಲುತ್ತದೆ[10].

ಹಿಂದೆ ಹಾಗೂ ಮುಂದೆ ಇರುವ ತಳಕ್ಕೆ ಆಯತಾಕಾರದ ಬಾಗಿಲುಗಳಿದ್ದು ವಿಷ್ಣುವಿನ ಉಳಿದ ಭಂಗಿಗಳೂ ಇವೆ. ಇಲ್ಲಿಗುವ ಶಿಖರವು 'ಶಾಲಾ' ಎಂಬ ರೂಪದ್ದು. ಶಾಲಾವು ಸಿಂಹಲಲಾಟವನ್ನು ಹೊಂದಿದೆ. ನರಸಿಂಹಸ್ವಾಮಿಯ ಸನ್ನಿಧಿಯ ಪ್ರವೇಶಕ್ಕೆ ಮುಂಚೆಯೇ ಸಿಗುವ ಮುಖ್ಯ ದ್ವಾರವು 9 ಮೆಟ್ಟಿಲುಗಳನ್ನು ಹೊಂದಿದೆ. ನರಸಿಂಹಸ್ವಾಮಿ ಸನ್ನಿಧಿಗೆ ಹೋಗುವ ಮುಖ್ಯದ್ವಾರವು ಮರದಿಂದ ಮಾಡಿದ್ದು ಇದಕ್ಕೆ ಹಿತ್ತಾಳೆ ಪಟ್ಟಿಯನ್ನು ಹೊದಿಸಿದೆ. ಈ ದೇವಾಲಯದ ಕೇಂದ್ರಭಾಗವು ಗರ್ಭಗೃಹ ಹಾಗೂ ಮುಖ ಮಂಟಪವನ್ನು ಹೊಂದಿದ್ದು, ಪೂರ್ವಾಭಿಮುಖವಾಗಿದೆ.

ಗರ್ಭಗೃಹವು ಏಕತಾಳ ಶಿಖರವನ್ನು ಹೊಂದಿದ್ದು, ಅದು ಇಟ್ಟಿಗೆ ಹಾಗೂ ಗಾರೆಯಿಂದ ನಿರ್ಮಾಣವಾಗಿದೆ. ಮುಕ ಮಂಟಪವು ವೈಷ್ಣವ ದ್ವಾರಪಾಲಕರನ್ನು ಎರಡೂ ಕಡೆಗೂ ಹೊಂದಿದೆ. ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವ ಮುಖ್ಯ ಮೂರ್ತಿಯೇ ಶ್ರೀ ಯೋಗಾನರಸಿಂಹ. ಈ ಮೂರ್ತಿಯ ಕಾಲಗಳು ಅಡ್ಡಲಾಗಿ ಇಡಲ್ಪಟ್ಟು ಯೋಗಪಟ್ಟದಿಂದ ಕೂಡಿದೆ. ಈ ಮೂರ್ತಿಯು ಚತುರ್ಭಜಗಳನ್ನು ಹೊಂದಿದ್ದು, ಮೇಲಿನ ಎರಡು ಭುಜಗಳಲ್ಲಿ ಬಲಕ್ಕೆ ಚಕ್ರವನ್ನು ಎಡಕ್ಕೆ ಶಂಖವನ್ನು ಧರಿಸಿದೆ. ಮಿಕ್ಕೆರಡು ಭುಜಗಳು ಮಂಡಿಯ ಮೇಲೆ

ಇಡಲ್ಪಟ್ಟಿವೆ. ಅಲಂಕಾರ, ಶಂಖಚಕ್ರ, ಕಿರೀಟ ಇವುಗಳ ಶೈಲಿಯು ಹೊಯ್ಸಳ ಹಾಗೂ ಚೋಳ ಮಿಶ್ರ ಶಿಲ್ಪ ಶೈಲಿಯನ್ನು ಸೂಚಿಸುತ್ತದೆ. ಭಕ್ತ ಪ್ರಹ್ಲಾದನು ತಂದೆಯ ಹತ್ಯೆಗೆ ತಾನೇ ಕಾರಣನೆಂದೂ ಆ ಪಾಪಕ್ಕೆ ತಾನೇ ಹೊಣೆ ಎಂದೂ ಬೇರೆ ಬೇರೆ ಪುಣ್ಯಕ್ಷೇತ್ರಗಳನ್ನೂ ಸಂದರ್ಶಿಸುತ್ತಾ ಮೇಲುಕೋಟೆಗೆ ಬಂದನು. ಇಲ್ಲಿ ಸ್ವಾಮಿಯನ್ನು ಪ್ರತಿಷ್ಠಾಪಿಸಿ, ಇಲ್ಲಿರುವ ಬಿಲದ್ವಾರದಲ್ಲಿ ಸ್ವಲ್ಪ ಕಾಲ ತಪಸ್ಸು ಮಾಡಿದನೆಂಬ ಐತಿಹ್ಯವಿದೆ[11]. ಪ್ರಹ್ಲಾದ ಬಿಲ ಎಂದು ಕರೆಯಲ್ಪಡುವ ಈ ಬಿಲ ದ್ವಾರ ರೋಮಂಚನವಾಗಿದೆ. ಈಗಲೂ ಭಕ್ತರೂ ಅದರೊಳಗೆ ನುಸುಳಿ ಬರುತ್ತಾರೆ. ಆಲಯದ ಕೆಳಭಾಗದಲ್ಲಿ ಕಾಡುಗಲ್ಲೊಂದರಲ್ಲಿ ಕೊರೆದು ಮಹಾಗಣಪತಿಯ ಅಂದವಾದ ಆಕೃತಿ ಇದ್ದು ಮನೋಹರವಾಗಿದೆ.

5.3 ಗುಹಾಂತರ ದೇವಾಲಯ:

ಗಂಗರ ಕಾಲಕ್ಕೆ ಸೇರಿದ್ದಂತೆ ಮೇಲುಕೋಟೆಯ ನೀಳವಾದ ಒಂದು ಹೆಬ್ಬಂಡೆಯ ಮೊರಡಿಯಲ್ಲಿ ಮೇಲೆ ಹಾಗೂ ಕೆಳಗೆ ಕೊರೆದಿರುವ ಅಪೂರ್ಣವಾದ ಎರಡು ಗವಿಗಳಿವೆ. ಸಾಮ್ರಾಜ್ಯ ಬದಲಾವಣೆಯಿಂದಲೋ ಏನೋ ಕೆಲಸ ಪೂರ್ಣಗೊಳ್ಳಲಿಲ್ಲ. ಯೋಜಿಸಿದಂತೆ ಅದು ಪೂರ್ಣಗೊಂಡಿದ್ದರೆ ಅದೊಂದು ದಕ್ಷಿಣ ಕರ್ನಾಟಕದ ಗುಹಾಂತರ ದೇವಾಲಯದ ಬಾದಾಮಿಯಾಗುತ್ತಿತ್ತು. ಇಲಿ ಕೊರೆದಿರುವ ಗವಿಗಳು ಗಂಗರ ಕಾಲಕ್ಕೆ ಸೇರಿರಬಹುದೆಂಬ ಊಹೆಯಿದೆಯಷ್ಟೆ. ಆದರೆ ಗಂಗರ ಕಾಲದಲ್ಲಿ ಗವಿಗಳನ್ನು ಕೊರೆದು ದೇವಾಲಯಗಳನ್ನು ಸ್ಥಾಪಿಸಿದ್ದಕ್ಕೆ ದಾಖಲೆಗಳಿಲ್ಲ. ಇದು ಬಾದಾಮಿ ಗುಹಾಂತರ ದೇವಾಲಯದ ಪ್ರೇರಕ ಶಕ್ತಿಯಾದ ಚಾಲುಕ್ಯರ ಪ್ರಯತ್ನವಿರಬೇಕು. ಇಡೀ ದಕ್ಷಿಣ ದಿಗ್ವಿಜಯವನ್ನು ಸಾಧಿಸಿದ ಎರಡನೆಯ ಪುಲಿಕೇಶಿ ಗಂಗರನ್ನು ಕೆಲಕಾಲ ಸಾಮಂತರನ್ನಾಗಿಟ್ಟುಕೊಂಡಿದ್ದನು. ಹೀಗಾಗಿ ಚಾಲುಕ್ಯರ ಕಣ್ಣು ಬಾದಾಮಿಯಂತೆಯೇ ಮೇಲುಕೋಟೆಯಲ್ಲಿನ ನೀಳವಾದ ಬೆಟ್ಟಗಳತ್ತ ಆಕರ್ಷಿತವಾಗಿರಬೇಕು. ಮೇಲಾಗಿ ಚಾಲುಕ್ಯರು ವಿಷ್ಣುವಿನ ಉಪಾಸಕರಾಗಿದ್ದರು. ಮೇಲುಕೋಟೆ ವೈಷ್ಣವ ಸಂಪ್ರದಾಯದ ತಾಣವಾಗಿದ್ದರಿಂದ ಚಾಲುಕ್ಯರು ಇಲ್ಲಿಯೂ ಗುಹಾಂತರ ದೇವಾಲಯಗಳ ನಿರ್ಮಾಣಕ್ಕೆ ಕೈಹಾಕಿರಬೇಕು. ಕೆಲಕಾಲಕ್ಕೆ ಪುಲಿಕೇಶಿಯ ಪ್ರಭಾವ ಹಿಂದೆ ಸರಿದು ಗಂಗರು ಮತ್ತೆ ಸ್ವತಂತ್ರರಾದ ಕಾರಣ ನಡೆದ ಕೆಲಸ ಅರ್ಧಕ್ಕೆ ನಿಂತು ಹೋಗಿರಬಹುದು[12]. ಒಟ್ಟಾರೆ ಈ ಗವಿಗಳ ಕೊರೆತ ಹಾಗೂ ಕಂಬಗಳು ಬಾದಾಮಿ ಗುಹೆಯ ಮಾದರಿಯನ್ನು ಹೋಲುವುದರಿಂದ ಇದು ಚಾಲುಕ್ಯರ ಪ್ರಯತ್ನ ಎಂದು ಹೇಳುವುದರಲ್ಲಿ

ಯಾವು ಅನುಮಾನವೂ ಇಲ್ಲ.

ಕೆಳಗಿನ ಗುಹೆ ಐದು ಅಂಕಣದಿಂದ ಕೂಡಿದ್ದು ಬಂಡೆಗೆ ಸೇರಿಕೊಂಡಂತೆ 4-5 ಅಡಿ ಎತ್ತರದ ಎರಡು ಕಂಬಗಳು ಹಾಗೂ ಉಳಿಕೆ ನಾಲ್ಕು ಕಂಬಗಳಿಂದ ರಚಿತಗೊಂಡಿದೆ. ಮೇಲಿನ ಗುಹೆಯಲ್ಲಿ ಸುಮಾರು 5 ಅಡಿ ಎತ್ತರದ ನಾಲ್ಕು ಕಂಬಗಳಲ್ಲಿ ಎರಡು ಕಂಬಗಳು ಬಂಡೆಗೆ ಸೇರಿಕೊಂಡಿವೆ. ಮೂರು ಅಂಕಣದಿಂದ ಕೂಡಿದ ಈಗವಿಯ ಮಧ್ಯ ಅಂಕಣದಲ್ಲಿ ನಾರಾಯಣ ವಿಗ್ರಹವನ್ನು ಸಾಂಕೇತಿಕವಾಗಿ ಇಡಲಾಗಿದೆ. ಕೆಳಗಿನ ಗುಹೆ ಸುಮಾರು 20 ಅಡಿ ಉದ್ದವಿದ್ದರೆ, ಮೇಲಿನ ಗುಹೆ ಉದ್ದದಲ್ಲಿ ಕೊಂಚ ಚಿಕ್ಕದಾದರೂ ಅಗಲದಲ್ಲಿ ಕೆಳಗಿನ ಗುಹೆಗಿಂತ ದೊಡ್ಡದಾಗಿದೆ. ಈ ಗುಹೆಗಳು ಇರುವ ಸ್ಥಳಕ್ಕೆ ನೈನಾಕ್ಷೇತ್ರ ಎಂಬ ಹೆಸರು ವಾಡಿಕೆಯಲ್ಲಿದೆ.

ಇತರ ದೇವಾಲಯಗಳು:

ಮೇಲಿನ ಪ್ರಮುಖ ದೇವಾಲಯಗಳಲ್ಲದೆ ಮೇಲುಕೋಟೆಯಲ್ಲಿ ಇನ್ನೂ ಹಲವು ದೇವಾಲಯಗಳಿದ್ದು, ಇಲ್ಲಿಯೂ ಕೈಂಕರ್ಯಗಳು ನಡೆಯುತ್ತಿವೆ. ಇಲ್ಲಿ ಆಂಜನೇಯನ ಏಳು, ಗರುಡನ ನಾಲ್ಕು, ಕಲ್ಯಾಣಿಯ ಸುತ್ತ ಇರುವ ಪಂಚಭಾಗವತರು, ಅಮ್ಮನವರು, ಅಚ್ಯುತ ರಾಮಾನುಜ ದೇವರು, ಕರಣಿಕ ನಾರಾಯಣ, ಲಕ್ಷ್ಮೀನರಸಿಂಹ, ಮಹಾಶೇಷ, ಪೆರಿಯಾಳ್ವಾರ್, ಗೋಪಾಲಕೃಷ್ಣ, ಗಜೇಂದ್ರ, ಬಿಂದು ಮಾಧವ, ಗುಡಿಗಳ ಜೊತೆಗೆ, ವೆಂಕಟರಮಣ, ಚಿಕ್ಕಯ್ಯನ ಕೊಳದ ವೆಂಕಟರಮಣ, ಪೇಟೆಕೃಷ್ಣ, ವಿನಾಯಕ, ಬದರಿನಾರಾಯಣ ಮುಂತಾದ ದೇವಾಲಯಗಳೂ ಇವೆ.

5.4 ಕೊಳಗಳು ಮತ್ತು ಮಂಟಪಗಳು:

ದೇವಾಲಯ ಪಟ್ಟಣವಾದ ಮೇಲುಕೋಟೆಯಲ್ಲಿ, ಧರ್ಮಸೇವಾರ್ಥವಾಗಿ ಕಟ್ಟಲ್ಪಟ್ಟಿರುವ ಕೊಳ ಹಾಗೂ ಮಂಟಪಗಳು ಸಾಕಷ್ಟು ಸಂಖ್ಯೆಯಲ್ಲಿವೆ. ಧಾರ್ಮಿಕ ಮನೋಭಾವದ ದಾನಿಗಳಿಂದ ವಿವಿದೋದ್ದೇಶಗಳಿಗಾಗಿ ನಿರ್ಮಿಸಲ್ಪಟ್ಟಿರುವ ಇವು ಮೇಲುಕೋಟೆಯ ಮಹತ್ವವನ್ನು ಸೂಚಿಸುತ್ತವೆ. ಇವು ಸ್ಥಳದ ಸೌಂದರ್ಯವನ್ನು ಹೆಚ್ಚಿಸುವುದಷ್ಟೇ ಅಲ್ಲದೆ, ಜಲಾಶ್ರಯವಾಗಿಯೂ ಹಾಗೂ ಆಶ್ರಯತಾಣಗಳಾಗಿಯೂ ಉಪಯುಕ್ತವಾಗಿವೆ.

ಕೊಳಗಳು:

ಮೇಲುಕೋಟೆಯ ಸುತ್ತಮುತ್ತಲೂ ಸುಮಾರು 60 ಕೊಳಗಳಿವೆ. ಕೊಳಗಳಿಗೆ ಪೌರಾಣಿಕ ಕಥೆಗಳ ಹಿನ್ನೆಲೆಯಿದ್ದು ಇವು ತೀರ್ಥಗಳೆನಿಸಿವೆ. ಇಂಥಹವುಗಳಲ್ಲಿ ಸ್ನಾನ ಮಾಡಿದರೆ, ಪುಣ್ಯ ಪ್ರಾಪ್ತಿ ಹಾಗೂ ಪಾಪಮುಕ್ತಿಯು ಖಂಡಿತವೆಂದು ಜನಮಾನಸದಲ್ಲಿ ಬಲವಾಗಿ ಇರುವ ನಂಬಿಕೆ.

ಕೊಳದ ರಚನೆಯಲ್ಲಿ ವಿವಿಧ ರೀತಿಗಳಿದ್ದು, ಬೇರೆ-ಬೇರೆ ಹೆಸರುಗಳನ್ನು ಇವು ಹೊಂದುತ್ತವೆ. ಮುಖ್ಯವಾಗಿ ಕೊಳಕ್ಕೆ ನಿರ್ಮಿಸಿರುವ ಮೆಟ್ಟಿಲುಗಳ ರೀತಿಯನ್ನು ಆಧರಿಸಿ ಹೆಸರನ್ನು ಹೊಂದಿವೆ. ಕೊಳದ ಒಂದು ಪಾರ್ಶ್ವದಲ್ಲಿ ಮಾತ್ರ ಮೆಟ್ಟಿಲುಗಳಿದ್ದರೆ. ಇದನ್ನು 'ನಂದ' ಎಂದು, ಎರಡುಕಡೆ ಇದ್ದರೆ 'ಭದ್ರ' ಎಂದು. ಮೂರು ಕಡೆಯಿದ್ದರೆ 'ಜಯ' ಎಂದು ನಾಲ್ಕುಕಡೆ ಇದ್ದರೆ 'ವಿಜಯ' ಎಂದು ಕರೆಯಲಾಗುತ್ತದೆ. ಕೊಳಗಳು ನಾನಾ ಆಕಾರಗಳಲ್ಲಿರುವುದನ್ನು ನಾವು ಗಮನಿಸಬಹುದು. ಇವುಗಳಲ್ಲಿ ವರ್ತುಲ, ಆಯತ, ಚಚ್ಚೌಕ ಹಾಗೂ ಅಷ್ಟಮುಖ ಆಕಾರದ ಕೊಳಗಳು ಪ್ರಧಾನವಾದವು. ಮೇಲುಕೋಟೆಯಲ್ಲಿ ಚಚ್ಚೌಕ ಹಾಗೂ ಆಯತಾಕಾರದಲ್ಲಿರುವ ಕೊಳಗಳ ಸಂಖ್ಯೆ ಹೆಚ್ಚಿವೆ [13].

ರಾಮಾನುಜರು ಘೋಷಿಸಿದ ಅಷ್ಟಾಕ್ಷರೀಮಂತ್ರದ ಪ್ರತೀಕವೋ ಎಂಬಂತೆ ಮೇಲುಕೋಟೆಯಲ್ಲಿ ವೇದ ಪುಷ್ಕರಣಿ, ಧನುಷ್ಕೋಟಿ, ಯಾದವ ತೀರ್ಥ, ದರ್ಭತೀರ್ಥ, ಪಲಾಶತೀರ್ಥ, ಪದ್ಮತೀರ್ಥ, ಮೈತ್ರೇಯ ತೀರ್ಥ, ನಾರಾಯಣ ತೀರ್ಥ ಎಂಬ ಎಂಟು ಪ್ರಮುಖ ತೀರ್ಥ ಕೊಳಗಳನ್ನು ನಿರ್ಮಿಸಲಾಗಿದೆ. ಇವುಗಳಲ್ಲದೆ ಇಲ್ಲಿ ವೈಕುಂಠ ತೀರ್ಥ, ಚಕ್ರಕಟ್ಟೆ, ನರಸಿಂಹನ ಬೆಟ್ಟದ ಬುಡದಲ್ಲಿರುವ ವಿಶಾಲ ಕಲ್ಯಾಣಿ, ಬ್ರಹ್ಮಚಾರಿ ಕೊಳ, ಚೆಲುವೆ ಅರಸಿನ ಕೊಳ, ಸಂಪಿಗೆ ಕೊಳಗಳಲ್ಲದೆಯೇ 29 ಕೊಳಗಳಿವೆ. ಪಂಚಕಲ್ಯಾಣಿಯು ಸುದೀರ್ಘ ಇತಿಹಾಸ ಹೊಂದಿದ್ದು ಚಾಮರಾಜ ಒಡೆಯರಿಂದ ಕ್ರಿ.ಶ.1633ರಲ್ಲಿ ಈ ಕೊಳಕ್ಕೆ ಸೋಪಾನ ನಿರ್ಮಿಸಿದರು [14]. ಈ ಕೊಳಗಳ ಪ್ರಮುಖ ವಿಶೇಷಣವೆಂದರೆ ಕೊಳಕ್ಕೆ ಅಳವಡಿಸಿರುವ ಸೋಪಾನಗಳು. ನಿತ್ಯವೂ ನೀರಿನ ಸಂಪರ್ಕದಲ್ಲಿರುವ ಈ ಕಲ್ಲುಗಳು ನೀರಿಗೆ ಸಿಹಿಯನ್ನು, ನೀರಿನ ಶುದ್ಧೀಕರಣ ಗುಣವನ್ನು ಹಾಗೂ ಔಷಧೀಯ ಗುಣಗಳನ್ನು ನೀಡುವಲ್ಲಿ ಮಹತ್ತರ ಪಾತ್ರ ವಹಿಸಿವೆ [15].

ಮಂಟಪಗಳು:

ಕೆಲವು ಮಂಟಪಗಳು ಯಾತ್ರಾಸ್ಥಳಕ್ಕೆ ಭೇಟಿನೀಡುವ ಭಕ್ತಾದಿಗಳ ದಣಿವನ್ನು ಹೋಗಲಾಡಿಸುವ ಆಶ್ರಯತಾಣಗಳು. ಇನ್ನು ಕೆಲವು ಉತ್ಸವ ಕಾಲದಲ್ಲಿ ಉತ್ಸವ ಮೂರ್ತಿಗೂ ಇದು ವಿರಾಮ ಸ್ಥಳ. ಸಾಮಾನ್ಯವಾಗಿ ಕೊಳಗಳ ಆಜುಬಾಜಿನಲ್ಲಿಯೇ ಮಂಟಪಗಳನ್ನು ಕಾಣಬಹುದು. ಮಂಟಪಗಳು ಕೆಲವು ಉದ್ದೇಶಗಳಿದ್ದು, ಕೆಲವು ವಿಶೇಷ ಕಾರ್ಯನಡೆಸಲು ನಿರ್ಮಾಣವಾಗಿವೆ. ಉದಾ: ವಿಜಯ ಮಂಟಪವೆಂಬುದು ವಿವಾಹಕ್ಕಾಗಿ, ಪದ್ಮಮಂಟಪವು ಹೂವು ಸಂಗ್ರಹಿಸಲು, ತಲಯ ಮಂಟಪವೆಂಬುದು ಬೇಸಿಗೆ ಕಾಲದಲ್ಲಿ ಆಶ್ರಯ ಪಡೆಯಬಹುದಾದ ತಾಣವೂ ಆಗಿರುತ್ತದೆ. ಮೇಲುಕೋಟೆಯ ಸುತ್ತ ಮುತ್ತ ಸುಮಾರು 80 ಮಂಟಪಗಳಿವೆ.

ಪ್ರಮುಖಮಂಟಪಗಳು

ಭುವನೇಶ್ವರಿ ಮಂಟಪ:

ಪಂಚಕಲ್ಯಾಣಿಯ ವಾಯುವ್ಯಕ್ಕಿರುವ ಭುವನೇಶ್ವರಿ ಮಂಟಪವು ಆಧ್ಯಾತ್ಮಿಕ, ತಾಂತ್ರಿಕ ಮತ್ತು ಶಿಲ್ಪಕಲೆಯ ದೃಷ್ಟಿಯಿಂದ ಗಮನಾರ್ಹವಾಗಿದೆ. ಮೈಸೂರು ಅರಸು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಕ್ರಿ.ಶ.1817ರಲ್ಲಿ ನಿರ್ಮಾಣವಾದ ಬಗ್ಗೆ ಶಾಸನಾಧಾರವಿದೆ. ಇದು ಭುವನದ ಅಥವಾ ವಿಶ್ವದ ಅಸ್ತಿತ್ವವನ್ನು ಪುರಾಣದ ಮತ್ತು ಉಪನಿಷತ್ತಿನ ಆಧಾರದ ಮೇಲೆ ಕಟ್ಟಲ್ಪಟ್ಟಿದೆ. ಮಂಟಪವು 16 ಕಂಬಗಳಿಂದ ಕೂಡಿದ್ದು ಕಂಬಗಳಲ್ಲಿ ರಾಮಾಯಣ, ಮಹಾಭಾರತ, ದಶಾವತಾರ ಹಾಗೂ ಪೌರಾಣಿಕ ಘಟನೆಗಳ ಪ್ರಮುಖ ದೃಶ್ಯಾವಳಿ ಮತ್ತು ಅನೇಕ ಬಿಡಿಶಿಲ್ಪಗಳನ್ನು ಕೆತ್ತಲಾಗಿದೆ. ಗೋಪುರದ ಮೇಲ್ಭಾಗದ ಶಿಖರ ಹಾಗೂ ಸುತ್ತಲೂ ಕಾಣುವ ಗೂಡುಗಳು ಮತ್ತು ಅದರ ಮುಡಿಗಳು ಬಹಳ ವೈಶಿಷ್ಟ್ಯ ಪೂರ್ಣವಾಗಿವೆ. ಈ ಮಂಟಪಕ್ಕೆ ಉತ್ಸವ ಮೂರ್ತಿಯಾದ ಚೆಲುವ ನಾರಾಯಣನನ್ನು ಬಿಜಯಮಾಡಿಸುತ್ತಾರೆ.

ಗಜೇಂದ್ರ ಮಂಟಪ:

ಈ ಮಂಟಪವು ಕಲ್ಯಾಣಿಯ ಉತ್ತರಕ್ಕಿದ್ದು ಈ ಮಂಟಪದ ನೆಲವು ಹಾಸುಗಲ್ಲುಗಳಿಂದ ರಚಿತವಾಗಿದೆ. ಜಾತ್ರೆಯ ಸಂದರ್ಭದಲ್ಲಿ ಗಜೇಂದ್ರ ಮೋಕ್ಷ ಎಂಬ

ಉತ್ಸವದ ದಿನದಂದು ದೇವರನ್ನು ಬಿಜಯಮಾಡಿಸುತ್ತಾರೆ. ಈ ಉತ್ಸವವು ಈ ಮಂಟಪದಲ್ಲಿ ಕೊಂಡಾಡಲ್ಪಡುತ್ತದೆ.

ವಾಹನ ಮಂಟಪ:

ನಾರಾಯಣಸ್ವಾಮಿ ದೇವಾಲಯದ ಎದುರಿಗೆ ಒಂದು ದೊಡ್ಡ ಮಂಟಪವಿದ್ದು ಇದನ್ನು 'ವಾಹನ ಮಂಟಪ' ಎನ್ನುವರು. ಇಲ್ಲಿ ದೇವರ ವಾಹನಗಳನ್ನಿರಿಸಿದ್ದಾರೆ. ಮಂಟಪದ ಕಂಬವೊಂದರ ಮೇಲಿನ ಮೂರ್ತಿಯನ್ನು ರಾಜ ಒಡೆಯರೆಂದು ಗುರುತಿಸಲಾಗಿದೆ [16]. ಈ ಮಂಟಪವನ್ನು ಕ್ರಿ.ಶ.1614ರಲ್ಲಿ ಮೈಸೂರಿನ ಅರಸು ರಾಜಒಡೆಯರು ಕಟ್ಟಿಸಿದರು.

ಅಡಿಟಿಪ್ಪಣಿಗಳು:

1. ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ. ತೈಲೂರು ವೆಂಕಟಕೃಷ್ಣ. ಪು - 19,20

2. ಸಿರಿಯೊಡಲು. ದೇ.ಜ.ಗೌ. ಪು - 29,30

3. ಯಾದವಗಿರಿ ಜೀರ್ಣೋದ್ಧಾರ. ಶ್ರೀನಿವಾಸಯ್ಯಂಗಾರ್ಯರು. ಪು - 15

4. ಕರ್ನಾಟಕ ಗ್ಯಾಜೆಟಿಯರ್. ಮಂಡ್ಯ ಜಿಲ್ಲೆ. ಪು - 959

5. ನಾರಾಯಣಸ್ವಾಮಿ ಟೆಂಪಲ್ ಅಟ್ ಮೇಲುಕೋಟೆ. ಆರ್.ವಸಂತ್. ಪು - 61

6. ಇ.ಸಿ. ಸಂಪುಟ - 6. ಪು - 124

7. ನಾರಾಯಣಸ್ವಾಮಿ ಟೆಂಪಲ್ ಅಟ್ ಮೇಲುಕೋಟೆ. ಆರ್.ವಸಂತ್. ಪು - 62, 63

8. ಅದೇ . ಪು - 65

9. ಅದೇ . ಪು - 5

10. ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ. ಪು - 39

11. ಸಕ್ಕರೆ ಸೀಮೆ. ಕೆ.ಅನಂತರಾಮು. ಪು - 100

12. ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ. ಪು - 21,22

13. ಮೇಲುಕೋಟೆ ಥ್ರೂ ದಿ ಏಜಸ್. ಪು - 187

14. ಸುಧಾ ಮಾಸ ಪತ್ರಿಕೆ. ಮಾರ್ಚ್ 20, 2008. ಪು - 22

15. ಮೇಲುಕೋಟೆ ಥ್ರೂ ದಿ ಏಜಸ್. ಪು - 188

16. ಯದುಗಿರಿಯ ನಾಡು. ಹೆಚ್.ಎಂ. ನಾಗರಾಜು. ಪು - 98

ಅಧ್ಯಾಯ: 6

ಸಾಹಿತ್ಯ ಮತ್ತು ಶಿಕ್ಷಣ ಸಂಸ್ಕೃತಿ

ಅಧ್ಯಾಯ: 6

ಸಾಹಿತ್ಯ ಮತ್ತು ಶಿಕ್ಷಣ ಸಂಸ್ಕೃತಿ

ಸಾಹಿತ್ಯ ಮತ್ತು ಶಿಕ್ಷಣ ಎರಡೂ ಕೂಡ ಪರಸ್ಪರ ಸಾಮರಸ್ಯವಿರುವ ಅಂಶಗಳು. ಸಮಾಜ ಮತ್ತು ಸಂಸ್ಕೃತಿ ಹೇಗೆ ಒಂದಕ್ಕೊಂದು ಅನ್ಯೋನ್ಯತೆ ಪಡೆದಿವೆಯೋ ಹಾಗೆಯೇ ಸಾಹಿತ್ಯ ಪೂರ್ಣ ಪ್ರಮಾಣದಲ್ಲಿ ಪ್ರಚಾರಹೊಂದಲು, ಬೆಳೆಯಲು, ಭಾಷೆಯ ಅಂಕುಡೊಂಕುಗಳನ್ನು ಸರಿಪಡಿಸಿ ವ್ಯವಸ್ಥಿತವಾಗಿ ಬೆಳೆಯಲು ಶಿಕ್ಷಣ ಅತ್ಯಗತ್ಯ. 'ಸಂಸ್ಕೃತಿ' ಎಂಬ ಪದವು ಹೇಗೆ ಮನುಷ್ಯನನ್ನು ಪರಿಪೂರ್ಣ, ಪರಿಪಕ್ವ ಪ್ರಜೆಯನ್ನಾಗಿ ಗುರುತಿಸುವುದೋ ಹಾಗೆಯೇ ಸಾಹಿತ್ಯವು ಪರಿಪೂರ್ಣ ಬದುಕಿನ ಸಾರ, ಅನುಭವ ಹಾಗೂ ಸಮಾಜವನ್ನು ಶುದ್ಧಗೊಳಿಸಿ ರಕ್ಷಿಸುತ್ತದೆ. ಸಾಹಿತ್ಯವು ಸ್ವತಂತ್ರವಾಗಿ ತನ್ನ ಸಂಸ್ಕೃತಿಗೆ ಅನುಗುಣವಾಗಿ ಹೊರಸೂಸಲ್ಪಡುತ್ತದೆ. ರಾಮಾನುಜರ ಕಾರ್ಯಕ್ಷೇತ್ರವಾಗಿದ್ದ ಮೇಲುಕೋಟೆಯಲ್ಲಿ ವಿಶಿಷ್ಟ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆ ಅನೂಚಾನವಾಗಿ ಹರಿದು ಬಂದಿದೆ. ಸಾಹಿತ್ಯ ಮತ್ತು ಸಂಸ್ಕೃತಿ ಕ್ಷೇತ್ರಗಳಿಗೆ ಮೇಲುಕೋಟೆಯ ವಿದ್ವಾಂಸರ ಕೊಡುಗೆ ಅಪಾರವಾಗಿದೆ.

6.1 ಸಂಸ್ಕೃತ ಸಾಹಿತ್ಯ:

ಒಂದು ಜನಾಂಗದ ಸಂಸ್ಕೃತಿಯ ಸಾಧನೆ ಸ್ಪಷ್ಟವಾಗಿ ಗೋಚರವಾಗುವುದು ಅದರ ಸಾಹಿತ್ಯದಲ್ಲಿ. ಮಾನವನು ಕಂಡು ಕೊಂಡ ಸಾಧನಗಳಲ್ಲೆಲ್ಲಾ ಉಕ್ತಿಯೇ ಅತ್ಯಂತ ಪ್ರಭಾವಶಾಲಿಯಾದುದು. ಸಂಸ್ಕೃತ ಭಾಷಾ ಸಾಹಿತ್ಯ ವಿಭಾಗದಲ್ಲಿ ಹೆಸರಿಸಬಹುದಾದ ಆನಂದಾಳ್ವಾರ್, ತಿರುಮಲಾರ್ಯ, ಸಿಂಗಾರಾರ್ಯ, ಯೋಗಾನಂದಭಟ್ಟ, ಅಳಸಿಂಗಭಟ್ಟ, ಅಕ್ಕಾರಕ್ಕಣಿ ಮಹಾಭಾಷ್ಯಂ, ಅಣ್ಣಂಗರಾಚಾರ್ಯ, ಜಗ್ಗುಸಿಂಗರಾರ್ಯ, ದೇವಶಿಖಾಮಣಿ ತಿರುಮಲೈಯ್ಯಂಗಾರ್ಯ, ಅನಂತಾಚಾರ್ಯ, ಕುಪ್ಪಣ್ಣಯ್ಯಂಗಾರ್‌ಸ್ವಾಮಿ, ಆಳ್ವಾರ್‌ಸ್ವಾಮಿ, ಪು.ತಿ.ನ ಮುಂತಾದ ಅನೇಕ ವಿದ್ವಾಂಸರು ಮೇಲುಕೋಟೆಯ ಮೂಲದವರು. ಮೇಲುಕೋಟೆ ಸಂಸ್ಕೃತ ಕಾಲೇಜು ಸಂಸ್ಕೃತ ಭಾಷೆ ಮತ್ತು ಸಾಹಿತ್ಯವನ್ನು ಪ್ರಸಾರ ಮಾಡುವಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದೆ.

ತಿರುಮಲೈ ಅಯ್ಯಂಗಾರ್ಯರು (1645 - 1706)

ಇವರು ಚಿಕ್ಕದೇವರಾಜ ಒಡೆಯರ ಆಸ್ಥಾನದ ವಿದ್ವಾಂಸ ಮತ್ತು ಮಂತ್ರಿಯಾಗಿದ್ದವರು, ಸಂಸ್ಕೃತ ಹಾಗೂ ಪ್ರಾಕೃತಗಳೆರಡರಲ್ಲೂ ಪ್ರಕಾಂಡ ಪಾಂಡಿತ್ಯವನ್ನು ಹೊಂದಿದ್ದು ಸಂಸ್ಕೃತದಲ್ಲಿ ಯದುಗಿರಿ ನಾರಾಯಣಸ್ತವ, ಯದುಗಿರಿ ನಾಯಕೀಸ್ತವ, ಲಕ್ಷ್ಮೀನರಸಿಂಹಸ್ತವ, ಮಂಜುಳ ಕೇಳವಾಸ್ತವ, ರಾಜಗೋಪಾಲಸ್ತವ, ಪರವಾಸುದೇವಸ್ತವ, ಪಶ್ಚಿಮ ರಂಗರಾಜಸ್ತವ, ಏಕಾದಶಿನಿರ್ಣಯ ಮುಂತಾದ ಕೃತಿಗಳನ್ನು ರಂಜನೀಯ ಶೈಲಿಯಲ್ಲಿ ರಚಿಸಿದ್ದಾರೆ[2].

ಸಿಂಗರಾರ್ಯರು (1780)

ಇವರು ತಿರುಮಲಾರ್ಯರ ಸೋದರ ಚಿಕ್ಕದೇವರಾಜ ಒಡೆಯರ ಆಸ್ಥಾನದಲ್ಲಿ ವಿದ್ವಾಂಸರಾಗಿದ್ದವರು. 'ರಾಘವಾಭ್ಯದಯ' ಮತ್ತು 'ಗೀತರಂಗೇಶ್ವರಂ' ಎಂಬ ಕೃತಿಗಳನ್ನು ಬರೆದಿರುವಂತೆ ತೋರುತ್ತದೆ. ಇವರ ಸೋದರ ರಚಿಸಿದ ಯದುಗಿರಿ ನಾರಾಯಣಸ್ತವ ಹಾಗೂ ಶ್ರೀಶೈಲ ದಿನಚರ್ಯ ಎಂಬ ಕೃತಿಗಳಿಗೆ ಸಿಂಗರಾರ್ಯ ಟೀಕೆಯನ್ನು ಬರೆದಿದ್ದಾರೆ[3].

ಯೋಗಾನಂದಭಟ್ಟರು (1735-1810)

ಅಳಸಿಂಗಭಟ್ಟರ ತಂದೆಯಾದ ಇವರು 'ಈಶ್ವರ ಸಂಹಿತ', 'ಕಾತ್ಯಯನ ಗ್ರಹಸೂತ್ರ ಪ್ರಯೋಗ', ಮತ್ತು 'ಪರಾಶರ ಗೃಹಸೂತ್ರ'ಗಳಿಗೆ 'ಸಾತ್ವತಾಮೃತಂ' ಎಂಬ ವಿವರವುಳ್ಳ ಟೀಕಾ ಕೃತಿಯನ್ನು ಬರೆದಿದ್ದಾರೆ.

ಅಳಸಿಂಗಭಟ್ಟರು (1795-1860)

ಇವರು ಮುಮ್ಮಡಿ ಕೃಷ್ಣರಾಜ ಒಡೆಯರ ವಿಶ್ವಾಸಿಯಾಗಿದ್ದರು. ಇವರು ಮೇಲುಕೋಟೆಯ ವೈರಮುಡಿ ಉತ್ಸವದ ಸಾಂಪ್ರದಾಯಿಕ ಅಂಶಗಳನ್ನು, ರಾಮಾನುಜರ ಅವಧಿಯ ಚಾರಿತ್ರಿಕ ಘಟನೆಗಳಾಗಿ ಪರಿಗಣಿಸಬಹುದಾದ ಅಂಶಗಳನ್ನು ಒಳಗೊಂಡ ಕೃತಿಯಾದ 'ವಜ್ರ ಮುಕುಟೀ ವಿಲಾಸ ಚಂಪು'ವನ್ನು ರಚಿಸಿದ್ದಾರೆ. ರಾಮಾನುಜ ನಿಯಮನಪ್ಪಡಿ, ತಿರುವಾರಾಧನಕ್ರಮು, ಪಾಂಚರಾತ್ರ ಪ್ರಯೋಗ, ಸಂಪ್ರದಾಯ ದೀಪಿಕ ಮತ್ತು ಈಶ್ವರ ತಂತ್ರಭಾಷ್ಯಗಳ ಟೀಕೆಗಳೊಂದಿಗೆ ರಚಿಸಿದ ಸಾತ್ವತಾಮೃತಸಾರ, ಸಾತ್ವತ

ತಂತ್ರಭಾಷ್ಯ, ಯತಿರಾಜಶತಕ ಇವು ಅಳಸಿಂಗಭಟ್ಟರು ಬರೆದ ಇನ್ನಿತರ ಕೃತಿಗಳು.

ಅಣ್ಣಂಗಾಚಾರ್ಯರು (1800-1884)

ಇವರು 'ಮಹಾಭಾಷ್ಯಂ' ಅನ್ನು ಕಂಠಪಾಠಮಾಡಿ, ಅದನ್ನು ನೋಡದೆಯೇ ಅದರ ಬಗ್ಗೆ ಮಾತಾಡಬಲ್ಲವರಾಗಿದ್ದರು. 'ದಶಕೋಟಿರತ್ನ ಮಾಲಾ' ಎಂಬ ಕೃತಿಯನ್ನು ಕುಣಿಗಲ್ ರಾಮಸ್ವಾಮಿಯವರ 'ನವಕೋಟಿ' ಕೃತಿಗೆ ವಿರುದ್ಧವಾಗಿ ಬರೆದಿದ್ದು, ಮುಮ್ಮಡಿ ಕೃಷ್ಣರಾಜ ಒಡೆಯರು ಈ ಬಗ್ಗೆ ಏರ್ಪಡಿಸಿದ ವಾಗ್ವಾದದಲ್ಲೂ ಇತರ ವಿದ್ವಾಂಸರಲ್ಲಿರನ್ನು ಸೋಲಿಸಿದ್ದರೆಂದು ತಿಳಿದು ಬರುತ್ತದೆ.

ಅನಂತಾಚಾರ್ಯ (1823-1863)

ಆದಿಶೇಷನ ಕೃಪೆಯಿಂದ ಹುಟ್ಟಿದರೆಂಬ ಕಾರಣದಿಂದ ಆನಂದಾಳ್ವಾರ್ ಎಂದು ಕರೆಯಲ್ಪಟ್ಟರು. ಇವರು 'ರಸಮುರಳೀಧರ', 'ಕುವಲಯಾನದ ಮಕರಂದ', 'ಕೃಷ್ಣರಾಜ ಕುಲೋದ್ಧಾರ' ಇತ್ಯಾದಿ ಅಲಂಕಾರಿಕ ಪಠ್ಯಗಳನ್ನು ರಚಿಸಿದರು. ಧಾರವಾಡ, ಪುಣೆ, ಮುಂತಾದ ಕಡೆಗಳಲ್ಲಿ ನಡೆದ ವಾದಗೋಷ್ಠಿಗಳಲ್ಲಿ ಘನ ವಿದ್ವಾಂಸರಾಗಿದ್ದರು. ಇವರು ರಚಿಸಿದ 'ತ್ರಿದಂಡದಾರಣ ತಪ್ತ ಚಕ್ರಾಂಜನ' ಎಂಬ ವಿದ್ವನ್ ಕೃತಿಯನ್ನು ಗುರುತಿಸಿದ ಮೈಸೂರು ಮಹಾರಾಜರು ತಮ್ಮ ಷಷ್ಠಿ ಪೂರ್ತಿ ಶಾಂತಿ ಸಮಾರಂಭದಲ್ಲಿ ಇವರಿಗೆ 'ವಿದ್ವನ್ ಮಂಡಳಿ ಸಾರ್ವಭೌಮ' ಎಂಬ ಬಿರುದು ನೀಡಿ ಗೌರವಿಸಿದ್ದರು.

ಕುಪ್ಪಣ್ಣಯ್ಯಂಗಾರ್ ಸ್ವಾಮಿ (1840-1920)

ಇವರು ನ್ಯಾಯ, ವೈಶೇಷಿಕ, ಸಾಂಖ್ಯಾ, ಯೋಗ, ಮೀಮಾಂಸ ಮತ್ತು ವೇದಾಂತಗಳಲ್ಲಿ ಪಾಂಡಿತ್ಯ ಹೊಂದಿದ್ದು, ಆನಂದಾಳ್ವಾರ್ ಅವರ ಅನೇಕ ಪುಸ್ತಕಗಳಿಗೆ ಟಿಪ್ಪಣಿಗಳನ್ನೂ ಬರೆದಿದ್ದಾರೆ. ತರ್ಕ ತೀರ್ಥ ಮಹಾವಿದ್ವಾನ್ ಲಕ್ಷ್ಮೀತಾತಾಚಾರ್ಯಸ್ವಾಮಿ ಮತ್ತು ಮಹಾ ವಿದ್ವಾನ್ ಯತಿರಾಜಸ್ವಾಮಿಗಳೂ ಸೇರಿದಂತೆ ಅನೇಕ ಸಂಸ್ಕೃತ ವಿದ್ವಾಂಸರು ಕುಪ್ಪಣಯ್ಯಂಗಾರ್ಯರ ಶಿಷ್ಯರಾಗಿದ್ದರು.

ಎಂ.ಟಿ.ನರಸಿಂಹಚಾರ್ಯ (1867-1935)

ಇವರು ಸಂಸ್ಕೃತ, ಇಂಗ್ಲೀಷ್, ಕನ್ನಡ ಮತ್ತು ತಮಿಳು ಭಾಷೆಗಳನ್ನು

ಬಲ್ಲವರಾಗಿದ್ದು ಉತ್ತಮ ಕವಿತೆಗಳನ್ನು ರಚಿಸುತ್ತಿದ್ದ ಕವಿ, ಕಥಾಮಾಲ, ಗೀತಾರ್ಥಸಾರಾಮೃತ, ಜ್ಞಾನಾಮೃತ ತರಂಗಿಮಿ ಮುಂತಾದ ಕೃತಿಗಳನ್ನು ಬರೆದಿದ್ದಾರೆ.

ಎಂ.ಎಸ್.ಶ್ರೀನಿವಾಸ ಅಯ್ಯಂಗಾರ್ (1880 - 1940)

ಇವರು 'ಸಂಕಲ್ಪ ಸೂರ್ಯೋದಯ', ವೇದಾಂತ ದೇಶಿಕ' ಮತ್ತು 'ಮಹಾಕವಿ ಕ್ಷೇಮೇಂದ್ರನ ಸೇವ್ಯ ಸೇವಕೋಪದೇಶ'ಗಳನ್ನು ಕನ್ನಡಕ್ಕೆ ಅನುವಾದಿಸಿದರು.

ಜಗ್ಗು ಆಳ್ವಾರ್ ಅಯ್ಯಂಗಾರರು (1902-1994)

20ನೇ ಶತಮಾನದ ಪ್ರಮುಖ ಕವಿಗಳಲ್ಲಿ ಒಬ್ಬರು. ಪಂಡಿತರೂ, ವಿದ್ವಾಂಸರೂ ಮೆಚ್ಚುವಂತೆ ಸಂಸ್ಕೃತ ಸಾಹಿತ್ಯದಲ್ಲಿ ಅಪಾರವಾದ ಕೃಷಿ ಮಾಡಿದ್ದಾರೆ. ಇವರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪ್ರಶಸ್ತಿಗಳು ಲಭಿಸಿವೆ.

ಮೇಲಿನ ಪ್ರಮುಖರಲ್ಲದೆಯೇ ದೇವಶಿಖಾಮಣಿ ರಾಮಾನುಜಾಚಾರ್ಯ, ವೆಂಕಟನರಸಿಂಹಾಚಾರ್, ಎಂಬಾರ ನರಸಿಂಹಾಚಾರ್, ಎಂಬಾರ್ ವರದಾಚಾರ್ಯರು. ''ವಜ್ರ ಮುಕುಟೀ ವಿಲಾಸ ಚಂದ್ರ'' ವಿಷಯದಲ್ಲಿ ಡಾಕ್ಟರೇಟ್ ಪಡೆದ ಕೊಡೆ ರಾಜಗೋಪಾಲಾಚಾರ್, ಹೀಗೆ ಹಲವಾರು ಸಂಸ್ಕೃತ ಸಾಹಿತ್ಯಕ್ಕೆ ವೈಶಿಷ್ಟ್ಯ ಪೂರ್ಣ ಕೊಡುಗೆಯನ್ನು ನೀಡಿದ್ದಾರೆ.

6.2 ಕವಿಗಳು ಮತ್ತು ಲೇಖಕರು

ಪು.ತಿ.ನರಸಿಂಹಾಚಾರ್ (1905-1998)

ಆಧುನಿಕ ಕನ್ನಡ ಸಾಹಿತ್ಯದ ನಿರ್ಮಾಪಕರಲ್ಲಿ ಪು.ತಿ.ನ ಅವರೂ ಒಬ್ಬರು. ಇವರು 1905ರ ಮಾರ್ಚ್ 17ರಂದು ಚೆಲುವನಾರಾಯಣನ ವೈರಮುಡಿ ಉತ್ಸವದಂದು ಮೇಲುಕೋಟೆಯಲ್ಲಿ ಜನಿಸಿದರು. ಇವರ ಪೂರ್ಣ ಹೆಸರು ಪುರೋಹಿತ ತಿರುನಾರಾಯಣ ಅಯ್ಯಂಗಾರ್ ನರಸಿಂಹಾಚಾರ್. 300-400 ವರ್ಷಗಳ ಹಿಂದೆ ಮೇಲುಕೋಟೆಯಲ್ಲಿ ವೇದೋಕ್ತಕರ್ಮ ವಿಧಾನವನ್ನರಿತ ಯೋಗ್ಯ ಪುರೋಹಿತರಿಗೆ ಅಭಾವವಿದ್ದ ಕಾಲ. ಸ್ಥಳೀಯ ಆಸ್ತಿಕರ ಆಹ್ವಾನದ ಮೇರೆಗೆ ಇವರ ಹಿರಿಯರು ತಮಿಳು ನಾಡಿನ ತಿರುವಳ್ಳೂರಿನಿಂದ ಇಲ್ಲಿಗೆ ಬಂದರು. ಇವರು ವೈದಿಕ ಪರಂಪರೆಯಲ್ಲಿ ಬಂದ ಪುರೋಹಿತ ಭಟ್ಟವಂಶಕ್ಕೆ ಸೇರಿದವರು.

ವೇದೋಪನಿಷತ್ತು, ಧರ್ಮ ಶಾಸ್ತ್ರಗಳನ್ನೂ ಕುರಿತು ಅಧಿಕಾರಯುತವಾಗಿ ಮಾತಾಡಬಲ್ಲ ಸಾಮರ್ಥ್ಯ ಸಂಪಾದಿಸಿದ್ದರು. ಶಿಂಗ್ರಯ್ಯಂಗಾರ್ ಅವರು ಪುತಿನ ಅವರ ತಾತ. ತಿರುನಾರಾಯಣ ಅಯ್ಯಂಗಾರ್ ಮತ್ತು ಶ್ರೀರಂಗಮ್ಮ ಪುತಿನ ಅವರ ತಂದೆ- ತಾಯಿಗಳು[4].

ಮೇಲುಕೋಟೆಯಲ್ಲಿ ಹುಟ್ಟಿ ಬೆಳೆದು ಅಪಾರ ಪಾಂಡಿತ್ಯಗಳಿಸಿ ಪು.ತಿ.ನ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದರು. ಮೇಲುಕೋಟೆಯಲ್ಲಿ ಮಾಧ್ಯಮಿಕ ಶಿಕ್ಷಣ ಮುಗಿಸಿ,ವೇದ ಮತ್ತು ಸಂಸ್ಕೃತಗಳಲ್ಲಿ ಬಿ.ಎ ಮುಗಿಸಿದರು. ಇಂಗ್ಲೀಷ್‌ಮತ್ತು ಫ್ರೆಂಚ್ ಭಾಷಾ ಸಾಹಿತ್ಯಗಳ ಅಧ್ಯಯನ ಮಾಡಿದರು. ಹಿರಿಯ ಕವಿಯಾಗಿ, ಜನಾನುರಾಗಿಯಾಗಿ ಬೆಳೆಯಲು ಇವೆಲ್ಲವೂ ಸಹಕಾರಿಯಾದವು. ಇಂಗ್ಲಿಷ್ ಶ್ರೇಷ್ಠ ಕವಿ ವಿಲಿಯಂ ವರ್ಡ್ಸ್‌ವರ್ಥ್‌ಅವರಿಂದ ಪು.ತಿ.ನ ಪ್ರಭಾವಿತರಾಗಿದ್ದರು. ಪು.ತಿ.ನ ಅವರು ಮಹಾಕಾವ್ಯ, ಭಾವಗೀತೆ, ಸಂಗೀತರೂಪಕ, ಕಾವ್ಯ ಮೀಮಾಂಸೆ,ಸಣ್ಣಕಥೆ,ಗಧಾಯಕತೆ,ಗದ್ಯನಾಟಕ,ವಿಚಾರಸಾಹಿತ್ಯ ಮತ್ತು ಅನುವಾದ, ಕವಿತೆ, ಗೀತನಾಟಕ, ಹೀಗೆ ಕನ್ನಡ ಸಾಹಿತ್ಯದಲ್ಲಿ ವಿವಿಧ ಪ್ರಕಾರಗಳಲ್ಲಿ ತಮ್ಮ ವಿದ್ವತ್ತನ್ನು ಪ್ರದರ್ಶಿಸಿದ್ದಾರೆ. ಮೇಲುಕೋಟೆಯನ್ನು ಪ್ರೀತಿಸಿ, ತಮ್ಮ ಕೃತಿಯಲ್ಲಿ ಮೇಲುಕೋಟೆಯ ಪರಿಸರವನ್ನು ವಸ್ತುವನ್ನಾಗಿಸಿಕೊಂಡಿದ್ದಾರೆ.

ಇವರು ಸುಮಾರು 36 ಕೃತಿಗಳನ್ನು ರಚಿಸಿ ಕನ್ನಡ ಸಾರಸ್ವತ ಲೋಕವನ್ನು ಬೆಳಗಿಸಿದ್ದಾರೆ. ಹಣತೆ, ಮಾಂದಳಿರು, ಹೃದಯಾವಿಹಾರಿ ಮುಂತಾದ ಕವನ ಸಂಕಲನಗಳು, ರಾಮಾಚಾರಿಯ ನೆನಪು, ಈಚಲ ಮರದ ಕೆಳಗೆ, ಯದುಗಿರಿಯ ಗೆಳೆಯರು ಮುಂತಾದವು ಪು.ತಿ.ನ ಅವರ ಉತ್ಕೃಷ್ಟ ಪ್ರಬಂಧಗಳು. ರಾಜ್ಯ ಸರ್ಕಾರವು ಪುತಿನ ಟ್ರಸ್ಟ್ ಒಂದನ್ನು ರಚಿಸಿದೆ. ಇವರ ಮೇಲುಕೋಟೆಯ ಮನೆಯನ್ನು, ಮೈಸೂರಿನ ಪ್ರಾಚ್ಯ ವಸ್ತು ಇಲಾಖೆ ವಹಿಸಿಕೊಂಡು 'ಸಾಂಸ್ಕೃತಿಕ ಸ್ಮರಣೆ' ಯಾಗಿ ಸಿದ್ಧಗೊಳಿಸಿ ಸಂರಕ್ಷಿಸಿದೆ. ಪುತಿನ ಹೆಸರಿನಲ್ಲಿ ಪ್ರತಿವರ್ಷ ಕಾವ್ಯ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

ಇವರ 'ಹಂಸ ದಮಯಂತಿ ಮತ್ತು ಇತರ ರೂಪಕಗಳು' ಎಂಬ ಗ್ರಂಥಕ್ಕೆ 1965ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಮೈಸೂರು ವಿಶ್ವವಿದ್ಯಾಲಯ ಇವರಿಗೆ ಗೌರವ ಡಿ.ಲಿಟ್ ಪದವಿ ನೀಡಿದೆ. ಚಿಕ್ಕಮಗಳೂರಿನಲ್ಲಿ 1981ರಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಇವರು ಅಧ್ಯಕ್ಷರಾಗಿದ್ದರು. ಇವರ 'ಶ್ರೀಹರಿ ಚರಿತೆ' ಬೃಹತ್

ಛಂದಸ್ಸಿನ ಒಂದು ಮಹಾ ಕಾವ್ಯವಾಗಿದ್ದು ಅದಕ್ಕೆ ಕರ್ನಾಟಕ ಸರ್ಕಾರದ ಪ್ರತಿಷ್ಠಿತ ಪಂಪ ಪ್ರಶಸ್ತಿಯೂ, 1988ರಲ್ಲಿ ಕನ್ನಡ ಸಾಹಿತ್ಯ ಅಕಾಡೆಮಿಯಿಂದ ವರ್ಷದ ಶ್ರೇಷ್ಠ ಸೃಜನಶೀಲ ಕೃತಿ ಎಂದು ಪುಸ್ತಕ ಬಹುಮಾನವೂ ದೊರೆತಿದೆ. ಪುತಿನ 20ನೇ ಶತಮಾನ ಕಂಡ ಶ್ರೇಷ್ಠ ಕವಿಗಳಲ್ಲೊಬ್ಬರಾಗಿದ್ದು ಅವರು ಮೇಲುಕೋಟೆಯಲ್ಲಿ ಹುಟ್ಟಿದವರೆಂಬುದು ಹೆಮ್ಮೆಯ ವಿಷಯ. ಇವರು 14-06-98ರಂದು ತಮ್ಮ 93ನೇ ವಯಸ್ಸಿನಲ್ಲಿ ಚಿರಶಾಂತಿ ಪಡೆದರು.

ಮೇಲುಕೋಟೆಯ ಇತರ ಲೇಖಕರು:

ಅರೆಯರ್ ಶ್ರೀನಿವಾಸ ಅಯ್ಯಂಗಾರ್ ಅವರು ಮೇಲುಕೋಟೆಯವರು. ದೇವರ ಮುಂದೆ ತಮಿಳು ಹಾಡುಗಳನ್ನು ಹೇಳುವ ವಂಶಪಾರಂಪರ್ಯವಾಗಿ ಬಂದ ಕುಟುಂಬಕ್ಕೆ ಸೇರಿದವರು. ಇವರು 35ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇತ್ತೀಚೆಗೆ 'ಆಳ್ವಾರ್ ಶರಣರ ತಿರುಪತಿ ತಿಮ್ಮಪ್ಪ' ಕೃತಿ ರಚಿಸಿದ್ದಾರೆ. ಶ್ರೀಮತಿ ಮೇಲುಕೋಟೆ ರಾಜಮ್ಮ 19ನೇ ಶತಮಾನದ ಮಧ್ಯಭಾಗದಲ್ಲಿದ್ದ ಹಿರಿಯ ಲೇಖಕಿ 'ದೂರ್ವಾಸಚರಿತ್ರೆ' 'ಅನಂತ ಪದ್ಮನಾಭರಥ' ರಚಿಸಿದ್ದಾರೆ. ಶ್ರೀ ರಾಮಸ್ವಾಮಿ ಐಯ್ಯಂಗಾರ್ ಅವರು ಮೇಲುಕೋಟೆಯವರು ಇವರು 'ಆತ್ಮನಿವೇದನಂ' 'ಶ್ರೀರಾಮಾಯಣ' ಮತ್ತು 'ಮಹಾಭಾರತಗಳ' ಮುಖ್ಯ ಶ್ಲೋಕಗಳನ್ನು ಸಂಗ್ರಹ ಮಾಡಿದ್ದಾರೆ. ಸಿಂಗಾರಮ್ಮನವರು ಪಂಚಭಾಷಾ ವಿದ್ವಾಂಸರಾಗಿದ್ದು ಹಲವು ಗ್ರಂಥಗಳನ್ನು ರಚಿಸಿದ್ದಾರೆ. ಸಂತೋಷ್ ಕೌಜಲಗಿಯವರು 'ಒಂದು ಹುಲ್ಲಿನ ಕ್ರಾಂತಿ' ಎಂಬ ಅನುವಾದಿತ ಪುಸ್ತಕ ಪ್ರಕಟಿಸಿದ್ದಾರೆ. ಸ್ಥಾನಿಕಂ ಅಳಸಿಂಗ್ರಾಚಾರ್ ಇವರು 1888ರಲ್ಲಿ 'ಚಾಣಿಕ್ಯ ತಂತ್ರ ಚಮತ್ಕಾರ' ಎಂಬ ಪುಸ್ತಕ ಬರೆದು ಪ್ರಕಟಿಸಿದ್ದಾರೆ. ಹೀಗೆ ಮೇಲುಕೋಟೆಯು ಒಂದು ವಿಶಿಷ್ಟ ಸಾಹಿತ್ಯ ಸಂಸ್ಕೃತಿಗೆ ಹೆಸರಾಗಿದೆ.

ಮೇಲುಕೋಟೆ ಮತ್ತು ಭಾಗವಂತಿಕೆ:

ಮೂಲತಃ ಶ್ರೀ ವೈಷ್ಣವ ಧರ್ಮದ ಪ್ರಚಾರಕ್ಕಾಗಿ ಮೇಲುಕೋಟೆಯಿಂದ ಭಾಗವಂತಿಕೆ ಸೃಷ್ಟಿಗೊಂಡಿತೆಂದು ತಿಳಿದು ಬರುತ್ತದೆ. ಇದರಲ್ಲಿ ರಾಮಾಯಣ, ಮಹಾಭಾರತ ಮತ್ತು ಭಾಗವತ ಸಂಪ್ರದಾಯದ ಹಾಡು ಮತ್ತು ಕುಣಿತಗಳಿದ್ದು, ಶೈವ ಸಂಪ್ರದಾಯದ ಕಥೆಗಳನ್ನೂ ಹಾಡಲಾಗುತ್ತದೆ. ದೀಪಾವಳಿ ಕಾಲದಲ್ಲಿ ಊರೂರಿಗೆ ಹೋಗಿ ಹಾಡುವ ಪದ್ಧತಿಗೆ 'ಉರಾಡುವುದು' ಅಥವಾ ಭಾಗವಂತಿಕೆ ಹೋಗುವುದು ಇಲ್ಲವೇ ದೀವಳಿಗೆ ದಂಡು

ಎಂದು ಕರೆಯುತ್ತಾರೆ. ಮೇಲುಕೋಟೆಯಲ್ಲಿ ವಿರಳವಾಗಿ ಇಂದಿಗೂ ಈ ಸಂಪ್ರದಾಯ ಉಳಿದು ಬಂದಿದೆ.

ಮೇಲುಕೋಟೆ ಬೆಟ್ಟದ ಬುಡದಲ್ಲಿರುವ ಕದಲಗೆರೆ ಗ್ರಾಮದಲ್ಲಿ ಭಾಗವಂತಿಕೆ ಕಲೆ ಉಳಿದುಕೊಂಡು ಬಂದಿದ್ದು. ಇವರು ರಾಮಾಯಣ, ಮಹಾಭಾರತ, ಚೆಲುವನಾರಾಯಣ, ನರಸಿಂಹನನ್ನು ಕುರಿತು ಹಾಡುವುದರಲ್ಲಿ ಪ್ರವೀಣರಾಗಿದ್ದು, ಇವರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ 1992ರಲ್ಲಿ ಪ್ರಶಸ್ತಿ ಲಭಿಸಿದೆ [5]. ನಾಗಮಂಗಲ ತಾಲ್ಲೂಕು ಎಲೆಕೆರೆ ಗ್ರಾಮದಲ್ಲಿ ಉತ್ತಮವಾದ ಭಾಗವಂತಿಕೆ ತಂಡವಿದೆ.

ವೃತ್ತಿರಂಗ ಕಲಾವಿದರು:

ಮೇಲುಕೋಟೆಯವರಾದ ಎಂ.ಎನ್.ಪುಟ್ಟಮ್ಮ 'ಶ್ರೀ ಯದುಗಿರಿ ಚೆಲ್ವ ನಾರಾಯಣ ಥಿಯೇಟ್ರಿಕಲ್ ಕಂಪನಿ'ಯ 'ಕೃಷ್ಣಲೀಲಾ' ನಾಟಕದಲ್ಲಿ ರಾಧೆಯ ಪಾತ್ರದ ಮೂಲಕ ಬಾಲ ಕಲಾವಿದೆಯಾಗಿ ಸೇರಿ ಮಂಡ್ಯದಲ್ಲಿ 1950ರಲಿ ವೃತ್ತಿರಂಗ ಕಲಾವಿದೆಯಾಗಿ ಬೆಳೆದರು. 'ಸಂಗೀತ ಸಾಮ್ರಾಜ್ಯ ನಾಟಕ ಮಂಡಲಿ'ಯಲ್ಲಿ 'ಭಕ್ತ ಅಂಬರೀಷ'ದ ಲೀಲೂ ಆಗಿ, ಸತ್ಯ ಹರಿಶ್ಚಂದ್ರದ ಕಾಲಕಂಠನಾಗಿ ಹೆಸರು ಮಾಡಿದರು. ಜಯಲಕ್ಷ್ಮಿ ನಾಟಕ ಸಭಾ, ಲಲಿತಮ್ಮನ 'ಮಿತ್ರ ಮಂಡಲಿ', ಖ್ಯಾತ ಚಲನಚಿತ್ರ ನಟಿ ಕಲ್ಪನಾರ 'ಮಿನುಗುತಾರ ಮಂಡಲಿ' ಮುಂತಾದವುಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿ ಖ್ಯಾತಿ ಪಡೆದಿದ್ದಾರೆ. ಹೆಚ್.ರಾಮಚಂದ್ರಶಾಸ್ತ್ರಿ (1905)ಯವರು ಮೇಲುಕೋಟೆ ಬಳಿಯ ಹಳೇ ಬೀಡಿನವರು. ಕ್ರಿ.ಶ. 1920ರಲ್ಲಿ 'ಭಾರತ ಜನ ಮನೋಲ್ಲಾಸಿನಿ ನಾಟಕ ಸಭಾ' ಸೇರಿ ಅನಂತರ ವಿವಿಧ ಕಂಪನಿಗಳಲ್ಲಿ ಹಲವಾರು ನಾಟಕಗಳಲ್ಲಿ ಹಾಗೂ 205 ಚಲನಚಿತ್ರಗಳಲ್ಲಿ ನಟಿಸಿದ್ದಾರೆ [6].

ಪತ್ರಿಕೋದ್ಯಮ:

ಮಂಡ್ಯ ಜಿಲ್ಲೆಯಲ್ಲಿ ಕನ್ನಡ ಪತ್ರಿಕೋದ್ಯಮ ಆರಂಭಗೊಂಡದ್ದು ಮೇಲುಕೋಟೆಯಿಂದ. ಎ.ಜಿ.ರಾಮಾನುಜ ಅಯ್ಯಂಗಾರ್ಯರ ಸಂಪಾದಕತ್ವದಲ್ಲಿ 'ಪಾಂಡಿತ್ಯ ವರ್ಧಿನಿ ಸಭಾ'ದ ವತಿಯಿಂದ 'ಹಿಂದೂ ಮತ ಪ್ರಕಾಶಿಕಾ' ಎಂಬ ಮಾಸ ಪತ್ರಿಕೆಯು 1882 ರಿಂದ 1900ರವರೆಗೆ ಹೊರಬಂದಿತು. 1887ರಲ್ಲಿ ಸದಾನಂದ ವರ್ಧಿನಿ ಸಭಾದಿಂದ ರಾಮಸ್ವಾಮಿ ಶೆಲ್ಪಯ್ಯಂಗಾರ್ಯರ ಸಂಪಾದಕತ್ವದಲ್ಲಿ 'ಆರ್ಯ ವಿದ್ಯಾ ಸಂಜೀವಿನಿ' ಎಂಬ ಮಾಸ

ಪತ್ರಿಕೆ, ಆನಂತರ ಎ.ಎಲ್.ಪಿಳ್ಳೈಯವರು 1936 ರಿಂದ 1952ರವರೆಗೆ ನಡೆಸಿದ ಯದುಗಿರಿ ಎಂಬ ತ್ರೈಮಾಸಿಕ ಪತ್ರಿಕೆಗಳೂ ಹೊರಬಂದಿವೆ.

ಮೇಲುಕೋಟೆಯವರಾದ ಖಾದ್ರಿ ಶಾಮಣ್ಣನವರು ನಾಡಿನ ಪತ್ರಿಕಾರಂಗದ ಹಿರಿಯ ಚೇತನವಾಗಿದ್ದು, ಪ್ರಜಾವಾಣಿ, ಕನ್ನಡ ಪ್ರಭ ಮುಂತಾದ ಪತ್ರಿಕೆಗಳ ಶ್ರೇಯಸ್ಸಿಗಾಗಿ ದುಡಿದವರು. ಇವರು ಕನ್ನಡ ಪ್ರಭ ಪತ್ರಿಕೆ ಸಂಪಾದಕರಾಗಿದ್ದವರು. ಹಾಗೆಯೇ ಈ ಸಂಜೆ, ಸಂಯುಕ್ತ ಕರ್ನಾಟಕ, ಪ್ರಜಾವಾಣಿ ಮುಂತಾದ ಪತ್ರಿಕೆಗಳಲ್ಲಿ ಕೆಲಸ ನಿರ್ವಹಿಸಿದ್ದಾರೆ. ಮೇಲುಕೋಟೆಯ ಖಾದ್ರಿ ಆಚ್ಯುತನ್‌ರವರು ಆಕಾಶವಾಣಿ ಮತ್ತು ದೂರದರ್ಶನಗಳ ವಾರ್ತಾ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ[7].

ಶಿಕ್ಷಣ ಕ್ಷೇತ್ರ

'ಜ್ಞಾನ ಮಂಟಪ' ಎಂದು ಹೆಸರಾಗಿರುವ ಮೇಲುಕೋಟೆಯ ಶೈಕ್ಷಣಿಕ ಸಾಧನೆಯು ಈ ಹೆಸರನ್ನು ಸಾರ್ಥಕಪಡಿಸಿದಂತಿದೆ. ಪುರಾಣದಲ್ಲಿರುವಂತೆ ನಾರದ, ವ್ಯಾಸ, ಭೃಗು ಮತ್ತು ಶಾಂಡಿಲ್ಯರು ಇಲ್ಲಿ ಜ್ಞಾನ ಪಡೆದಿದ್ದರು. ಮೇಲುಕೋಟೆಯ ಒಂದೊಂದು ಮನೆಗಳೂ ಶಾಲೆಗಳಾಗಿದ್ದವು. ಎಲ್ಲರ ಮನೆಯ ಚಾವಡಿ, ಅಂಗಳ, ಒಳಮನೆಗಳಲ್ಲಿ ವೇದ, ದಿವ್ಯ ಪ್ರಬಂಧ, ಶಾಸ್ತ್ರಗಳ ಪಾಠಗಳು ನಿರಂತರವಾಗಿ ನಡೆಯುತ್ತಲೇ ಇದ್ದವು. ದೂರ ದೂರದ ವಿದ್ಯಾರ್ಥಿಗಳು ಇಲ್ಲಿ ಬಂದು ಅಧ್ಯಯನ ನಡೆಸುತ್ತಿದ್ದರು. ಇಂಥಹ ಕಲಿಕೆಯನ್ನು ನಿಯಂತ್ರಿಸುವ ಕೆಲಸ ದೇವಾಲಯದ್ದಾಗಿತ್ತು. ಈ ಕಲಿಕೆಯಿಂದ ದೇವಸ್ಥಾನದ ಆಗಮೋಕ್ತ ಕಾರ್ಯಗಳು ಹಾಗೂ ಪಾರಾಯಣಾದಿಗಳಲ್ಲಿ ಸುಸಂಸ್ಕೃತರಾಗುತ್ತಿದ್ದರು[8]. ದೇವಾಲಯದ ಉತ್ಸವ ಕಾಲದಲ್ಲಿ ವಿದ್ಯಾರ್ಥಿಗಳು ಪರೀಕ್ಷಿಸಲ್ಪಡುತ್ತಿದ್ದರು. ಉತ್ತೀರ್ಣರಾದವರಿಗೆ ಸೂಕ್ತ ಪುರಸ್ಕಾರಗಳನ್ನೂ ನೀಡಲಾಗುತ್ತಿತ್ತು. ರಾಮಾನುಜರು ಈ ಕ್ಷೇತ್ರವನ್ನು ಜೀರ್ಣೋದ್ಧಾರ ಮಾಡಿದ್ದನ್ನು ಮೊದಲ್ಗೊಂಡು ಇಂದು ನಾಡಿನ ಶೈಕ್ಷಣಿಕ ಕೇಂದ್ರವಾಗಿ ಮುಂದುವರೆಯುತ್ತಲೇ ಇದೆ.

ಗುರುಕುಲ ವ್ಯವಸ್ಥೆ:

ಶ್ರೀರಾಮಾನುಜಾಚಾರ್ಯರ ಆಗಮನಕ್ಕಿಂತಲೂ ಮೊದಲಿನಿಂದ ಮೇಲುಕೋಟೆ ಖ್ಯಾತ ಕಲಿಕಾ ಕೇಂದ್ರವಾಗಿದ್ದಿತೆಂದೂ, ಪ್ರಾಚೀನ ಗುರುಕುಲ ವ್ಯವಸ್ಥೆ 1848ರವರೆಗೂ ಈ

ಸ್ಥಳದಲ್ಲಿ ಪ್ರಚಲಿತದಲ್ಲಿತ್ತೆಂದೂ ತಿಳಿದು ಬರುತ್ತದೆ. ಮೈಸೂರಿನ ಮಹಾರಾಜ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಕ್ರಿ.ಶ.1848ರಲ್ಲಿ ಸಂಸ್ಕೃತ ಪಾಠಶಾಲೆ ಗುರುಕುಲ ಪದ್ಧತಿಯನ್ನು ಸಾಂಸ್ಥಿಕವಾಗಿಸಿದರು[9].

6.3 ಶ್ರೀವೇದ ವೇದಾಂತ ಬೋಧಿನಿ ಸಂಸ್ಕೃತ ಮಹಾಪಾಠಶಾಲಾ:

ಮೈಸೂರು ಅರಸರಾದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅನುಮತಿಯಂತೆ 1854ರಲ್ಲಿ ''ಅಭಿನವ ಶ್ರೀ ಕೃಷ್ಣ ಮನೋರಂಜಿನೀ'' ಎಂಬ ಹೆಸರಿನಲ್ಲಿ ಸಂಸ್ಕೃತ ಪಾಠಶಾಲೆಯನ್ನು ಆರಂಭಿಸಿದರು. ಶ್ರೀ ಅಕ್ಕಾರಸ್ಕನಿ ನರಸಿಂಹಾಚಾರ್ಯರು ಮತ್ತು ರಾಯಸ್ವಾಮಿ ಶೆಲ್ವಪಿಳ್ಳೆ ಅಯ್ಯಂಗಾರ್‌ರು ಈ ಪಾಠ ಶಾಲೆಯ ಸಂಸ್ಥಾಪಕರು. ಮುಂದೆ ಕುಪ್ಪಣ್ಣಯ್ಯಂಗಾರ್‌ರು ಈ ಪಾಠಶಾಲೆಯ ಸರ್ವತೋಮುಖವಾದ ಅಭಿವೃದ್ಧಿಯನ್ನು ಮಾಡಿ ಈ ಸಂಸ್ಥೆಯನ್ನು ಶ್ರೀ ವೇದವೇದಾಂತ ಬೋಧಿನಿ ಸಂಸ್ಕೃತ ಮಹಾಪಾಠಶಾಲಾ ಎಂಬ ಮಟ್ಟಕ್ಕೆ ಏರಿಸಿದರು [10].

ಇದು ಮೇಲುಕೋಟೆಯ ಪ್ರಾಚೀನ ಸಾಂಸ್ಕೃತಿಕ ಪರಂಪರೆಯನ್ನು ಶುದ್ಧವಾಗಿ ಉಳಿಸಿಕೊಂಡಿರುವ ಶಾಲೆಯಾಗಿದೆ. ಹಾಗೆಯೇ ದಕ್ಷಿಣ ಕರ್ನಾಟಕದಲ್ಲಿಯೇ ಅತಿ ಪ್ರಾಚೀನವಾದ ಸಂಸ್ಕೃತ ವಿದ್ಯಾಲಯವಾಗಿದೆ. ಇಲ್ಲಿ ವ್ಯಾಕರಣ, ತರ್ಕ, ಅಲಂಕಾರ, ಸಾಂಖ್ಯ, ಯೋಗ, ಆಗಮಶಾಸ್ತ್ರಗಳಲ್ಲಿ ತಲಸ್ಪರ್ಶಿಯಾದ ಅಧ್ಯಯನವು ನಡೆಯುತ್ತಾ ಬಂದಿದೆ. ಇಲ್ಲಿ ವ್ಯಾಸಂಗ ಮಾಡಿ ವಿದ್ವಾಂಸರಾದ ವಿದ್ಯಾರ್ಥಿಗಳು ಪಾಂಡಿತ್ಯದ ಕಾರಣದಿಂದ ಪಂಡಿತರತ್ನಂ, ಪಂಡಿತಾಲಂಕಾರ, ವಿದ್ಯಾಭೂಷಣ, ಮಹಾವಿದ್ವಾನ್ ಮೊದಲಾದ ಬಿರುದುಗಳನ್ನು ಪಡೆದು ಸಮಾಜದಲ್ಲಿ ವಿಶಿಷ್ಟ ಗೌರವಕ್ಕೆ ಪಾತ್ರರಾಗಿದ್ದಾರೆ.

ಈ ಮಹಾಪಾಠಶಾಲೆಯನ್ನು ಸಶಕ್ತ ಸಂಸ್ಥೆಯಾಗಿ ಬೆಳೆಸಲು ಕ್ರಿ.ಶ. 1886ನೇ ಇಸವಿಯಲ್ಲಿ ವಿ.ಎಲ್.ನರಸಿಂಹಯ್ಯಂಗಾರ್ಯರು 'ಸರಸ್ವತಿ ಭಂಡಾರ' ಎಂಬ ಪುಸ್ತಕಾಲಯವನ್ನು ಸ್ಥಾಪಿಸಿದರು. ಈ ಗ್ರಂಥಾಲಯವು ಅಂದಿನಿಂದಲೂ ಅಮೂಲ್ಯವಾದ ಮುದ್ರಿತ ಗ್ರಂಥಗಳು, ಅಮುದ್ರಿತ ಹಸ್ತಪತ್ರಿಗಳು, ಓಲೆಗರಿ ಪುಸ್ತಕಗಳು, ಕಡತಗಳು ಮುಂತಾದವುಗಳ ಸಂಗ್ರಹವನ್ನು ಹೆಚ್ಚಿಸಿಕೊಳ್ಳುತ್ತಾ ಬೆಳೆಯುತ್ತಲೇ ಇದೆ. ಇಲ್ಲಿ ಈಗ 3000 ಮುದ್ರಿತ ಪುಸ್ತಕಗಳೂ, 800ಕ್ಕೂ ಹೆಚ್ಚಿನ ತಾಳಪತ್ರಗ್ರಂಥಗಳೂ, 50ರಷ್ಟು ಹಸ್ತಲಿಖಿತ ಪುಸ್ತಕಗಳೂ ಇವೆ.

1931ನೇ ಇಸವಿಯಲ್ಲಿ 'ಗೀರ್ವಾಣ ಭಾಷಾವರ್ಧಿನಿ ಸಭಾ' ಎಂಬ ಹೆಸರಿನಲ್ಲಿ ವಿದ್ಯಾರ್ಥಿ ಸಂಘವನ್ನು ಆರಂಭಿಸಲಾಗಿದೆ. ರಾಘವಾಚಾರ್ಯರು ಈ ಚಟುವಟಿಕೆಯ ಪೋಷಕರಾಗಿದ್ದಾರೆ. ಶಾಲೆಯಲ್ಲಿ ವಿವಿಧ ಚರ್ಚಾಕೂಟಗಳೂ, ಗ್ರಂಥರಚನೆಗಳು, ನಾಟಕಾಭಿನಯುಗಳು ನಡೆಯುತ್ತಿದ್ದವು. 'ಯೋಗಿನಿ' ಎಂಬ ಹಸ್ತಲಿಖಿತ ಪತ್ರಿಕಾ ಸಂಪಾದನವೂ ಸೇರಿದಂತೆ 'ಕನ್ನಡ ಸಂಘ' ಕನ್ನಡಾಭಿವೃದ್ಧಿಕಾರ್ಯಗಳೂ, 'ಯಕ್ಷಗಾನ', ಬಯಲು ನಾಟಕಗಳು, 'ಯದುಗಿರಿ' ಎಂಬ ಕನ್ನಡ ಲಿಖಿತ ಪತ್ರಿಕಾ ಪ್ರಕಟಣೆಯಾಗಿ ಕ್ರೀಡಾರಂಗವೂ ಸಂಸ್ಕೃತ ವಿದ್ಯಾರ್ಥಿಗಳಿಂದಲೇ ಬೆಳೆದವು.

ವಿವಿಧ ಕೋಮುಗಳ ವಿದ್ಯಾಭ್ಯಾಸಾವಕಾಶದಿಂದಾಗಿ ಈಚೆಗೆ ಬೆಳೆದಿರುವ ಈ ಶಾಲೆಗಳಲ್ಲಿ ಸ್ತ್ರೀಯರೇ ಹೆಚ್ಚಾಗಿ ಸಂಸ್ಕೃತದ ಬಲವನ್ನು ಬೆಳೆಸಿ ಕಾಪಾಡಿರುವುದು ಒಂದು ವಿಶೇಷ. ಕರ್ನಾಟಕದಲ್ಲಿ ಪ್ರಥಮ ವಿದ್ವತ್ ಪರೀಕ್ಷೆಯಲ್ಲಿ ವಿದುಷಿ ಹೆಚ್.ಶಾರದಮ್ಮರವರು ಈ ಶಾಲೆಯ ವಿದ್ಯಾರ್ಥಿನಿ ಎಂಬುದು ಇಲ್ಲಿ ಉಲ್ಲೇಖನಾರ್ಹ [11]. ಮೇಲುಕೋಟೆಯ ಶ್ರೀ ಜೀಯರ್ ಸನ್ನಿಧಿ ತಿರುಮಲಾಚಾರ್ಯ ಸ್ವಾಮಿಯವರು ಕ್ರಿ.ಶ.1893ರಲ್ಲಿ ಅಮೇರಿಕಾದಲ್ಲಿ ನಡೆದ ವಿಶ್ವ ಧರ್ಮ ಸಮ್ಮೇಳನ ಸಭೆಗೆ ಸದಸ್ಯರಾಗಿದ್ದುದ್ದು ಸ್ಮರಣಾರ್ಹ.

ಹೀಗೆ ವಿಶಿಷ್ಟವಾದ ಸಂಸ್ಕೃತ ಮತ್ತು ಸಂಸ್ಕೃತಿಗೆ ನೆಲೆಯಾದ ಈ ಶಾಲೆಯನ್ನು ಅಭಿವೃದ್ಧಿಗೆ ತರುವುದರಲ್ಲಿ ಸಂಸ್ಕೃತ ಸಾಹಿತ್ಯ ಪರಿಷತ್ತು, ಸಾರ್ವಜನಿಕರು, ಸರ್ಕಾರ ಪ್ರಮುಖವಾಗಿ ಸಂಸ್ಕೃತ ತಜ್ಞರೆಲ್ಲರೂ ಭಾಜನರಾಗಿದ್ದಾರೆ.

6.4 ಸಂಸ್ಕೃತ ಸಂಶೋಧನಾ ಸಂಸ್ಥೆ

ಮೇಲುಕೋಟೆಯು ಶ್ರೀ ರಾಮಾನುಜಾಚಾರ್ಯರ ಕಾಲದಿಂದ ಸಂಸ್ಕೃತ ಶಿಕ್ಷಣದ ಉನ್ನತ ಕೇಂದ್ರವಾಗಿತ್ತು. ನಂತರದ ಹಲವಾರು ರಾಜಮನೆತನಗಳ, ವಿದ್ವಾಂಸರ, ಪಂಡಿತೋತ್ತಮರ ಆಶ್ರಯ, ಉದಾತ್ತತೆಗಳಿಂದಾಗಿ ಈ ಕೇಂದ್ರ ಏಕಪ್ರಕಾರವಾಗಿ ವೇದ, ವೇದಾಂತ, ಆಗಮಾದಿಗಳ ಅಧ್ಯಯನ ಹಾಗೂ ಅಧ್ಯಾಪನ ಕೇಂದ್ರವಾಗಿ, ವಿಶ್ವದಾದ್ಯಂತ ತನ್ನ ವಿದ್ಯಾರ್ಥಿಗಳನ್ನು ಹೊಂದಿದೆ.

ಮೇಲುಕೋಟೆಯ ಶೈಕ್ಷಣಿಕ ಮತ್ತು ಸೈದ್ಧಾಂತಿಕ ಮಹತ್ವವನ್ನರಿತು ಸರ್ಕಾರ ಉನ್ನತ ಮಟ್ಟದ ಸಮಿತಿಯ ಶಿಫಾರಸ್ಸಿನಂತೆ 1976ರಲ್ಲಿ ಇಲ್ಲಿ ಸಂಸ್ಕೃತ ಸಂಶೋಧನೆಗಾಗಿ

ಅಕಾಡೆಮಿಯೊಂದನ್ನು ಸ್ಥಾಪಿಸಿದೆ. ಪ್ರಾಚೀನ ಗುರುಕುಲ ಮಾದರಿಯ ಪರಿಸರ ಹೊಂದಿರುವ ಈ ಸ್ಥಳದಲ್ಲಿ ಸಂಸ್ಕೃತ ಭಾಷೆ, ಸಾಹಿತ್ಯ ಹಾಗೂ ತತ್ಸಂಬಂಧಿತ ಎಲ್ಲಾ ವಿಷಯಗಳಲ್ಲಿಯೂ ಸಂಶೋಧನೆ ನಡೆಯುತ್ತಿದೆ. ಇಲ್ಲಿ ವಿಜ್ಞಾನ ಹಾಗೂ ಶಾಸ್ತ್ರಗಳ ತುಲನಾತ್ಮಕ ಅಧ್ಯಯನ ನಡೆಯುತ್ತದೆ. ಅಕಾಡೆಮಿಯು ಸಂಶೋಧನೆ, ಪ್ರಕಟಣೆ, ಶೈಕ್ಷಣಿಕ ಕಾರ್ಯಕ್ರಮ, ಉತ್ತಮ ಗ್ರಂಥಾಲಯ ನಿರ್ವಹಣೆ, ಸಂಶೋಧನೆಗೆ ಪೂರಕವಾದ ಅಪರೂಪದ ಪ್ರಾಚೀನ ವಸ್ತು ಸಂಗ್ರಹಾಲಯದ ನಿರ್ವಹಣೆಯೇ ಅಲ್ಲದೆ, ಅಪರೂಪದ ಸಸ್ಯಗಳ ಒಂದು ಸುಂದರ ಉದ್ಯಾನವನ್ನೂ ಹೊಂದಿದೆ. ಇಲ್ಲಿ ಸಂಶೋಧನೆ ಮಾಡಲು ಆಗಮಿಸುವ ದೇಶೀಯ ಮತ್ತು ವಿದೇಶೀಯ ಸಂಶೋಧಕರಿಗಾಗಿ ಎಲ್ಲಾ ಅನುಕೂಲಗಳನ್ನೂ ಹೊಂದಿರುವ ವಸತಿ ನಿಲಯಗಳೂ ಇವೆ.

ಪ್ರಸ್ತುತ 'ಸಂಸ್ಕೃತ ಸಂಶೋದನಾ ಸಂಸತ್' ಎಂಬ ನಾಮಾಂಕಿತ ಹೊಂದಿರುವ ಈ ಸ್ವಾಯತ್ತ ಸಂಸ್ಥೆ ಆಡಳಿತ ಮಂಡಳಿಯ ಮಾರ್ಗದರ್ಶನದಲ್ಲಿ ನಡೆಯುತ್ತಿದೆ. ಭಾರತ ಸರ್ಕಾರ ಈ ಸಂಸ್ಥೆಯನ್ನು ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಸಂಸ್ಥೆ ಎಂದು ಪರಿಗಣಿಸಿದೆ. ಸ್ವಾಭಾವಿಕ ಭಾಷಾ ಸಂಸ್ಕರಣ (ಎನ್.ಎಲ್.ಪಿ) ಕ್ಷೇತ್ರದಲ್ಲಿ ಗಣಕ ಯಂತ್ರದ ಮೂಲಕ ಸಂಶೋಧನೆ ನಡೆಸಿ ಸುಮಾರು 20 ತಂತ್ರಾಂಶಗಳನ್ನು ಸಂಸ್ಥೆ ಸಿದ್ಧಪಡಿಸಿದೆ. ಸಂಸ್ಕೃತ ಭಾಷಾಸಕ್ತರಿಗೆ 'ಸಂಸ್ಕೃತ ವಿನೋದ' ಹಾಗೂ ಉನ್ನತ ಕಲಿಕೆಗೆ 'ಅಮರಕೋಶ ಆಧ್ಯಾಪಿಕಾ' ತಂತ್ರಾಂಶಗಳನ್ನು ಸಿದ್ಧಪಡಿಸಿದೆ. ಸಂಶೋಧನಾಸಕ್ತರಾದ ಹಲವಾರು ವಿದ್ವಾಂಸರು ಇಲ್ಲಿ ಪ್ರಮುಖವಾದ ಯೋಜನೆಗಳನ್ನು ಹಮ್ಮಿಕೊಂಡು ಕಾರ್ಯೋನ್ಮುಖರಾಗಿದ್ದಾರೆ. ವಿಶಿಷ್ಟಾದ್ವೈತಕ್ಕೆ ಸಂಬಂಧಿಸಿದ 11 ರಿಂದ 18ನೇ ಶತಮಾನದ ಅವಧಿಯ ಸುಮಾರು 200 ಗ್ರಂಥಗಳ ಪುನರ್ವಿಮರ್ಶೆ, ರಾಮಾನುಜ ಗ್ರಂಥಮಾಲೆಯ ಹಾಗೂ 14 ಪ್ರಮುಖ ಉಪನಿಷತ್ತುಗಳ ವಿಮರ್ಶಾತ್ಮಕ ಆವೃತ್ತಿಗಳ ಪ್ರಕಟಣೆ, ದ್ವೈತಾದ್ವೈತಗಳ ಗ್ರಂಥಸೂಚಿಗಳ ಪ್ರಕಟಣೆ, ತಿರುವಾಯ್‌ಮೊಳಿ ಮತ್ತು ಈಡುಗಳ ಕನ್ನಡ ಅವತರಣಿಕೆ ಇವೇ ಮುಂತಾದ ರಚನಾತ್ಮಕ ಕಾರ್ಯಕ್ರಮವನ್ನು ಅಕಾಡೆಮಿ ಹಮ್ಮಿಕೊಂಡಿದೆ. 10.000 ಓಲೆಗರಿಗಳ ಸಂಗ್ರಹ ಸೇರಿದಂತೆ 23.000 ಸಾವಿರಕ್ಕೂ ಹೆಚ್ಚು ಗ್ರಂಥಗಳ ಗ್ರಂಥಾಲಯವನ್ನು ಈ ಸಂಸ್ಥೆ ನಿರ್ವಹಿಸುತ್ತಿದೆ.

ತನ್ನೆಲ್ಲಾ ಕಾರ್ಯಕ್ರಮಗಳನ್ನು ಆಧುನೀಕರಿಸುವ ದೃಷ್ಟಿಯಿಂದ ಸಂಸ್ಥೆ ಬೋಧ,

ಶ್ರೇಯುಶಿ, ಪ್ರಾಜ, ಚೇತನ, ಪಾಣಿನಿ ಹಾಗೂ ಜನನಿ ಮುಂತಾದ ಸಾಫ್ಟ್‌ವೇರ್‌ಗಳನ್ನು ಸೃಷ್ಟಿಸಿಕೊಂಡು, ಸಂಶೋಧನಾ ಕಾರ್ಯವನ್ನು ಚುರುಕುಗೊಳಿಸಿದೆ, ಹಾಗೂ ಡಿ.ಟಿ.ಪಿ ಹಾಗೂ ರೋಟಾ ಆಫ್‌ಸೆಟ್ ಮುದ್ರಣ ಘಟಕಗಳನ್ನು ಹೊಂದಿ, ಪ್ರಕಟಣಾ ಕ್ಷೇತ್ರದಲ್ಲಿ ಸ್ವಾವಲಂಬಿಯಾಗಿದೆ. ಅಕಾಡೆಮಿಯ ಚಟುವಟಿಕೆಗಳು ಇಂಗ್ಲೀಷ್, ಕನ್ನಡ ಮತ್ತು ಸಂಸ್ಕೃತಗಳಲ್ಲಿ ಪ್ರಕಟವಾಗುವ ತ್ರೈಮಾಸಿಕವಾದ 'ನ್ಯೂಸ್‌ಲೆಟರ್' ಮೂಲಕ ಸುಮಾರು 6000 ಜನರನ್ನು ತಲುಪುತ್ತಿದೆ. ''ತತ್ವದೀಪ''ವೆಂಬ ಅರ್ಧವಾರ್ಷಿಕ ಸಂಚಿಕೆಯನ್ನೂ ಅಕಾಡೆಮಿ ಹೊರತರುತ್ತಿದೆ.

6.5 ಕ್ರೀಡಾರಂಗಕ್ಕೆ ಮೇಲುಕೋಟೆ ಕೊಡುಗೆ:-

ಮೇಲುಕೋಟೆಯ ನಿವಾಸಿಗಳು ಸ್ವಾಭಾವಿಕವಾಗಿ ಹಾಗೂ ನೈಸರ್ಗಿಕವಾಗಿ ಕಷ್ಟ ಜೀವಿಗಳಾಗಿದ್ದರು. ಪ್ರತೀ ದಿನ ತಮ್ಮ ಊರಿನಿಂದ ಬೆಟ್ಟವಿಳಿದು ಬೆಟ್ಟದ ಬುಡದಲ್ಲಿನ ಕೆರೆಯಲ್ಲಿ ಈಜಾಡಿ, ಪುನಃ ಬೆಟ್ಟಹತ್ತಿ ತಮ್ಮ ದೈನಂದಿನ ಚಟುವಟಿಕೆಯಲ್ಲಿ ತೊಡಗಬೇಕಾದುದುರಿಂದ ಈ ದೈಹಿಕ ಕಾಯಕ ಅನಿವಾರ್ಯವಾಗಿತ್ತು. 20ನೇ ಶತಮಾನದ ಆದಿಯಲ್ಲಿ ನೌಕರಿಯನ್ನರಸಿ ಇಲ್ಲಿಂದ ಬೆಂಗಳೂರು, ಮೈಸೂರು ಹಾಗೂ ಮದರಾಸುಗಳಿಗೆ ವಲಸೆ ಹೋದ ಈ ಮಂದಿ ದೈಹಿಕ ಚಟುವಟಿಕೆಗೆ ಟೆನ್ನಿಸ್, ವಾಲಿಬಾಲ್, ಬಾಸ್ಕೆಟ್‌ಬಾಲ್, ಹಾಕಿ ಮುಂತಾದ ಕ್ರೀಡೆಗಳನ್ನು ಆಯ್ಕೆ ಮಾಡಿಕೊಂಡು ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿ ಖ್ಯಾತರಾಗಿದ್ದಾರೆ.

1. ಎಸ್.ಎ.ಶ್ರೀನಿವಾಸನ್ ಅವರು ರಾಜ್ಯ ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷರಾಗಿದ್ದು, ಅವರ ಸ್ಮರಣಾರ್ಥ ಇಂದಿಗೂ ಸ್ಪರ್ಧೆ ನಡೆಯುತ್ತದೆ.

2. ಡಿ.ಎಸ್.ಮೂರ್ತಿ ಭಾರತೀಯ ಹಾಕಿ ತಂಡದ ಮ್ಯಾನೇಜರ್ ಆಗಿ ಸೇವೆ ಸಲ್ಲಿಸಿರುತ್ತಾರೆ. ಪ್ರಸ್ತುತ ಅವರು ಕರ್ನಾಟಕ ಹಾಕಿ ಸಂಸ್ಥೆಯ ಅಧ್ಯಕ್ಷರೂ, ಭಾರತೀಯ ಹಾಕಿ ಒಕ್ಕೂಟದ ಹಾಗೂ ಒಲಂಪಿಕ್ ಸಂಸ್ಥೆ ಉಪಾಧ್ಯಕ್ಷರೂ ಆಗಿರುತ್ತಾರೆ.

3. ಎಂ.ಎ.ಸೀತಾ, ಎಂ.ಎ. ಶಕುಂತಲಾ ಹಾಗೂ ಎಂ.ಎ. ತಂಗಾ ಇವರು ಬಾಸ್ಕೆಟ್ ಬಾಲ್ ಸ್ಪರ್ಧೆಯಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದರು.

4. ಎಂ.ಕೆ.ಶ್ರೀರಂಗಮ್ಮ ಅವರು 1960ರ ದಶಕದವರೆಗೆ ಬಾಸ್ಕೆಟ್ ಬಾಲ್ ಆಟದಲ್ಲಿ

[illegible]

[illegible]

[illegible]

[illegible]

[illegible]

[illegible]

ಮೈಸೂರು ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿದರು.

5. ವಿಶ್ವದ ಹಲವೆಡೆ ಖ್ಯಾತರಾಗಿರುವ ಐ.ಎ.ಕಾರ್ ಅವರು ಭಾರತದ ಕ್ರೀಡಾ ಜಗತ್ತಿನಲ್ಲಿ ಪ್ರತ್ಯೇಕ ಸ್ಥಾನಗಳಿಸಿದ್ದಾರೆ. ಕ್ರೀಡಾ ವೈದ್ಯಕೀಯದಲ್ಲಿ ಹಾಗೂ ಅಂಗವಿಕಲ ಮಕ್ಕಳಿಗೆ ಮನೋರಂಜನೆ ನೀಡುವಲ್ಲಿ ಪ್ರಾವೀಣ್ಯತೆ ಪಡೆದಿರುತ್ತಾರೆ.

6. ಎಂ.ಎ.ಶ್ರೀನಿವಾಸನ್ 1960ರ ದಶಕದಲ್ಲಿ ಉತ್ತಮ ವಾಲಿಬಾಲ್ ಪಟುವಾಗಿದ್ದು ಮೈಸೂರು ವಿಶ್ವವಿದ್ಯಾಲಯವನ್ನೂ ಪ್ರತಿನಿಧಿಸಿದ್ದರು.

7. ಹಾಕಿ ಆಟದ ಖ್ಯಾತ ಆಟಗಾರ ಎಂ.ಎ.ಚೆಲ್ಲು 1950ನೇ ದಶಕದಲ್ಲಿ ರಾಜ್ಯವನ್ನು ಪ್ರತಿನಿಧಿಸಿದ್ದರು.

8. ರಾಷ್ಟ್ರಮಟ್ಟದಲ್ಲಿ ಖ್ಯಾತಿ ಹೊಂದಿದ ಬಾಸ್ಕೆಟ್‌ಬಾಲ್ ಪಟು ಎಸ್.ನರಸಿಂಹರಾಜನ್ ಮೈಸೂರು ವಿಶ್ವವಿದ್ಯಾಲಯದ ಹಾಗೂ ರಾಜ್ಯಗಳನ್ನು ರಾಷ್ಟ್ರಮಟ್ಟದಲ್ಲಿ ಪ್ರತಿನಿಧಿಸಿದ್ದರು.

9. ಎಂ.ಎ.ಕೃಷ್ಣಸ್ವಾಮಿಯವರು ರಾಜ್ಯದ ಖ್ಯಾತ ಟೇಬಲ್ ಟೆನ್ನಿಸ್ ಪಟು. 1980ರ ದಶಕದವರೆಗೆ ಇವರು ಮೈಸೂರು ರಾಜ್ಯ ಹಾಗೂ ವಿಶ್ವವಿದ್ಯಾಲಯಗಳನ್ನು ಸತತವಾಗಿ ಪ್ರತಿನಿಧಿಸಿದ್ದರು.

1997ರಲ್ಲಿ ನಡೆದ ನ್ಯಾಷನಲ್ ಗೇಮ್ಸ್‌ನಲ್ಲಿ ಕಿವುಡರ ವಿಭಾಗದಲ್ಲಿ ರಾಷ್ಟ್ರೀಯ ಚಾಂಪಿಯನ್ ಷಿಪ್ ಪಡೆದ ರಜನಿ, ಇದೇ ವರ್ಷ ಕೋಪನ್ ಹೆಗನ್‌ನಲ್ಲಿ ನಡೆದ 18ನೇ ವಿಶ್ವ ಆಟೋಟ ಸ್ಪರ್ಧೆಯಲ್ಲಿ ಕಿವುಡರ ವಿಭಾಗದಲ್ಲಿ ಭಾರತವನ್ನು ಪ್ರತಿನಿಧಿಸಿ, ಚಿನ್ನದ ಪದಕಗಳಿಸಿದರು. ಇವರು ರಾಷ್ಟ್ರೀಯ ಛಾಂಪಿಯನ್ ಆದ ಪ್ರಥಮ ಮಹಿಳೆ [12].

ಅಡಿಟಿಪ್ಪಣಿಗಳು:

1. ಹೊಯ್ಸಳ ಸಂಪದ, ಮಳಲಿ ವಸಂತಕುಮಾರ್. ಪು - 989

2. ಕರ್ನಾಟಕ ರಾಜ್ಯ ಗ್ಯಾಜೆಟಿಯರ್. ಮಂಡ್ಯ ಜಿಲ್ಲೆ. ಪು - 700

3. ಮೇಲುಕೋಟೆ ಥ್ರೂ ದಿ ಏಜಸ್. ಸಂಸ್ಕೃತ ಸಂಶೋಧನಾ ಸಂಸ್ಥೆ. ಪು - 311

4. ಪು.ತಿ.ನ ಅಭಿನಂದನಾ ಗ್ರಂಥ. ದೇ.ಜ.ಗೌ. ಪು - 36

5. ಕರ್ನಾಟಕ ರಾಜ್ಯ ಗ್ಯಾಜೆಟಿಯರ್. ಮಂಡ್ಯ ಜಿಲ್ಲೆ. ಪು - 741

6. ಮೇಲುಕೋಟೆ ಥ್ರೂ ದಿ ಏಜಸ್. ಪು - 308

7. ಅದೇ. ಪು - 341, 342, 343

8. ತಾಳ ಪತ್ರ ಗ್ರಂಥಗಳ ಕೈಪಿಡಿ ಹಾಗೂ ದಾಖಲೆಗಳ ಮಾಹಿತಿ. ಪು - 6

9. ಕರ್ನಾಟಕ ರಾಜ್ಯ ಗ್ಯಾಜೆಟಿಯರ್. ಮಂಡ್ಯ ಜಿಲ್ಲೆ. ಪು - 652

10. ಸಂಸ್ಕೃತ ಪಾಠಶಾಲೆಯ ದಾಖಲೆ.

11. ಯಾದವಗಿರಿ ಜೀರ್ಣೋದ್ಧಾರ. ಪು - 56

12. ಕರ್ನಾಟಕ ರಾಜ್ಯ ಗ್ಯಾಜೆಟಿಯರ್. ಮಂಡ್ಯ ಜಿಲ್ಲೆ. ಪು - 689,690

ಅಧ್ಯಾಯ: 7

ಧಾರ್ಮಿಕ ವೈಶಿಷ್ಟ್ಯಗಳು ಮತ್ತು ಸಾಮಾಜಿಕ ಜೀವನ

ಅಧ್ಯಾಯ: 7

ಧಾರ್ಮಿಕ ವೈಶಿಷ್ಟ್ಯಗಳು ಮತ್ತು ಸಾಮಾಜಿಕ ಜೀವನ

ಧರ್ಮಾವಲಂಬಿಯಾದ ಸತ್ಕ್ರಿಯೆಗಳು ಧಾರ್ಮಿಕ ಆಚರಣೆಗಳಾಗುತ್ತವೆ. ಆಯಾ ಪ್ರದೇಶಗಳಿಗೆ, ನಂಬಿಕೆಗಳಿಗೆ, ಸಿದ್ಧಾಂತಗಳಿಗೆ ಅನುಗುಣವಾಗಿ ಆಚರಣೆಗಳಲ್ಲಿ ವೈಶಿಷ್ಟ್ಯತೆಗಳನ್ನು ಗುರುತಿಸಬಹುದು. ಎಲ್ಲಾ ಧಾರ್ಮಿಕ ಆಚರಣೆಗಳ ಹಿಂದೆ ಶ್ರದ್ಧಾ ಭಕ್ತಿಗಳ ಅನುಸಂಧಾನದ ಮೂಲಕ ಸಮಾಜವನ್ನು ಸನ್ಮಾರ್ಗದತ್ತ ಕೊಂಡೊಯ್ಯುವ ಅಂಶ ನಿಚ್ಚಳವಾಗಿರುತ್ತದೆ. ಜೀವನಾನುಭವ ದಟ್ಟವಾದಂತೆಲ್ಲಾ ಶ್ರದ್ಧೆ ಹೆಚ್ಚಾದಾಗ ದೈವ - ಧರ್ಮಗಳ ಬಗ್ಗೆ ಅಚಲ ನಂಬಿಕೆ. ನಂಬಿಕೆಯ ಬೆನ್ನಲ್ಲೇ ಆಚಾರ ವಿಚಾರಗಳು ರೂಡಿಗತವಾಗುವುದು ಸಹಜ. ಒಳ್ಳೆಯ ಕೆಲಸ, ಒಳ್ಳೆಯಮಾತು, ಒಳ್ಳೆಯ ನಡತೆಗಳನ್ನು ನಿರಂತರ ರೂಡಿಸಿಕೊಳ್ಳುವುದೇ ಧಾರ್ಮಿಕ ಪ್ರೌರುತ್ತಿ. ಈ ಪ್ರೌರುತ್ತಿಯನ್ನು ಜಾಗೃತಗೊಳಿಸುವುದೇ ಧರ್ಮಾಚರಣೆಗಳ ಉದ್ದೇಶವಾಗಿರುತ್ತದೆ[1].

ವೈಷ್ಣವ ಧರ್ಮದ ಆಶ್ರಯ ತಾಣವಾಗಿರುವ ಮೇಲುಕೋಟೆಯು ವಿಶಿಷ್ಟ ಆಚರಣೆಗಳಿಗೆ ಹೆಸರಾಗಿದೆ. ವರ್ಷದ 12 ತಿಂಗಳಲ್ಲಿ ಅನೇಕ ಧಾರ್ಮಿಕ ಉತ್ಸವಗಳು ನಡೆಯುತ್ತವೆ. ಮೇಲುಕೋಟೆಯ ಉತ್ಸವಗಳದೇ ಒಂದು ವೈಭವ. ಮೇಲುಕೋಟೆ ಸಂಸ್ಕೃತಿಯ ಜೀವಂತಿಕೆಯ ನಿದರ್ಶನಗಳು ಉತ್ಸವಗಳು, ಹಬ್ಬಹರಿದಿನಗಳು. ಮೇಲುಕೋಟೆಯಲ್ಲಿ ಸುಮಾರು 32 ವಿಶೇಷೋತ್ಸವಗಳು ನಡೆಯುತ್ತವೆ.

7.1 ಮೇಲುಕೋಟೆ ಉತ್ಸವಗಳು:

ವೈರಮುಡಿ ಬ್ರಹ್ಮೋತ್ಸವ:

ರಾಮಾನುಜರು ಭಾವೈಕ್ಯತೆಯ ಸಂಕೇತವಾಗಿ ಮೇಲುಕೋಟೆಯಲ್ಲಿ ವೈರಮುಡಿ ಉತ್ಸವವನ್ನು ನಡೆಸುವ ಏರ್ಪಾಟು ಮಾಡಿದರು. ಉತ್ಸವದ ಹಿಂದಿನ ಒಂಭತ್ತು ದಿನಗಳ ಕಾಲ ವಿವಿಧ ಜಾತಿ ಪಂಗಡದ ಜನ ಒಟ್ಟಾಗಿ ಸೇರಿ ವೈವಿಧ್ಯಮಯವಾಗಿ ಆಚರಿಸುವ ಹಬ್ಬ ಅಥವಾ ಉತ್ಸವ ಇದಾಗಿದೆ.

ವೈರಮುಡಿ ಅಂದರೆ ಬಿಳಿಹರಳಿನ ಕಿರೀಟ. ಪ್ರಾಣದೇವರಾದ ಚೆಲುವನಾರಾಯಣನ

ಉತ್ಸವ ಮೂರ್ತಿಯಾದ ರಾಮಪ್ರಿಯನಿಗೆ ವೈರಮುಡಿ ಧರಿಸಿ ಉತ್ಸವಗೊಳಿಸುವುದೇ ವೈರಮುಡಿ ಉತ್ಸವ. ಅಲಂಕೃತ ಪಲ್ಲಕ್ಕಿಯಲ್ಲಿ ಗರುಡವಾಹನದ ಮೇಲೆ ಮೂರ್ತಿಯನ್ನು ಆಸೀನಗೊಳಿಸಿ, ಎಡಬಲಗಳಲ್ಲಿ ಆತ ಪತ್ನಿಯರಾದ ಶ್ರೀದೇವಿ, ಭೂದೇವಿ ಮೂರ್ತಿಗಳನ್ನು ಇರಿಸಿ ವಿಜೃಂಭಣೆಯಿಂದ ಉತ್ಸವ ಅಥವಾ ಮೆರವಣಿಗೆ ಜರುಗುತ್ತದೆ. ಈ ಉತ್ಸವವು ಫಾಲ್ಗುಣ ಮಾಸದಲ್ಲಿ ನಡೆಯುತ್ತದೆ. ಇದು 10 ದಿನಗಳ ಕಾಲ ವಿಜೃಂಭಣೆಯಿಂದ ನಡೆಯುತ್ತದೆ. ಯಾವ ಆಡಂಬರವೂ, ಅಲಂಕಾರವೂ ಇಲ್ಲದೆ ಪ್ರಕೃತಿಯ ಮಡಿಲಲ್ಲಿ ಕಲ್ಯಾಣಿಯ ತೀರದ ಮಂಟಪದಲ್ಲಿ ನಡೆಯುವ ಶ್ರೀ ಚೆಲುವರಾಯನ ಮತ್ತು ಚೆಲುವನಾಯಕಿಯ ಮದುವೆ ಬಹಳ ಸುಂದರವಾಗಿ ನಡೆಯುತ್ತದೆ. ಈ ಸಂದರ್ಭದಲ್ಲಿ ತೆಪ್ಪೋತ್ಸವ, ರಥೋತ್ಸವ, ಗಜೇಂದ್ರ ಮೋಕ್ಷಗಳು ನಡೆಯುತ್ತವೆ. ರಥೋತ್ಸವದಲ್ಲಿ ಅಸಂಖ್ಯಾತ ಜನ ಭಕ್ತಾದಿಗಳು ತಮ್ಮ ಕೈಗಳನ್ನು ಕೂಡಿಸಿ ಭಕ್ತಿಯಿಂದ ಭಾಗವಹಿಸುತ್ತಾರೆ[2].

ಕೃಷ್ಣರಾಜಮುಡಿ ಉತ್ಸವ:

ಮೈಸೂರಿನ ಅರಸರು ಮೇಲುಕೋಟೆಯ ಅನನ್ಯ ಭಕ್ತರು. ಇವರು ವಂಶಪಾರಂಪರ್ಯವಾಗಿ, ತಿರುನಾರಾಯಣನ ಸೇವೆಯನ್ನು ಮಾಡುತ್ತಿದ್ದರು. ಇವರು ವೈರಮುಡಿಯನ್ನೇ ಹೋಲುವ ಒಂದು ಮುಡಿಯನ್ನು, ಆಭರಣಗಳನ್ನು ಚಲುವರಾಯನಿಗೆ ಅರ್ಪಿಸಿದ್ದಾರೆ. ಆದ್ದರಿಂದ ಈ ಮುಡಿಗೆ ಕೃಷ್ಣರಾಜಮುಡಿ ಎನ್ನುವರು. ಇದನ್ನು ಆಷಾಢ ಮಾಸದಲ್ಲಿ ಚೆಲುವರಾಯನಿಗೆ ಧರಿಸುತ್ತಾರೆ. ಇದನ್ನು ಕೃಷ್ಣರಾಜಮುಡಿ ಜಾತ್ರೆ ಎಂದೇ ಹೇಳುತ್ತಾರೆ.

ರಥಸಪ್ತಮಿ:

ಇದು ಮಾಘ ಶುದ್ಧ ಸಪ್ತಮಿಯ ದಿವಸ ಜರುಗುವುದು. ಸೂರ್ಯನು ಮಕರ ಸಂಕ್ರಾತಿಯ ನಂತರ ತನ್ನ ಪಥವನ್ನು ತಿರುಗಿಸುವ ದಿನ. ಇದು ಜಾನಪದ ಬದುಕಿನ ಬೆಸುಗೆಯೊಡನೆ ಸುಂದರವಾಗಿ ನಡೆಯುತ್ತದೆ. ಉತ್ಸವದ ಮುಂದೆ ನಂದಿಕೋಲಿನ ಕುಣಿತ, ಕೋಲಾಟದ ಕುಣಿತ, ಮಕ್ಕಳ ನೃತ್ಯಗಳು ಇವುಗಳ ಪ್ರದರ್ಶನ ಅಮೋಘವಾಗಿರುತ್ತದೆ. ಸೂರ್ಯ ಮಂಡಲ ಮಧ್ಯದಲ್ಲಿ ದೇದೀಪ್ಯಮಾನನಾಗಿ ದರ್ಶನವನ್ನು ಕೊಡುವ ಶ್ರೀ ಮನ್ನಾರಾಯಣನನ್ನು ಸೇವಿಸಲು ಬರುತ್ತಾರೆ.

ಪುನರ್ವಸು ಉತ್ಸವ:

ಶ್ರೀ ರಾಮಾನುಜರು ಮೇಲುಕೋಟೆಗೆ ಬಂದು ತಿರುನಾರಾಯಣನ ಹುತ್ತವನ್ನು ಕರಗಿಸಿದಂತಹ ಪವಿತ್ರ ದಿನ. ರಾಮಾನುಜರು ಸನ್ಯಾಸಿಯಾದ್ದರಿಂದ ಯಾವಾಗಲೂ ಕಾಷಾಯವನ್ನು ಧರಿಸುತ್ತಿದ್ದರು. ಆದರೆ ಇವರು ತಮಿಳು ನಾಡಿನಿಂದ ಬಂದಾಗ ಕಾರಣಾಂತರಗಳಿಂದ ಗೃಹಸ್ಥರಂತೆ ಬಿಳಿಯ ಪಂಚೆಯನ್ನುಟ್ಟು ಬರಬೇಕಾಯಿತು. ಆ ನೆನಪಿಗೆ ಅಂದು ರಾಮಾನುಜರಿಗೆ ಶ್ವೇತ ವಸ್ತ್ರಧರಿಸುತ್ತಾರೆ[3].

ಅಷ್ಟ ತೀರ್ಥೋತ್ಸವ:

ಕಾರ್ತಿಕ ಶುದ್ಧ ದಶಮಿಯ ದಿವಸ ಶ್ರೀ ಚೆಲುವರಾಯಸ್ವಾಮಿಯವರಿಗೆ ಕಲ್ಯಾಣಿಯಲ್ಲಿ ಅವಭೃತವಾದ ನಂತರ, ಅಷ್ಟತೀರ್ಥಗಳಲ್ಲಿ ಭಕ್ತಿಭಾವದಿಂದ ಸ್ನಾನ ಮಾಡಿ ಸಂತಾನಾರ್ಥವಾಗಿ ಬರುವ ಭಕ್ತಾದಿಗಳು, ತಮ್ಮ ಮಡಿಲಿನಲ್ಲಿ ಹಣ್ಣು ಕಾಯಿಗಳನ್ನು ಕಟ್ಟಿಕೊಂಡು ಗಿರಿಪ್ರದಕ್ಷಿಣೆಯಿಂದ ಬೆಟ್ಟದ ಸನ್ನಿಧಿಗೆ ಬಂದು, ದೇವಸ್ಥಾನಕ್ಕೆ ಎಂಟು ಆಣೆ ಕಾಣಿಕೆ ಕೊಟ್ಟು, ಪ್ರಸಾದ ಸ್ವೀಕರಿಸಿದರೆ ಭೀತಿಶಂಕೆ ನಿವಾರಣೆಯಾಗುವುದು[4].

ಹೀಗೆ ಮೇಲುಕೋಟೆಯು ಧಾರ್ಮಿಕ ಆಚರಣೆಗಳ ಕೇಂದ್ರವಾಗಿ ತನ್ನ ಸಾಂಸ್ಕೃತಿ ಪರಂಪರೆಯನ್ನು ಅನೂಚಾನವಾಗಿ ಮುಂದುವರೆಸಿಕೊಂಡು ಬರುತ್ತಿದೆ. ಧಾರ್ಮಿಕ ಸಮನ್ವಯವನ್ನು ಸಾರುವ ಇಲ್ಲಿನ ಉತ್ಸವಗಳು ಪ್ರಸ್ತುತ ದಿನಗಳಲ್ಲಿ ಅತ್ಯವಶ್ಯಕವಾಗಿವೆ. ಸಮಾಜದ ನೈತಿಕ ಮೌಲ್ಯಗಳ ಜೀವಂತಿಕೆಗೆ ಇವುಗಳ ಕಾಣಿಕೆ ಅಪಾರ. ಇಂತಹ ಆಚರಣೆಗಳನ್ನು ಪ್ರೋತ್ಸಾಹಿಸಿ ಉಳಿಸಬೇಕಾದುದು ನಮ್ಮೆಲ್ಲರ ಹೊಣೆಯಾಗಿದೆ.

ಸಾಮಾಜಿಕ ಜೀವನ:

ಒಂದು ಸ್ಥಳದ ಸಂಸ್ಕೃತಿಯು ಅನಾವರಣಗೊಳ್ಳುವುದು ಅಲ್ಲಿನ ಸಾಮಾಜಿಕ ಜೀವನದಲ್ಲಿ. ಜನರ ಜೀವನ ಶೈಲಿ, ರೀತಿ, ನೀತಿ, ನಂಬಿಕೆಗಳು, ಸಂಪ್ರದಾಯಗಳು, ಉದ್ಯೋಗ ಹೀಗೆ ಪ್ರತಿಯೊಂದು ಅಂಶಗಳು ಸಾಂಸ್ಕೃತಿಕ ಪರಂಪರೆಯ ಪತೀಕದಂತಿವೆ. ಆಲಯಾಶ್ರಿತ ಗ್ರಾಮವಾದ ಮೇಲುಕೋಟೆಯು ಧರ್ಮದ ನೆರಳಿನಲ್ಲಿ ಒಂದು ವಿಶಿಷ್ಟ ಸಾಮಾಜಿಕ ಜೀವನವನ್ನು ಹೊಂದಿದೆ. ಧರ್ಮದ ನಿಜ ಸ್ವರೂಪದ ಬೆಳಕಿನಲ್ಲಿ ಸಾಮಾಜಿಕ ಜೀವನವನ್ನು ಹಸುನುಗೊಳಿಸುವ ಪ್ರಯತ್ನಗಳು ಇಲ್ಲಿ ನಿರಂತರವಾಗಿ ಸಾಗಿ ಬಂದಿತು.

ರಾಮಾನುಜರ ಪ್ರಭಾವದಿಂದ ಇಲ್ಲಿ ಒಂದು ಸಮನ್ವಯ ಸಮಾಜ ವ್ಯವಸ್ಥೆ ನಿರ್ಮಾಣವಾಯಿತು.

7.2 ಜಾತಿ ವ್ಯವಸ್ಥೆ:

ಮೇಲುಕೋಟೆಯು ಒಂದು ಸಾವಿರ ಮನೆಗಳಿರುವ ಊರು. ಇಲ್ಲಿ 500 ಜನರು ವಾಸಿಸುತ್ತಿದ್ದಾರೆ. ಊರಿನಲ್ಲಿ ಬ್ರಾಹ್ಮಣರು, ಶೆಟ್ಟರು, ಒಕ್ಕಲಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದು ಉಳಿದಂತೆ ಗಾಣಿಗರು, ಕ್ಷೌರಿಕರು, ಅಗಸರು, ಹರಿಜನರು, ಮುಸ್ಲೀಂ, ಕುಂಬಾರರು, ಲಿಂಗಾಯತರು, ಉಪ್ಪಾರರು ಹೀಗೆ ಇನ್ನೂ ಹಲವು ಜಾತಿಯ ಜನರು ವಾಸಿಸುತ್ತಿದ್ದಾರೆ. ಜಾತಿಯ ಬಿಗಿಹಿಡಿತವಿಲ್ಲದ ಸಹಬಾಳ್ವೆ ಇಲ್ಲಿನ ವಿಶೇಷ.

ಉದ್ಯೋಗ:

ಆಲಯಾಶ್ರಿತ ಗ್ರಾಮವಾದ ಮೇಲುಕೋಟೆಯ ಇಂದಿನ ಪರಿಸ್ಥಿತಿ ಬದಲಾಗಿದೆ. ಆಲಯವನ್ನು ನಂಬಿ ಬದುಕುವುದು ಕಷ್ಟವಾಗಿದೆ. ಹೆಚ್ಚಾಗಿ ಆಲಯವನ್ನು ಅವಲಂಬಿಸಿದ್ದ ಬ್ರಾಹ್ಮಣರು ಇಂದು ಪಟ್ಟಣ ಸೇರಿದ್ದಾರೆ. ನೇಯ್ಗೆಯವರನ್ನು ಕುರುಹಿನ ಶೆಟ್ಟಿ ಎಂದು ಕರೆಯುವರು. ಈ ಊರು ನಾಮಕ್ಕೆ ಎಷ್ಟು ಪ್ರಸಿದ್ಧವೋ ನೇಯ್ಗೆಗೂ ಅಷ್ಟೇ ಪ್ರಸಿದ್ಧ. ಮೇಲುಕೋಟೆಯ ರೇಷ್ಮೆ ಪಂಚೆ ಹಾಗೂ ರೇಷ್ಮೆ ಸೀರೆಗಳ ಬಹಳ ಪ್ರಸಿದ್ಧಿ ಪಡೆದಿವೆ. ಒಕ್ಕಲಿಗರು ಕೃಷಿಯನ್ನು ಮಾಡಿದರೆ ಉಳಿದವರು ವ್ಯಾಪಾರ, ಕುಂಬಾರಿಕೆ, ಕ್ಷೌರಿಕೆ, ಚಿತ್ರಕಲೆ ಹೀಗೆ ವಿವಿಧ ವೃತಿಯನ್ನು ಅವಲಂಬಿಸಿ ಬದುಕುತ್ತಿದ್ದಾರೆ.

7.3 ಮಠಗಳು ಮತ್ತು ಸಂಸ್ಥೆಗಳು:

ಮಠಗಳು:

ಈ ಊರಿನಲ್ಲಿ ರಾಮಾನುಜ ಸಿದ್ಧಾಂತದ ಅನುಯಾಯಿಗಳ ಯತಿರಾಜಮಠ, ಪರಕಾಲ ಮಠ, ಅಹೋಬಲ ಮಠ, ವಾನಮಾಮಲೈ, ಆಂಡವನ್, ಆದಿಚುಂಚನಗಿರಿ ಮಠ, ಉತ್ತರಾದಿ ಮಠ ಹೀಗೆ ಮುಂತಾದ ಮಠಗಳಿವೆ. ಯತಿರಾಜ ಮಠವನ್ನು ರಾಮಾನುಜರು ಸ್ಥಾಪಿಸಿದರು. ಇಂದಿಗೂ ಈ ವೈಷ್ಣವ ಮಠಗಳು ಧರ್ಮಜಾಗೃತಿಯ ಕೇಂದ್ರಗಳಾಗಿವೆ. ಇವು ಜಾತ್ರೆಯ ಕಾಲದಲ್ಲಿ ಬರುವ ಭಕ್ತರಿಗೆ ಆಶ್ರಯ ನೀಡುತ್ತಿವೆ. ಇವಲ್ಲದೆ ಆಯಾ ಪಂಗಡಕ್ಕೆ ಪ್ರತ್ಯೇಕವಾದ ಕೆಲವು ಛತ್ರಗಳೂ ಇವೆ.

ಸಾರ್ವಜನಿಕ ಸಂಸ್ಥೆಗಳು:

ಇಲ್ಲಿ ಜನಪದ ಸೇವಾ ಟ್ರಸ್ಟ್ ಎಂಬ ಗ್ರಾಮೀಣ ಜನರ ಸೇವೆಗೆ ಸ್ಥಾಪಿತವಾದ ಸಂಸ್ಥೆಯಿದೆ. 1960ರಲ್ಲಿ ಸುರೇಂದ್ರ ಕೌಜಲಗಿಯವರಿಂದ ಆರಂಭವಾಯಿತು. ಇದರ ವತಿಯಿಂದ ಅಂಗವಿಕಲರ ಶಾಲೆ ನಡೆಯುತ್ತಿದೆ. ಅನಾಥಾಲಯವನ್ನೂ ನಡೆಸಲಾಗುತ್ತಿದೆ. ಕೇಂದ್ರ ಸರ್ಕಾರದ ಅನುದಾನ, ಉದಾರಿಗಳದಾನ, ವಂತಿಕೆಗಳಿಂದ ಇವು ನಡೆಯುತ್ತಿವೆ. ವಿದ್ಯೆಯ ಜೊತೆಗೆ ಹಲವು ಕೈಕಸುಬುಗಳನ್ನು ಇಲ್ಲಿ ಕಲಿಸುತ್ತಾರೆ. 1950ರಲ್ಲಿ ಆರಂಭವಾದ ಯಧುಶೈಲ ಪ್ರೌಢಶಾಲೆ, ಎಸ್.ಇ.ಟಿ. ಪಾಲಿಟೆಕ್ನಿಕ್, ಕೈಗಾರಿಕಾ ತರಬೇತಿ ಕಾಲೇಜು, ಡಿ.ಇಡಿ.ಕಾಲೇಜು, ಯದುಗಿರಿ ಶಿಕ್ಷಣ ಸಂಸ್ಥೆ ಹೀಗೆ ಹಲವು ಶಿಕ್ಷಣ ಸಂಸ್ಥೆಗಳಿವೆ.

ಸಂಘ ಸಂಸ್ಥೆಗಳು:

ಇಲ್ಲಿ ಯದುಗಿರಿ ಮಿತ್ರಸಂಘ, ಗೆಳೆಯರ ಬಳಗ, ಆಂಡಾಳ್ ಯುವತಿ ಮಂಡಳಿ ಎಂಬ ಯುವ ಕೂಟಗಳು, ನೇಕಾರರ ಸಂಘ, ಯದುಗಿರಿ ಸೇವಾಸಮಾಜ ಎಂಬ ಹಲವಾರು ಸಂಘ ಸಂಸ್ಥೆಗಳಿವೆ. ಅಲ್ಲದೆಯೇ ವೇದಾಂತ ದೇಶಿಕರವರ ಸಭೆ, ವರವುನಿಸಭೆ, ವಿವೇಕೋಲ್ಲಾಸಿನಿ ಸಭಾ, ಉಭಯ ವೇದಾಂತ ಪ್ರವರ್ತಕರ ಸಭೆ ಹೀಗೆ ಹಲವು ಸಭೆಗಳೂ ಇಲ್ಲಿವೆ.

7.4 ಸಂಗೀತ ಮತ್ತು ಚಿತ್ರಕಲೆ:

ಮೇಲುಕೋಟೆ ಒಂದು ವಿದ್ವತ್ ಕೇಂದ್ರವಾಗಿದೆ. ಶ್ರೀನಿವಾಸ ಅಯ್ಯಂಗಾರ್, ವೆಂಕಟಾಚಾರ್ಯರು ಇವರು ಪ್ರಮುಖರು. ಶೆಲ್ಪಪಿಳ್ಳೆ ಅಯ್ಯಂಗಾರರು ಮೈಸೂರು, ತಂಜಾವೂರುಗಳಲ್ಲಿ ಸಂಗೀತಭ್ಯಾಸಮಾಡಿ, ಆಕಾಶವಾಣಿಯೂ ಸೇರಿದಂತೆ ಹಲವು ಕಡೆ ಸಂಗೀತ ಕಛೇರಿ ನೀಡಿದ್ದಾರೆ. ಇವರಿಗೆ 'ಸಂಗೀತ ಭೂಷಣ' ಬಿರುದಲ್ಲದೆ ಹಲವು ಸನ್ಮಾನಗಳು ಲಭಿಸಿವೆ. ಮೇಲುಕೋಟೆಯ ದಿವ್ಯ ಪ್ರಬಂಧಗಳ ಗಾಯನವು ಸಾಂಪ್ರದಾಯಿಕ ಆಚರಣೆಗಳಲ್ಲಿ ಒಂದು. ನಾಥಮುನಿಗಳಿಂದ ಸಂಗ್ರಹಿತವಾದ 'ದಿವ್ಯ ಪ್ರಬಂಧ'ದಲ್ಲಿರುವ ಸಂಸ್ಕೃತ ಉಕ್ತಿಗಳನ್ನು ರಾಗ, ತಾಳ ಬದ್ಧವಾಗಿ ಹಾಡುವುದರ ಆಚರಣೆ. ಇಂದಿಗೂ ಅರೆಯರ್ ಮನೆತನದವರು ಈ ಕಾರ್ಯವನ್ನು ನೆರವೇರಿಸುತ್ತಿದ್ದಾರೆ[6].

ಇಲ್ಲಿರುವ ಮಠಗಳಲ್ಲಿ ಭಕ್ತರು, ಜಯವಿಜಯರು ಇತ್ಯಾದಿ ಭಿತ್ತಿ ಚಿತ್ರಗಳಿದ್ದು,

[illegible]

ಬಣ್ಣ ಮಾಸಿದೆ. ಚಿತ್ರಕಲೆಯನ್ನು ರೂಡಿಸಿಕೊಂಡಿದ್ದ ಜನರೂ ಇಲ್ಲಿದ್ದು ಇಲ್ಲಿರುವ ದೇವರುಗಳ ಕಲ್ಯಾಣೋತ್ಸವ, ರಾಧಾಕೃಷ್ಣ, ಸರಸ್ವತಿ ಮುಂತಾದ ಚಿತ್ರಗಳು ಸಾಕ್ಷಿಯಾಗಿವೆ. 'ಜವ್ವಾಜಿ ಕಳವರ್ ಎಂಬ ಕಲಾವಿದರು ಸಾಂಪ್ರದಾಯಿಕ ಚಿತ್ರ ಕಲಾವಿದರಲ್ಲಿ ಪ್ರಮುಖರು.

7.5 ವಿಶೇಷ ನೀರಾವರಿ ವ್ಯವಸ್ಥೆ:

ಮೇಲುಕೋಟೆಯು ಸಮುದ್ರ ಮಟ್ಟದಿಂದ 3600 ಅಡಿ ಎತ್ತರದಲ್ಲಿರುವುದರಿಂದ, ಮಳೆ ನೀರು ಕೆಳಗೆ ಹರಿದು ಪೋಲಾಗದಂತೆ ತಡೆಗಟ್ಟಲು, ಇಳಿಜಾರು ಪ್ರದೇಶದ ಹಲವಾರು ಹಂತಗಳಲ್ಲಿ ಈ ಜಲವನ್ನು ಕಲ್ಯಾಣಿಗಳಾಗಿ ಸಂಗ್ರಹಿಸಿ ಕುಡಿಯುವ ನೀರಿನ ಉದ್ದೇಶಕ್ಕಾಗಿ ಉಪಯೋಗಿಸುತ್ತಿದ್ದಾರೆ. ಮೇಲುಕೋಟೆಯ ಪ್ರತಿಯೊಂದು ಮನೆಯೂ ಬಾವಿಯನ್ನೂ ಹೊಂದಿವೆ. ಕೇವಲ 30 ರಿಂದ 50 ಅಡಿಗಳಲ್ಲಿ ಅಂತರ್ಜಲ ಲಭ್ಯವಿದೆ. ಜಲಕ್ಷಾಮವನ್ನು ಹೆದರಿಸುತ್ತಿರುವ ಪ್ರಸ್ತುತ ದಿನಗಳಲ್ಲಿ ಮೇಲುಕೋಟೆಯ ಮಳೆಯಾಧಾರಿತ ಅಂತರ್ಜಲ ಸಂರಕ್ಷಣಾ ವಿಧಾನ ಅನುಕರಣೀಯವಾದುದು. ಪೂರ್ವಿಕರ ಇಂಥಹಾ ಜಲವ್ಯವಸ್ಥೆಯ ರೀತಿಗಳು ಇತರ ಸ್ಥಳಗಳಿಗೆ ಆದರ್ಶಪ್ರಾಯವಾಗಿದೆ.

ಬುಕೆನಾನ್ ಕಂಡ ಮೇಲುಕೋಟೆ:

'ಎ ಜರ್ನಿ ಫ್ರಮ್ ಮದ್ರಾಸ್ ಥ್ರೂದಿ ಕಂಟ್ರೀಸ್ ಆಫ್ ಮೈಸೂರ್, ಕೆನರ, ಅಂಡ್ ಮಲಬಾರ್' ಎಂಬ ಬುಕೆನಾನನ ಸಂಪುಟದಲ್ಲಿ ಮೇಲುಕೋಟೆಯೂ ವರ್ಣಿತವಾಗಿದೆ. ಬುಕೆನಾನ್ ನುಡಿಯಂತೆ, ಮೇಲುಕೋಟೆ ಹಿಂದುಗಳ ಒಂದು ಪವಿತ್ರ ಕ್ಷೇತ್ರ. ಇಲ್ಲಿನ ಕಲ್ಯಾಣಿಯೊಂದು ಬಹು ಸುಂದರವಾಗಿದೆ. ಅದರ ಪಾವಿತ್ರ್ಯದಿಂದಾಗಿ ಪ್ರತಿವರ್ಷ ಅದರೊಳಗೆ ಭಕ್ತರು ವಿಶೇಷ ಸಂದರ್ಭದಲ್ಲಿ ದುಡ್ಡು ಕಾಸು ಎಸೆಯುವುದುಂಟು. 'ಸುಲ್ತಾನನು ಇದರಲ್ಲಿ ತುಂಬಾ ಸಂಪತ್ತು ಸಿಗಬಹುದೆಂದೆಣಿಸಿ ನೀರನ್ನು ಖಾಲಿ ಮಾಡಿಸಿದ್ದ. ಆದರೆ ಸಿಕ್ಕಿದ್ದು ಮಾತ್ರ ಒಂದು ಕೊಡದಷ್ಟು ತಾಮ್ರದ ಕಾಸುಗಳು ಎಂದು ಇಲ್ಲಿನ ಒಬ್ಬ ಬ್ರಾಹ್ಮಣ ವ್ಯಕ್ತಿ ಹೇಳಿದರಂತೆ. ವೈಷ್ಣವರ ಬಗ್ಗೆ ತಿಳಿಯಲು ನಾನು ಮೇಲುಕೋಟೆಯಲ್ಲಿ ಉಳಿದುಕೊಂಡೆ, ಆದರೆ ನಾನು ನಿರೀಕ್ಷಿಸಿದಷ್ಟು ಪ್ರಯೋಜನ ಆಗಲಿಲ್ಲ. ನಾನು ಗುರುಗಳನ್ನು, ಭೇಟಿಮಾಡಲು ಬಯಸಿದೆ ಆದರೆ ಅದು ಸಾಧ್ಯವಾಗಲಿಲ್ಲ. ಇಲ್ಲಿನ ವಿಚಾರವನ್ನು ನನಗೆ ಯಾರೂ ಸರಿಯಾಗಿ ತಿಳಿಸಲಿಲ್ಲ . ಆದರೂ ರಾಮಾನುಜರ ಬಗ್ಗೆ ತಿಳಿದುಕೊಂಡೆ. ಇದು ಒಂದು ಸುಂದರ ಗ್ರಾಮ ಎಂದುಕೊಂಡನಂತೆ.

ಹೀಗೆ ಮೇಲುಕೋಟೆಯು ಚತುರ್ ಯುಗಗಳಲ್ಲೂ ಮಹತ್ವ ಪಡೆದಿದ್ದು, ಪುರಾಣ ಪ್ರಸಿದ್ಧವಾಗಿದೆ. ಕರ್ನಾಟಕದ ಕೆಲವೇ ಮಹತ್ವದ ಧಾರ್ಮಿಕ ಮತ್ತು ಪ್ರೇಕ್ಷಣೀಯ ಸ್ಥಳವಾಗಿದೆ. ಗಂಗ- ಹೊಯ್ಸಳರ ಕಾಲದಿಂದ ಮೈಸೂರು ಒಡೆಯರ ಕಾಲದವರೆಗೂ ರಾಜರ ಪ್ರೋತ್ಸಾಹ ಪಡೆದು ನಿರ್ಮಿತವಾದ ಗುಡಿ ಗೋಪುರಗಳು ಇಲ್ಲಿವೆ. ಇದು ಸಾಹಿತಕವಾಗಿ, ಸಾಂಸ್ಕೃತಿಕವಾಗಿ, ಆಧ್ಯಾತ್ಮಿಕವಾಗಿ ಕಂಗೊಳಿಸುತ್ತಿದೆ. ಸಾಂಸ್ಕೃತಿಕ ಪರಂಪರೆಯ ದೃಷ್ಟಿಯಿಂದ ಇವನ್ನೆಲ್ಲಾ ಸಂರಕ್ಷಿಸಿ ಉಳಿಸಬೇಕಾಗಿರುವುದು ನಮ್ಮೆಲ್ಲರ ಹೊಣೆಯಾಗಿದೆ.

ಅಡಿಟಿಪ್ಪಣಿಗಳು:

1. ಆದಿಚುಂಚನಗಿರಿ ಒಂದು ಸಾಂಸ್ಕೃತಿಕ ಅಧ್ಯಯನ. ಕೆ.ರಾಜೇಶ್ವರಿ. ಪು - 271
2. ಮಂಡ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ. ತೈಲೂರು ವೆಂಕಟಕೃಷ್ಣ. ಪು - 79
3. ಮೇಲುಕೋಟೆ ಪರಿಚಯ. ಹರಿಪ್ರಿಯ. ಪು - 22
4. ತಿರುನಾರಾಯಣಪುರದ ಯಾತ್ರೆಯು. ರಾಮಾನುಜಯ್ಯಂಗಾರ್ಯ. ಪು - 71
5. ಕರ್ನಾಟಕ ಗ್ಯಾಸೆಟಿಯರ್. ಮಂಡ್ಯ ಜಿಲ್ಲೆ. ಪು - 651
6. ಅದೇ. ಪು - 773
7. ಸುಧಾ. ಮಾಸಪತ್ರಿಕೆ, ಮಾರ್ಚ್ 2008. ಪು - 20
8. ಸಕ್ಕರೆ ಸೀಮೆ. ಕೆ.ಅನಂತರಾಮು. ಪು - 628

ಅಧ್ಯಾಯ: 8

ಸಮಾರೋಪ

ಅಧ್ಯಾಯ: 8

ಸಮಾರೋಪ

ಭಾರತೀಯ ಸಂಸ್ಕೃತಿಯ ಚೌಕಟ್ಟಿನಲ್ಲಿ ಅಳವಟ್ಟು ಸುಂದರವಾಗಿ ಅರಳಿರುವ ಸಂಸ್ಕೃತಿ ಕುಸುಮಗಳಲ್ಲಿ ಮೇಲುಕೋಟೆಯ ಸ್ಥಾನ ಬಹಳ ಹಿರಿದು ಮತ್ತು ವಿಶಿಷ್ಟವಾದುದು. ಧಾರ್ಮಿಕ ದರ್ಶನದ ದಿವ್ಯ ದೃಷ್ಟಿಯಲ್ಲಿ, ಸಾಹಿತ್ಯ ಸೃಷ್ಟಿಯ ರಸಮಾರ್ಗದಲ್ಲಿ, ಶೈಕ್ಷಣ ಸಾಧನೆಯಲ್ಲಿ ಹೀಗೆ ಎಲ್ಲ ರಂಗಗಳಲ್ಲಿಯೂ ಮೇಲುಕೋಟೆಯ ಸಾಧನೆ ಸಾರ್ಥಕತೆಯನ್ನು ಪಡೆದಿದೆ. ರಾಜಾಶ್ರಯದಲ್ಲಿ ಭಾರತೀಯ ಸಾಂಸ್ಕೃತಿಕ ಶ್ರೇಷ್ಟತೆಯ ಎಲ್ಲಾ ಅಂಶಗಳು ಈ ನೆಲದಲ್ಲಿ ಪೋಷಿಸಲ್ಪಟ್ಟವು.

''ಮೇಲುಕೋಟೆ - ಒಂದು ಸಾಂಸ್ಕೃತಿಕ ಅಧ್ಯಯನ'' ಎಂಬ ಈ ಪ್ರಬಂಧದಲ್ಲಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ, ಸಾಹಿತ್ಯಕವಾಗಿ, ವಾಸ್ತುಶಿಲ್ಪ ಕಲೆಗಳ ಸಾಧನೆಗಳಿಂದ ಸಾಂಸ್ಕೃತಿಕವಾಗಿ ಮೇಲುಕೋಟೆ ನೀಡಿರುವ ಮಹತ್ತರ ಕಾಣಿಕೆಯನ್ನು ಗುರುತಿಸುವುದೇ ಈ ಅಧ್ಯಯನದ ಮೂಲ ಗುರಿಯಾಗಿದೆ. ಈ ಹಿನ್ನೆಲೆಯಲ್ಲಿ ಶ್ರೀ ವೈಷ್ಣವ ಯತಿ ರಾಮಾನುಜಾಚಾರ್ಯರ ಸಾದನೆಗಳು, ಅವರ ವಿಶಿಷ್ಟಾದ್ವೈತದ ಸಾರ, ರಾಜಾಶ್ರಯದಲ್ಲಿ ಧರ್ಮದ ಸಮನ್ವಯ, ಶಾಸನಗಳ ಅಧ್ಯಯನ ಗ್ರಂಥಗಳ ಅವಲೋಕನ, ಸ್ಥಳೀಯ ಹಿರಿಯರ ಸಂದರ್ಶನ, ಕ್ಷೇತ್ರಕಾರ್ಯ - ಈ ಎಲ್ಲಾ ಪಥಕ್ರಮಣಗಳಲ್ಲಿ ನಾನು ತಿಳಿದ, ಸಂಬಂಧಿಸಿದ, ಆಧಾರಗಳಿಂದ ಹುಡುಕಿ ತೆಗೆದು ವಿವರಗಳನ್ನು ಇಲ್ಲಿ ತಿಳಿಯಪಡಿಸಲಾಗಿದೆ.

ಎರಡನೇ ಅಧ್ಯಾಯವಾದ ಮೇಲುಕೋಟೆ ಪ್ರಾಚೀನತೆ, ಪೌರಾಣಿಕ ವಿವರಣೆಯಲ್ಲಿ ಮೇಲುಕೋಟೆಯ ಅಸ್ತಿತ್ವಕ್ಕೆ ಸಂಬಂಧಿಸಿದಂತಿರುವ ಪೌರಾಣಿಕ ಹಳಮೆ-ಹಿರಿಮೆಯನ್ನು ಗುರುತಿಸಲಾಗಿದೆ. ನಾರದಪುರಾಣಾಂತರ್ಗತವಾದ ಯಾದವಗಿರಿ ಮಹಾತ್ಮ್ಯ ಭಾಗದಲ್ಲಿ ನಾರಾಯಣನು ವ್ಯಾಸ ಮಹರ್ಷಿಗಳಿಗೆ ಈ ಸ್ಥಳದ ವಿಶಿಷ್ಟತೆಯನ್ನು ಹೇಳಿದ್ದಾನೆ. ಮತ್ಸ್ಯಪುರಾಣದಲ್ಲಿ ಕೃಷ್ಣನು ಇಲ್ಲಿ ನೆಲೆಸಿದ ಹಾಗೂ ಇಲ್ಲಿನ ತೀರ್ಥಗಳು ಉಲ್ಲೇಖವಿದೆ. ಪದ್ಮಪುರಾಣದಲ್ಲಿಯೂ ಮೇಲುಕೋಟೆ ಉಲ್ಲೇಖವಿದೆ. ಆಗಮಗಳಲ್ಲಿಯೂ ಮೇಲುಕೋಟೆ ಉಲ್ಲೇಖಗೊಂಡಿದ್ದು, ಈಶ್ವರಸಂಹಿತೆಯಲ್ಲಿ ಅಂತರ್ಗತವಾಗಿದೆ. ಇವುಗಳ ಆಂತರ್ಯದ ವಿಚಾರಗಳ ಚಿಂತನೆ ಮಾಡಲಾಗಿದೆ. ಬೃಹತ್ ಶಿಲಾಯುಗದ ನೆಲೆಗಳನ್ನು

ಗುರುತಿಸಲಾಗಿದೆ. ಭೌಗೋಳಿಕವಾಗಿ ಮೇಲುಕೋಟೆಯ ಪ್ರಾಚೀನತೆಯನ್ನು ವೈಜ್ಞಾನಿಕ ಅಂಶಗಳಿಂದ ವಿಚಾರ ಮಾಡಲಾಗಿದೆ. ಇತಿಹಾಸ ಕಾಲದಲ್ಲಿ ಮೇಲುಕೋಟೆಯ ಬೆಳವಣಿಗೆಯನ್ನು ಸಂಕ್ಷಿಪ್ತವಾಗಿ ಪರಿಚಯ ಮಾಡಲಾಗಿದೆ.

ಮೂರನೆಯ ಅಧ್ಯಾಯ ರಾಮಾನುಜರು ಮತ್ತು ಮೇಲುಕೋಟೆ ಭಾಗದಲ್ಲಿ ಆಚಾರ್ಯರ ಜೀವನ ಪರಿಚಯ ಮಾಡಲಾಗಿದೆ. ಮೇಲುಕೋಟೆ ರಾಮಾನುಜರು ಬರಲು ಕಾರಣ ಮತ್ತು ಹಾದಿಗೆ ಸಂಬಂಧಿಸಿದಂತೆ ಹೋಲಿಕೆಗಳು, ಶಾಸನಾಧಾರಗಳಿಂದ ಸ್ಪಷ್ಟೀಕರಣ ನೀಡಲಾಗಿದೆ. ರಾಮಾನುಜರ ಆಗಮನದ ಮುನ್ನ ಮೇಲುಕೋಟೆ ಅಳಿದಿತ್ತು ಎನ್ನುವು ಸಂಶೋಧನೆಯ ಹೊಸ ವಿಚಾರವಾಗಿದೆ. ರಾಮಾನುಜರ ತತ್ವಸಾರ ಹಾಗೂ ರಾಮಾನುಜರ ಮಾನವೀಯತೆಯ ಮುಖವನ್ನು ಗುರುತಿಸುವ ಪ್ರಯತ್ನವನ್ನು ಸಕಾರಣಗಳಿಂದ ಮಾಡಲಾಗಿದೆ.

ನಾಲ್ಕನೇ ಅಧ್ಯಾಯ ದೇವಾಲಯಗಳ ಸಂಸ್ಕೃತಿ ಭಾಗದಲ್ಲಿ ಇಲ್ಲಿನ ಪ್ರಮುಖ ದೇವಾಲಯ ನಾರಾಯಣಸ್ವಾಮಿ ದೇವಾಲಯವನ್ನು ಕ್ಷೇತ್ರ ಕಾರ್ಯದ ಮೂಲಕ ಅದರ ವಾಸ್ತು ವಿವರಣೆ ನೀಡಲಾಗಿದೆ. ದೇವಾಲಯದ ನಿರ್ಮಾಣಕಾಲ ಹಾಗೂ ಶೈಲಿಯನ್ನು ಇತರ ದೇವಾಲಯಗಳ ಶೈಲಿಯ ಹೋಲಿಕೆಗಳು ಮತ್ತು ಶಾಸನಾಧಾರಗಳಿಂದ ಆ ರಾಜವಂಶದ ಕಾಲವನ್ನು ಹೊರಗೆಳೆಯಲಾಗಿದೆ. ಇಲ್ಲಿನ ಪ್ರಮುಖ ಆಕರ್ಷಣೆಯೆಂದರೆ ಕೊಳಗಳು ಮತ್ತು ಮಂಟಪಗಳು, ದಾನ ಧರ್ಮಗಳಿಗೆ ಹೆಸರಾದ ಆದರ್ಶಸಂಸ್ಕೃತಿಗೆ ಇವು ಉದಾಹರಣೆಯಾಗಿವೆ. ಇವುಗಳ ಸರ್ವೇಕ್ಷಣೆ ಮಾಡಿ ವಿವರಿಸಲಾಗಿದೆ.

ರಾಜಾಶ್ರಯದಲ್ಲಿ ಮೇಲುಕೋಟೆಯು ಆಧ್ಯಾತ್ಮ ಹಾಗೂ ಸಾಂಸ್ಕೃತಿಕವಾಗಿ ವಿಶೇಷ ಪ್ರೋತ್ಸಾಹ ಪಡೆಯಿತು. ಎಪಿಗ್ರಾಫಿಯ ಕರ್ನಾಟಕದಲ್ಲಿನ ಶಾಸನಾಧಾರಗಳು ಇದನ್ನುನಿರೂಪಿಸಿವೆ. ಮೇಲುಕೋಟೆ ಹೊಯ್ಸಳರ ಕಾಲದಲ್ಲಿ ಪುನರ್ಜೀವ ಪಡೆಯಿತು. ವಿಜಯ ನಗರದ ಅರಸರ ಕಾಲದಲ್ಲಿ ಇಲ್ಲಿನ ಸಾಂಸ್ಕೃತಿಕ ಸಾಧನೆ ಇಮ್ಮಡಿಯಾಯಿತು. ವೈಷ್ಣವಧರ್ಮದ ಪ್ರಮುಖ ಕೇಂದ್ರವಾಯಿತು ಹಾಗೂ ದೇವಾಲಯಶೈಲಿ, ಮಂಟಪ ಹಾಗೂ ಕಂಬ ನಿರ್ಮಾಣದಲ್ಲಿ ವಿಶೇಷತೆಯನ್ನು ಪಡೆದಿದು ಇದರ ಸಾಧನೆ. ಒಡೆಯರು ಸಾಂಸ್ಕೃತಿಕ ಕೊಡುಗೆ ಸ್ಮರಣಾರ್ಹವಾದುದು. ಇಲ್ಲಿನ ಧಾರ್ಮಿಕ ಉತ್ಸವ ಆರಂಭಗೊಂಡುದ್ದಲ್ಲದೆ. ಶೈಕ್ಷಣಿಕವಾಗಿ ವಿಶೇಷವಾಗಿ ಪ್ರೋತ್ಸಾಹಿತವಾದುದು ತಿಳಿದು ಬರುತ್ತದೆ.

ಸಾಹಿತ್ಯ ಮತ್ತು ಶಿಕ್ಷಣದಲ್ಲಿ ಮೇಲುಕೋಟೆಯ 'ಜ್ಞಾನ ಮಂಟಪ' ಎಂಬ ಹೆಸರನ್ನು ಸಾಕಾರಗೊಳಿಸುವ ಸಾಧನೆ ಹೊರಬಂದಿದೆ. ಸಂಸ್ಕೃತ ಸಾಹಿತ್ಯ, ನವ್ಯ ಸಾಹಿತ್ಯಗಳಿಗೆ ಇಲ್ಲಿನ ಕೊಡುಗೆಗಳು ಸ್ಮರಣಾರ್ಹ. ಪ್ರಾಚೀನ ಗುರುಕುಲ ಸಂಸ್ಕೃತಿ, ವೇದಪಾಠಶಾಲೆಯ ಸಾಧನೆಗಳು, ಪತ್ರಿಕೋದ್ಯಮ, ಕ್ರೀಡಾಸಾಧನೆಗಳು ಇಲ್ಲಿನ ಸಾಂಸ್ಕೃತಿಕ ಸಾಧನೆಗೆ ಉದಾಹರಣೆಯಾಗಿವೆ.

ಧಾರ್ಮಿಕ ಆಚರಣೆಗಳಿಂದ ಇಲ್ಲಿನ ಸಂಸ್ಕೃತಿಯು ಜೀವಂತಿಕೆಯನ್ನು ನೋಡಬಹುದು. ಧಾರ್ಮಿಕ ಸಮನ್ವಯ ಭಾವನೆಯನ್ನು ಇಂದಿಗೂ ಇಲ್ಲಿ ಆಚರಿಸುತ್ತಿರುವುದು ಶ್ಲಾಘನೀಯವಾದುದು. ಆಲಯಾಶ್ರಿತ ಗ್ರಾಮದ ಸಮಾಜ ವ್ಯವಸ್ಥೆಯಲ್ಲಿ ಉದಾರ ಧೋರಣೆ ಗುರುತಿಸಲ್ಪಟ್ಟಿರುವ ವಿಶೇಷ ಸಂಸ್ಕೃತಿ. ಇಲ್ಲಿನ ವಿಶೇಷ ನೀರಾವರಿಯ ಪದ್ಧತಿಯು, ಪ್ರಸ್ತುತ ದಿನಗಳಲ್ಲಿ ಎಲ್ಲಾ ಜನರಿಗೂ ಅನುಕರಣೀಯವಾದುದು ಮತ್ತು ಆದರ್ಶಪ್ರಾಯವಾದುದು.

ಹೀಗೆ ಸಾಂಸ್ಕೃತಿಕವಾಗಿ ಮೇಲುಕೋಟೆ ಶ್ರೀಮಂತ ಪರಂಪರೆಯನ್ನು ಹೊಂದಿದೆ. ರಾಜ, ಸಿದ್ಧಿವ್ಯಕ್ತಿ, ಸಮಾಜ ಮತ್ತು ಧರ್ಮದ ಅವಿನಾಭಾವ ಒಕ್ಕೂಟದಿಂದ ಮನುಕುಲಕ್ಕೆ ದೊರೆಯಬಹುದಾದ ಒಳಿತಿನ ಮೊತ್ತವನ್ನೇ ಈ ಪ್ರಬಂಧದಲ್ಲಿ ಕಾಣಬಹುದಾಗಿದೆ.

ಪರಾಮರ್ಶನ ಗ್ರಂಥಗಳ ಪಟ್ಟಿ:

1. ತೈಲೂರು ವೆಂಕಟಕೃಷ್ಣ - 2002, ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ. ಬಾನು ಪ್ರಕಾಶನ, ಮಂಡ್ಯ.

2. ಡಾ.ಎಚ್.ತಿಪ್ಪೇರುದ್ರಸ್ವಾಮಿ - 1968, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ಕೆ.ವಿ. ಮೂರ್ತಿ ಪ್ರಕಾಶಕರು, ಮೈಸೂರು - 04

3. ಮೇಲುಕೋಟೆ ಥ್ರೂ ದಿ ಏಜಸ್ - 1998, ಸಂಸ್ಕೃತ ಸಂಶೋಧನಾ ಸಂಸ್ಥೆ, ಮೇಲುಕೋಟೆ.

4. ಸಂಪಾದಕರು ಡಾ. ದೇಜೆಗೌ, 1993, ಸಿರಿಯೊಡಲು, 63ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ.

5. ಭಾರತದ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ, ಮಂಡ್ಯ ಜಿಲ್ಲೆ. 2003. ಸಂಪಾದಕರು ಟಿ.ಎ.ಪಾರ್ಥಸಾರಥಿ.

6. ಡಾ.ಕೆ.ರಾಜೇಶ್ವರಿಗೌಡ, 2001. ಆದಿಚುಂಚನಗಿರಿ ಒಂದು ಸಾಂಸ್ಕೃತಿಕ ಅಧ್ಯಯನ, ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠ, ಮಂಡ್ಯ ಜಿಲ್ಲೆ.

7. ನಾರದೀಯ ಪುರಾಣಾಂತರ್ಗತ ಯಾದವಗಿರಿ ಮಹಾತ್ಮ್ಯ. 1936. ಸಂಸ್ಕೃತ ಸಂಶೋದನಾ ಸಂಸ್ಥೆ, ಮೇಲುಕೋಟೆ.

8. ಹರಿಪ್ರಿಯ, 2004. ಮೇಲುಕೋಟೆ ಪರಿಚಯ, ಸಂಸ್ಕೃತಿ ಪ್ರಕಾಶನ, ಮೈಸೂರು.

9. 'ಭಾರತೀಯ ಸಂಸ್ಕೃತಿ ದರ್ಶನ' 1962, ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ಮೆಸೂರು ಸರ್ಕಾರ, ಬೆಂಗಳೂರು.

10. ಡಾ.ದೇ.ಜ.ಗೌ. ಸಂ.1994. ಸುವರ್ಣ ಮಂಡ್ಯ. 63ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಮಂಡ್ಯ.

11. ಡಾ|| ಬಾ.ರಾ.ಗೋಪಾಲ್, ಸಂ.1997. ಎಪಿಗ್ರಾಫಿಯ ಕರ್ನಾಟಕ, ಸಂಪುಟ - 6, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

12. ಕನ್ನಡ ವಿಶ್ವಕೋಶ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ - 1979.

13. ಶ್ರೀ ಆಸೂರಿ ಶ್ರೀನಿವಾಸಯ್ಯಂಗಾರ್ಯರು. 1956, ಶ್ರೀ ಯಾದವಗಿರಿ ಮಹಾತ್ಮ್ಯ, ಪ್ರಕಾಶಕರು, ಆಸೂರಿ ಸಂಪತ್ಕುಮಾರಾಚಾರ್ಯರು, ಆಸೂರಿ ಶ್ರೀನಿವಾಸಯ್ಯಂಗಾರ್ಯರು.

14. ಎಚ್.ಪುಟ್ಟಸ್ವಾಮಿ, 1986, ಶ್ರೀ ವೈಷ್ಣವ ಧರ್ಮ ಸಂಗ್ರಹ.

15. ಶ್ರೀ ರಾಮಾನುಜಯ್ಯಂಗಾರ್ಯ 1934, ಶ್ರೀ ಯಾದವಗಿ ತಿರುನಾರಾಯಣ ಪುರದ ಯಾತ್ರೆಯು, ಶ್ರೀ ಶಾರದಾ ವಿಲಾಸ ಮುದ್ರಣಾಲಯ ಅರಸಿಕೆರೆ.

16. ಡಾ|| ಎಚ್.ಎಂ.ನಾಗರಾಜು 2006, ಯದುಗಿರಿಯ ನಾಡು, ಹೇಮಶ್ರೀ ಪ್ರಕಾಶನ, ಮೈಸೂರು.

17. ಡಾ|| ಬಾ.ರಾ.ಗೋಪಾಲ್, 1984, ಕರ್ನಾಟಕದಲ್ಲಿ ಶ್ರೀ ರಾಮಾನುಜಾಚಾರ್ಯರು, ನಿರ್ದೇಶಕರು, ಪ್ರಸಾರಂಗ ಮಾನಸಗಂಗೋತ್ರಿ, ಮೈಸೂರು.

18. ಸ್ವಾಮಿ ರಾಮಕೃಷ್ಣಾನಂದ 2006, ಶ್ರೀ ರಾಮಾನುಜರ ಜೀವನ ಚರಿತ್ರೆ, ಅಧ್ಯಕ್ಷರು, ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ, ಮೈಸೂರು.

19. ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್ 1913.

20. ಡಾ|| ಬಾ.ರಾ.ಗೋಪಾಲ್ ಸಂ.1977, ಎಪಿಗ್ರಾಫಿಯ ಕರ್ನಾಟಕ ಸಂಪುಟ-5, ಕನ್ನಡ ಅಧ್ಯನ ಸಂಸ್ಥೆ, ಮೈಸೂರು ವಿಶ್ವ ವಿದ್ಯಾನಿಲಯ.

21. ಕೆ.ಅನಂತರಾಮು 1982, ಸಕ್ಕರೆಯ ಸೀಮೆ, ಅನಂತ ಪ್ರಕಾಶನ, ದೇವಾಂಬ ಅಗ್ರಹಾರ, ಮೈಸೂರು.

22. ಮಳಲಿ ವಸಂತ್‌ಕುಮಾರ್ ಸಂ-1996, ಅಖಿಲ ಭಾರತ 65ನೇ ಕನ್ನಡ ಸಾಹಿತ್ಯ ಸಮ್ಮೇಳನ.

23. ವಿಶಿಷ್ಟಾದ್ವೈತ ದರ್ಪಣ, ಭಾಗ-1, 1986, ಗ್ರಂಥಕರ್ತ ಮತ್ತು ಪ್ರಕಾಶಕರು ಶೇಟ್ಪಲೂರ್ ಶ್ರೀನಿವಾಸ ರಂಗಾಚಾರ್ಯ.

24. ಅ.ಜಯರಾಮ ವೆಂಕಟಾಚಾರ್ಯ 1933, ವಿಶಿಷ್ಟಾದ್ವೈತ ದೀಪಿಕೆ. ಪ್ರ.ಉಭಯ ವೇದಾಂತ ಪ್ರವರ್ತನ ಸಭೆ.

25. ಪ್ರೊ|| ಎಸ್.ಕೆ.ರಾಮಚಂದ್ರರಾವ್ 1983. ಕನ್ನಡ ನಾಡಿನ ಧಾರ್ಮಿಕ ಪರಂಪರೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

26. ಎಂ.ಜಿ.ನಾಗರಾಜ್, ಪಿ.ವಿ.ಕೃಷ್ಣಮೂರ್ತಿ, ಸಂಪುಟ20/2005, 'ಇತಿಹಾಸ ದರ್ಶನ', ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

27. ಕೆ.ಎನ್.ತಿಲಕ್ ಕುಮಾರ್, ಸಂ. ಮಾರ್ಚ್ 20, 2008, ಸುಧಾ (ಮಾಸ ಪತ್ರಿಕೆ)

28. ಆರ್.ವಸಂತ್ ಕುಮಾರ್, 'ದಿ ನಾರಾಯಣ ಸ್ವಾಮಿ ಟೆಂಪಲ್ ಅಟ್ ಮೇಲುಕೋಟೆ', 1991. ಪ್ರಾಚ್ಯವಸ್ತು ಮತ್ತು ಸಂಗ್ರಹ ನಿರ್ದೇಶನಾಲಯ, ಮೈಸೂರು.


29. ಡಾ.ದೇ.ಜ.ಗೌ, ಸಂ. 1981, ಯದುಗಿರಿ ಪುತಿನ ಅಭಿನಂಧನಾ ಗ್ರಂಥ.

30. 'ತಾಳಪತ್ರ ಗ್ರಂಥಗಳ ಕೈಪಿಡಿ ಹಾಗೂ ದಾಖಲೆಗಳ ಮಾಹಿತಿ', 2002, ಕರ್ನಾಟಕ ರಾಜ್ಯ ಪತ್ರಗಾರ ಇಲಾಖೆ, ಬೆಂಗಳೂರು.

31. 'ಪ್ರಪನ್ನಾಮೃತ', ಸಂಸ್ಕೃತ ಸಂಶೋಧನಾ ಸಂಸತ್, 2005


32. ಡಾ॥ ಎಂ. ಚಿದಾನಂದ ಮೂರ್ತಿ 1966, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.

33. ಡಾ. ಕೆ. ಬಿ. ಶಿವತಾರಕ್ 2001, ಕರ್ನಾಟಕ ಪುರಾತತ್ವ ನೆಲೆಗಳು. ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಪ್ರಸಾರಾಂಗ.



1. ಕಲ್ಯಾಣಿ
2. ಗುಹಾಂತರ ದೇವಾಲಯ
3. ಮೈತ್ರೇಯ ತೀರ್ಥ
4. ಗಜೇಂದ್ರ ವರ್ಧನ ಮಂಟಪ
5. ಧಾರಾ ಮಂಟಪ
6. ಭುವನೇಶ್ವರಿ ಮಂಟಪ
7. ಅಹೋಬಲ ಮಠ
8. ಮಂಟಪ
9. ಜ್ಞಾನ - ಅಶ್ವತ್ಥ ವೃಕ್ಷ
10. ಪೂರ್ಣಯ್ಯನ ಹೊಂಡ
11. ಗಂಗರ ಕಂಬಗಳು
12. ಅಲಗಿಯಮನ್ನಾಳ ಮಠ
13. ರಾಮ ದೇವಾಲಯ
14. ಪರಕಾಲ ಮಠ
15. ವೆಂಕಟರಮಣ ದೇವಾಲಯ
16. ವರಾಹ ದೇವಾಲಯ
17. ಬೈರಾಗಿ ಮಠ
18. ಬಿಂದುಮಾಧವ ದೇವಾಲಯ
19. ನರಸಿಂಹನ ಬೆಟ್ಟ
20. ವಿನಾಯಕ
21. ಕಾಳಿ ದೇವಸ್ಥಾನ
22. ತೆಪ್ಪ ಕೊಳ
23. ಕೇಶವ ದೇವಾಲಯ
24. ತಿರುವಂಗಿ ಆಳ್ವಾರ್ ದೇವಾಲಯ
25. ಜೀಯರ್ ಸನ್ನಿಧಿ
26. ಅರಮನೆ ತೋಟ
27. ನಮ್ಮಾಳ್ವಾರ್ ಗುಡಿ
28. ವೇದಾಂತ ದೇಶಿಕ ದೇವಾಲಯ
29. ಗರುಡಗಂಬ
30. ಬದರಿನಾರಾಯಣ ದೇವಾಲಯ
31. ಯತಿರಾಜ ಮಠ
32. ಚೆಲುವರಾಯ ಸ್ವಾಮಿ ದೇವಾಲಯ
33. ಶಾಂಢಿಲ್ಯ ಗುಡಿ
34. ನಿಂಗಣ್ಣನ ಕೊಳ
35. ಪಟ್ಟಾಭಿರಾಮ ದೇವಾಲಯ
36. ಆಂಜನೇಯ ದೇವಾಲಯ
37. ಪಾತ್ರೆ ತೊಳೆಯುವ ಕೊಳ
38. ಚೆಲುವರಾಜ ಕೊಳ
39. ಗೋಪಾಲರಾಯ ದ್ವಾರ
40. ಕುಲಶೇಖರ ಆಳ್ವಾರ್ ದೇವಾಲಯ
41. ಚಿಕ್ಕಯ್ಯನ ಕೊಳ
42. ವೇದ ಪುಷ್ಕರಣಿ
43. ನಂಜಿಯಾರ್ ಸನ್ನಿಧಿ
44. ವಾನಾಮಾಮಲೈ ಮಠ.

ನಾರಾಯಣ ಸ್ವಾಮಿ ದೇವಾಲಯದ ವಾಸ್ತು




1. ಗರ್ಭಗೃಹ
2. ಅರ್ಧ ಮಂಟಪ
3. ಮಹಾ ಮಂಟಪ
4. ಮುಖ ಮಂಟಪ
5. ಕತ್ತಲೆ ಪ್ರದಕ್ಷಿಣೆ
6. ವಿಶ್ವಕ್‌ಸೇನಾ ದೇವಾಲಯ
7. ಶ್ರೀ ಭಂಡಾರ
8. ಶೆಲ್ವ ಪಿಳ್ಳೆ ದೇವಾಲಯ
9. ಪಾತಾಳಾಂಕಣ
10. ವಾಹನ ಮಂಟಪ
11. ತಿರುಕ್ಕಚ್ಚಿನಂಬಿ ಮಂಟಪ
12. ರಂಗ ಮಂಟಪ
13. ಕೃಷ್ಣರಾಜ ಒಡೆಯರ್‌ದೇವಾಲಯ
14. ಅಡಿಗೆ ಮನೆ
15. ಶೇಕರಣಾ ಗೃಹ
16. ಪರಮಪದನಾಥ ದೇವಾಲಯ
17. ಚಕ್ರತ್ತಾಳ್ವಾರ್ ದೇವಾಲಯ
18. ತಿರುಕ್ಕಚ್ಚಿನಂಬಿ ದೇವಾಲಯ
19. ತಾಯಾರ್ ಗರ್ಭಗುಡಿ
20. ಮುಖ ಮಂಟಪ
21. ಮಹಾ ಮಂಟಪ
22. ಕೂರತ್ತಾಳ್ವಾರ್ ಗುಡಿ
23. ರಾಮಾನುಜರ ಗುಡಿ
24. ಯಾಗಶಾಲೆ
25. ಪಿಳ್ಳೆಲೋಕಾಚಾರ್ಯ ಗುಡಿ
26. ಮಹಾದ್ವಾರ
27. ದೇವಾಲಯ ಕಛೇರಿ
28. ಸಂಸ್ಕೃತ ಪಾಠಶಾಲೆ
29. ಹೊರಗಿನ ಕೈಸಾಲೆ.

ಛಾಯಚಿತ್ರಗಳು




ಕಲ್ಯಾಣಿಯಿಂದ
ಯೋಗನರಸಿಂಹಸ್ವಾಮಿ
ದೇವಸ್ಥಾನದ ನೋಟ

ಶ್ರೀ ಚಲುವನಾರಾಯಣ
ಸ್ವಾಮಿ ದೇವಾಲಯದ
ಮುಂಭಾಗ





ಶ್ರೀರಾಮಾನುಜಾಚಾರ್ಯರು




ಅಪೂರ್ಣ ಗುಹಾಂತರ ದೇವಾಲಯ




ಅಪೂರ್ಣ ಗುಹಾಂತರ ದೇವಾಲಯ



ಏಕಶಿಲಾ ಗಣಪತಿ



ಅಕ್ಕ - ತಂಗಿ ಕೋಳ



ರಾಯಗೋಪುರ




ಭುವನೇಶ್ವರಿ
ಮಂಟಪ









ಪ್ರಾಗೈತಿಹಾಸ ಕಾಲದ
ಮಾನವ ರೇಖಾಚಿತ್ರ





ರಂಗಮಂಟಪದ ಕಂಬದಲ್ಲಿರುವ ಶಿಲ್ಪಗಳು

